ಒಪ್ಪಿಕೊಂಡಿದ್ದೇವೆ. ನಮ್ಮ ಒಂದು ಆರ್ಥಿಕ ಉನ್ನತಿ ಸಲುವಾಗಿ ನಾವು ಈಗ ಎಲ್ಲ ಕಡೆ ಸಹಕಾರಿ ಪದ್ಧತಿಯನ್ನು ಅನುಸರಿಸುತ್ತಿದ್ದೇವೆ. ಪ್ರತಿಯೊಂದು ಕ್ಷೇತ್ರದಲ್ಲಿಯೂ ನಾವು ಸಹಕಾರಿ ಪದ್ಧತಿಯನ್ನು ಹಮ್ಮಿಕೊಂಡಿದ್ದೇವೆ. ಈಗ ನಮ್ಮ ದೇಶದಲ್ಲಿರುವ ರೈತ ಸಮುದಾಯ, ದುರ್ಬಲ ವರ್ಗದ ಜನರು, ಕೃಷಿಕರು, ಕೃಷಿ ಕಾರ್ಮಿಕರು ಹಾಗೂ ಉದ್ಯೋಗದಲ್ಲಿದ್ದುಕೊಂಡು ನಮ್ಮ ಒಂದು ಔದ್ಯೋಗಿಕ ಶಕ್ತಿಯನ್ನು ಬೆಳೆಸುವಂತಹ ಜನರು ಏನಿದ್ದಾರೆ, ಇವರೆಲ್ಲರ ಬಡತನವನ್ನು ನಾವು ನಿರ್ಮೂಲ ಮಾಡಬೇಕಾಗಿದೆ. ಏದೇ ಮಾತನ್ನು ನಾವು ನಮ್ಮ ಚುನಾವಣಾ ಘೋಷಣಾ ಪತ್ರದಲ್ಲಿ ಹೇಳಿ ಜನತೆಯಿಂದ ಆರಿಸಿ ಬಂದಿದ್ದೇವೆ, ಚುನಾವಣೆಯ ಸಮಯದಲ್ಲಿ ನಾವು ಜನತೆಗೆ ನಿರುದ್ಯೋಗವನ್ನು ನಿವಾರಣೆ ಮಾಡುತ್ತೇವೆ ಹಾಗೂ ಬಡತನವನ್ನು ಹೋಗಿಸುತ್ತೇವೆಂದು ಹೇಳಿರುವುದರಿಂದ ಈ ನಮ್ಮ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಇದನ್ನು ಯಾವ ರೀತಿಯಿಂದ ಜಾರಿ ಮಾಡಬೇಕು ಎಂಬುದನ್ನು ನಾವು ನೋಡಬೇಕಾಗಿದೆ. ನಮ್ಮ ರಾಜ್ಯದಲ್ಲಿ ಸಹಕಾರಿ ಪದ್ಧತಿಯಲ್ಲಿ ಸುಮಾರು ೨೨ ಸಾವಿರ ಸಹಕಾರಿ ಸಂಘಗಳು ಸ್ಥಾಪನೆಯಾಗಿವೆ. ೩೫ ಲಕ್ಷ ಕೃಷಿಕರ ಪೈಕಿ ೩೨ ಲಕ್ಷ ಕೃಷಿಕರು ಈ ಸಹಕಾರ ಸಂಘಗಳಲ್ಲಿ ಸದಸ್ಯರಾಗಿದ್ದಾರೆ. ಸುಮಾರು ೮೦ ಲಕ್ಷ ಜನರು ಅಂದರೆ ನಮ್ಮ ಜನಸಂಖ್ಯೆಯಲ್ಲಿ ಮೂರನೇ ಒಂದು ಭಾಗದಷ್ಟು ಜನರು ಈ ಸಹಕಾರ ಸಂಘಗಳನ್ನು ಅವಲಂಬಿಸಿದ್ದಾರೆ. ತಮ್ಮ ಒಂದು ಆರ್ಥಿಕ ಉನ್ನತಿ ಸಲುವಾಗಿ ಈ ಸಹಕಾರಿಸಂಘಗಳನ್ನು ಇವರು ತಮ್ಮ ನಿತ್ಯಜೀವನದಲ್ಲಿ ಅವಲಂಬಿಸಿದ್ದಾರೆ. ಇಂತಹವರ ಸಲುವಾಗಿ ಸರ್ಕಾರದವರು ಹಾಕಿಕೊಂಡಿರುವ ಕಾರ್ಯಕ್ರಮಗಳು ತುಂಬಾ ಸ್ವಾಗತಾರ್ಹವಾದುದು. ಎಲ್ಲರೂ ಇದಕ್ಕೆ ಮನ್ನಣೆ ಕೊಟ್ಟಿದ್ದಾರೆ. ನಮ್ಮ ಸಹಕಾರಿ ಕ್ಷೇತ್ರದಲ್ಲಿರುವಂತಹ ಅಧಿಕಾರಿಗಳು ಪ್ರಾಮಾಣಿಕವಾಗಿ ಹಾಗೂ ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿರುವುದನ್ನು ಇಡೀ ರಾಜ್ಯದ ಜನತೆ ಸರ್ವರೀತಿಯಿಂದಲೂ ಸ್ವಾಗತ ಮಾಡುತ್ತಿದ್ದಾರೆ. ಇವೊತ್ತಿನದಿವಸ ಕರ್ನಾಟಕ ರಾಜ್ಯದಲ್ಲಿ ಈ ಸಹಕಾರ ಖಾತೆ ಎಂಬುದು ಬಹಳ ಪ್ರಾಮುಖ್ಯವಾದಂಥ ಖಾತೆಯಾಗಿದೆ. ನನ್ನ ಮಿತ್ರರಾದಂಥ ಶ್ರೀ ನಾನಯ್ಯನವರು ಹೇಳಿದಂತೆ ಇಡೀ ಭಾರತ ದೇಶದಲ್ಲಿಯೇ ನಮ್ಮ ಕರ್ನಾಟಕ ರಾಜ್ಯವು ಸಹಕಾರಿ ಕ್ಷೇತ್ರದಲ್ಲಿ ಎರಡು ಅಥವಾ ಮೂರನೇ ಸ್ಥಾನದಲ್ಲಿದೆ. ಇದು ಇಡೀ ಭಾರತದಲ್ಲಿಯೇ ಮೊದಲನೆಯ ಸ್ಥಾನ ಪಡೆಯುವಂತಹ ರೀತಿಯಲ್ಲಿ ನಮ್ಮ ರಾಜ್ಯಸರ್ಕಾರ ಬಡವರ ಸಲುವಾಗಿ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಮಾನ್ಯ ಶ್ರೀಕಂಠಯ್ಯನವರಿಗೆ ಈ ಒಂದು ಸಹಕಾರಿ ಕ್ಷೇತ್ರದಲ್ಲಿ ಕೆಲಸ ಮಾಡಿದಂಥ ಅನುಭವವಿದೆ ಮತ್ತು ಒಳ್ಳೆಯ ಜ್ಞಾನ ಅವರಲ್ಲಿದೆ. ಇಂತಹವರು ಈ ಖಾತೆಯ ಮಂತ್ರಿಗಳಾಗಿ ಅನೇಕ ಒಳ್ಳೆಯ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ನಮ್ಮ ಉತ್ತರ ಕರ್ನಾಟಕದ ನಾಲ್ಕೈದು ಜಿಲ್ಲೆಗಳಲ್ಲಿ ೧೪ ನೂಲಿನ ಗಿರಣಿಗಳನ್ನು ಮಂಜೂರು ಮಾಡಿದ್ದಾರೆ. ಎರಡು ಸಕ್ಕರೆ ಕಾರ್ಖಾನೆಗಳನ್ನು ಮಂಜೂರು ಮಾಡಿದ್ದಾರೆ. ಇವೆಲ್ಲಾ ರಿಜಿಸ್ಟರ್ಡ್ ಆಗಿವೆ. ಆದರೆ ಇವುಗಳಿಗೆ ಸರ್ಕಾರ ಕೊಟ್ಟಿರುವ ೩ ಕೋಟಿ ರೂ. ಗಳನ್ನು ನೋಡಿದರೆ ಬಕಾಸುರನ ಬಾಯಿಗೆ ಒಂದು ತುಣುಕು ರೊಟ್ಟಿ ಹಾಕಿದಂತೆ ಆಗಿದೆ. ಒಂದು ನೂಲಿನ ಗಿರಣಿ ಸ್ಥಾಪನೆ ಮಾಡಲು ೮ ರಿಂದ ಹತ್ತು ಕೋಟಿ ರೂ. ಗಳು ಬೇಕಾಗಿರುತ್ತದೆ, ಅದೇರೀತಿ ಒಂದು ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡಲು ಸುಮಾರು ಹತ್ತು ಕೋಟಿ ರೂ. ಗಳು ಬೇಕಾಗುತ್ತದೆ. ಆದರೆ ಸರ್ಕಾರದವರು ಕೊಟ್ಟಿರುವುದು ಕೇವಲ ೩ ಕೋಟಿ ರೂಪಾಯಿಗಳು. ಮಾನ್ಯ ಮಂತ್ರಿಗಳು ಸಹಕಾರಿ ಕ್ಷೇತ್ರದಲ್ಲಿಯೇ ಬೆಳೆದುಬಂದವರಾದ ಕಾರಣ ಅವರಿಗೆ ಈ ಬಗ್ಗೆ ಎಲ್ಲ ರೀತಿಯ ಅನುಭವವೂ ಸಹ ಇದೆ. ಆದಕಾರಣ ಇದಕ್ಕೆ ಇಷ್ಟೊಂದು ಅಲ್ಪ ಮೊತ್ತದ ಹಣ ಸಾಕೇ ಎಂದು ವಿಚಾರ ಮಾಡಬೇಕು. ಇವೊತ್ತು ಒಂದು ಸ್ಥಳ ಖರೀದಿ ಮಾಡಲು ಹೊರಟರೆ ಎರಡು–ಮೂರು ವರ್ಷಗಳ ಹಿಂದೆ ಇದ್ದ ಬೆಲೆ ಇಲ್ಲ. ಇದರ ಜೊತೆಗೆ ಕಾರ್ಖಾನೆಗೆ ಬೇಕಾದ ಇಂಜಿನ್‌ಗಳ ಬೆಲೆಯೂ ಒಂದಕ್ಕೆ ನಾಲ್ಕು ಪಟ್ಟು ಜಾಸ್ತಿಯಾಗಿದೆ. ೧೯೭೭ರಲ್ಲಿ ಇಲ್ಲವೇ ೧೯೮೦ರಲ್ಲಿ ಈ ಬಗ್ಗೆ ಒಂದು ತೀರ್ಮಾನ ಮಾಡಿದ್ದರೆ, ಅದರ ಒಂದು ಚೌಕಟ್ಟಿನಲ್ಲಿಯೇ ಕೆಲಸ ಮಾಡಲು ಸಾಧ್ಯವಾಗುವುದಿಲ್ಲ, ಏಕೆಂದರೆ ಬೆಲೆಗಳು ಮೂರು–ನಾಲ್ಕು ಪಟ್ಟು ಜಾಸ್ತಿಯಾಗಿದೆ. ಈ ರೀತಿಯಿಂದ ವಿಚಾರ ಮಾಡಿದಾಗ ಸರ್ಕಾರದವರು ಕೊಟ್ಟಿರುವ ಹಣ ಬಹಳ ಕಡಿಮೆ ಎಂದು ಹೇಳಬೇಕಾಗುತ್ತದೆ. ನಮ್ಮ ಸಹಕಾರ ಮಂತ್ರಿಗಳಲ್ಲಿ ನಾನು ನಮ್ರಪೂರ್ವಕವಾಗಿ ಕೇಳಿಕೊಳ್ಳುವುದೇನೆಂದರೆ, ನಮ್ಮ ರಾಜ್ಯದಲ್ಲಿ ಔದ್ಯೋಗಿಕ ಶಕ್ತಿ ಬೆಳೆದು ಬರಬೇಕಾದರೆ ಅದು ಸಹಕಾರಿ ಪದ್ಧತಿಯಿಂದ ಬೆಳೆದುಬರಬೇಕಾದ ಕಾರಣದಿಂದ ತಾವು ಬಂಡವಾಳಶಾಹಿ ಜನರಿಗೆ ಕಾರ್ಖಾನೆಗಳನ್ನು ತೆರೆಯಲು ಅವಕಾಶ ಕೊಡಬೇಡಿ ಮತ್ತು ಆ ಮೂಲಕ ಬಡವರ ಶೋಷಣೆ ಮಾಡುವಂತಹ ಒಂದು ಸಮಾಜವನ್ನು ತಾವು ಕಟ್ಟಬೇಡಿ ಎಂದು ಕೇಳಿಕೊಳ್ಳುತ್ತೇನೆ. ಬಡವರನ್ನು, ಕೂಲಿಗಾರರನ್ನು ಮತ್ತು ರೈತರನ್ನು ತಾವು ಬಂಡವಾಳಶಾಹಿಗಳ ಕೈಗೆ ಕೊಡಬೇಡಿ.

ಅವರ ಕೈಗೆ ಕೊಟ್ಟರೆ ಈ ಜನರನ್ನು ಅವರು ಶೋಷಣೆ ಮಾಡುತ್ತಾರೆ. ಆದಕಾರಣ ಸಹಕಾರ ಪದ್ಧತಿಯ ಮೂಲಕವೇ ಇನ್ನೂ ೨೦ ಗಿರಣಿಗಳನ್ನು ಪ್ರಾರಂಭ ಮಾಡಿ ಹಾಗೂ ಈ ದಿಕ್ಕಿನಲ್ಲಿ ನಮ್ಮ ಅಧಿಕಾರಿಗಳಿಗೆ ತಾವು ಪ್ರೋತ್ಸಾಹ ಕೊಡಿ. ಇದರಿಂದ ಅಧಿಕಾರಿಗಳು ರೈತರೊಡನೆ ಮತ್ತು ಶ್ರೀಸಾಮಾನ್ಯರ ಜೊತೆಯಲ್ಲಿ ಬೆರೆತು ನಮ್ಮ ಕರ್ನಾಟಕ ರಾಜ್ಯದಲ್ಲಿ ಔದ್ಯೋಗಿಕ ಶಕ್ತಿಯನ್ನು ಬೆಳೆಸುತ್ತಾರೆ. ಬೆಳಗಾಂನಲ್ಲಿ ಈಗ ೫ ಸಕ್ಕರೆ ಕಾರ್ಖಾನೆಗಳಿವೆ. ನಮ್ಮ ಅಥಣಿ ತಾಲ್ಲೂಕ್‌ನಲ್ಲಿಯೇ ೮ ಲಕ್ಷ ಎಕರೆಯಲ್ಲಿ ಕಬ್ಬನ್ನು ಬೆಳೆಯುತ್ತಿದ್ದಾರೆ. ಆದಕಾರಣ ಅಲ್ಲಿ ಇನ್ನೂ ಎರಡು ಸಕ್ಕರೆ ಕಾರ್ಖಾನೆಗಳು ಬರುವುದಕ್ಕೆ ಸಾಧ್ಯವಿದೆ. ಈಗ ಕಬ್ಬನ್ನು ಬೆಳೆದವರು ಮಾರಾಟ ಮಾಡಲು ಮಹಾರಾಷ್ಟ್ರದ ಕಡೆ ಅಲೆಯುತ್ತಿದ್ದಾರೆ. ಕಬ್ಬನ್ನು ಬೆಳೆದು ೧೮ ತಿಂಗಳಾದರೂ ಸಹ ಅದನ್ನು ಕೊಳ್ಳುವವರೇ ಇಲ್ಲದಂತೆ ಆಗಿದೆ. ಆದಕಾರಣ ಅಲ್ಲಿ ಇನ್ನೂ ಎರಡು ಕಾರ್ಖಾನೆಗಳನ್ನು ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವರಲಕ್ಷ್ಮಿ ಹತ್ತಿಯನ್ನು ಧಾರವಾಡ, ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ರೈತರು ಬೆಳೆಯುತ್ತಿದ್ದಾರೆ. ಮಲಪ್ರಭಾ ಯೋಜನೆಯ ಕೆಳಗೆ ನೀರಾವರಿಯಾಗುವಂತಹ ಜಮೀನುಗಳಲ್ಲಿ ಒಳ್ಳೆಯ ಉತ್ಕೃಷ್ಟವಾದಂಥ ಹತ್ತಿಯನ್ನು ಬೆಳೆಯುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ನಮ್ಮ ಸೌದತ್ತಿ ಭಾಗದಲ್ಲಿ ಸುಮಾರು ೨೦ ಸಾವಿರ ಎಕರೆಗಳಲ್ಲಿ ಹತ್ತಿಯನ್ನು ಬೆಳೆಯುತ್ತಿದ್ದಾರೆ. ಈ ರೀತಿ ಬೆಳೆದ ಹತ್ತಿಯನ್ನು ಮಾರ್ಕೆಟ್ ಯಾರ್ಡಿಗೆ ತಂದರೆ ಅಲ್ಲಿ ಇಡುವುದಕ್ಕೆ ಜಾಗವಿಲ್ಲ ಮತ್ತು ಅದನ್ನು ಖರೀದಿ ಮಾಡುವವರೂ ಸಹ ಇಲ್ಲ. ಇದೇ ಕಾರಣದಿಂದ ಹತ್ತಿ ಬೆಲೆ ಇಳಿದು ಹೋಗುತ್ತಿದೆ. ಆದಕಾರಣ ಇದರ ಕಡೆಗೆ ಮಾನ್ಯ ಮಾರುಕಟ್ಟೆ ಮಂತ್ರಿಗಳು ಗಮನಹರಿಸಬೇಕೆಂದು ಮತ್ತು ರೈತರಿಗೆ ಸರಿಯಾದ ಬೆಲೆ ಸಿಗುವಂತಹ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮಲ್ಲಿ ಜಿನ್ನಿಂಗ್ ಫ್ಯಾಕ್ಟರಿ ಇದೆ ಆದರೆ ಪ್ರೊಸೆಸಿಂಗ್ ಫ್ಯಾಕ್ಟರಿ ಇಲ್ಲ. ಇದನ್ನು ಪ್ರಾರಂಭ ಮಾಡಬೇಕೆಂದು ನಾನು ೧೯೭೮ನೇ ಇಸವಿಯಿಂದಲೂ ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಆದರೆ ಇದರ ಕಡೆಗೆ ಸರ್ಕಾರ ಗಮನ ಕೊಟ್ಟಿಲ್ಲ. ಕಡುಬಡವರಿಂದ ಆರಿಸಿ ಬಂದ ಜನತಾ ಪ್ರತಿನಿಧಿಗಳ ಭಾವನೆಯನ್ನು ತಾವು ತಿಳಿದುಕೊಳ್ಳಬೇಕೇ ಹೊರತು ಯಾರೋ ಮುಂಜಾನೆ ಬಂದು ಅರ್ಜಿ ಕೊಟ್ಟು ಸಾಯಂಕಾಲ ಮಂಜೂರಾತಿ ಪಡೆದುಕೊಳ್ಳುವವರಿಗೆ ಇಂತಹ ಫ್ಯಾಕ್ಟರಿಯನ್ನು ತೆರೆಯಲು ತಾವು ಅವಕಾಶ ಕೊಡಬೇಡಿ ಎಂದು ಹೇಳುತ್ತೇನೆ. ಇದೂ ಸಹ ಸಹಕಾರಿ ರಂಗದಲ್ಲಿ ಸ್ಥಾಪನೆಯಾದರೆ ರೈತರಿಗೆ ಹೆಚ್ಚಿನ ಬೆಲೆ ಸಿಗುತ್ತದೆಂದು ಹೇಳುತ್ತೇನೆ.

ಈವೊತ್ತಿನದಿವಸ ಸವದತ್ತಿಯಲ್ಲಿ ಜಿನ್ನಿಂಗ್ ಫ್ಯಾಕ್ಟರಿಯನ್ನು ಕೋ ಆಪರೇಟೀವ್ ಸೊಸೈಟಿ ಮುಖಾಂತರ ನಡೆಸುತ್ತಿದ್ದಾರೆ. ಮತ್ತೆ ಇನ್ನೂ ೧೮ ಕಾರ್ಖಾನೆಗಳನ್ನು ಮಂಜೂರು ಮಾಡಬೇಕೆಂದು ಶಿಪಾರಸ್ಸು ಮಾಡಿದ್ದರೂ ಸಹ ತಾವು ಅದಕ್ಕೆ ಲಕ್ಷ್ಯ ಕೊಟ್ಟಿಲ್ಲ. ಈ ರಿಕಾರ್ಡ್‌ಗಳು ಯಾವ ಅಧಿಕಾರಿಗಳ ಕೈಯಲ್ಲಿ ಬಿದ್ದಿದೆಯೋ ಗೊತ್ತಿಲ್ಲ. ಇದರ ಜೊತೆಗೆ ಸವದತ್ತಿಯಲ್ಲಿ ಪ್ರೆಸ್ಸಿಂಗ್ ಫ್ಯಾಕ್ಟರಿಯೂ ಸಹ ತೀವ್ರವಾಗಿ ಆಗಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಬಯಸುತ್ತೇನೆ.

ಎರಡನೆಯದಾಗಿ ಅತಿ ಮಹತ್ವವಾದ ವಿಚಾರವಾದ ನೂಲಿನ ಗಿರಣಿಗೆ ಸಂಬಂಧಪಟ್ಟಂತೆ ಹೇಳುತ್ತೇನೆ. ಈ ನೂಲಿನ ಗಿರಣಿಯನ್ನು ಸರ್ಕಾರವೇ ವಹಿಸಿಕೊಳ್ಳಬೇಕು ಎಂದು ಹೇಳುತ್ತೇನೆ. ಏತಕ್ಕೆಂದರೆ ಅಲ್ಲಿ ಕೆಲವರು ಸಿಂಡಿಕೇಟ್ ಬ್ಯಾಂಕ್‌ನಲ್ಲಿ ಅಥವಾ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ತಮಗೆ ಎಲ್ಲಿ ಸಾಲ ಸಿಗುತ್ತದೋ ಅಲ್ಲಿ ತೆಗೆದುಕೊಳ್ಳಲಿಕ್ಕೆ ಹತ್ತಿದ್ದಾರೆ. ಈ ಒಂದು ಕಾರ್ಖಾನೆ ಬೆಳಗಾಂನಲ್ಲಿ ಮೊಟ್ಟ ಮೊದಲು ಆಗಬೇಕಾದರೆ ೨೨ ವರ್ಷಗಳ ಕಾಲ ಹಿಡಿಯಿತು. ಒಬ್ಬ ರೈತ ಇದಕ್ಕಾಗಿ ೨೨ ವರ್ಷದ ಹಿಂದೆ ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದ, ಅದನ್ನು ತೀರಿಸಲು ಆ ಹಣಕ್ಕೆ ೮ ಸಾವಿರ ರೂಪಾಯಿವರೆಗೆ ಬಡ್ಡಿಯನ್ನೇ ತುಂಬಬೇಕಾಯಿತು. ಆದುದರಿಂದ ಅವರುಗಳು ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಳ್ಳುವುದಕ್ಕೆ ಆಸ್ಪದ ಕೊಡಬೇಡಿ ಎಂದು ನಾನು ಹೇಳುತ್ತೇನೆ. ಒಂದು ಷೇರು ಬೇಕಾದರೆ ೫೦೦ ರೂಪಾಯಿ ಇಡುವ ಬದಲು ೨೦೦ ರೂಪಾಯಿ ಇಡಲಿ, ಮತ್ತು ಆ ಸಂಸ್ಥೆಗೆ ಒಂದು ಸಾವಿರ ಷೇರ್‌ಹೋಲ್ಡರ್ಸ್ ಆಗುವ ಬದಲು ೧೦ ಸಾವಿರ ಜನರು ಆಗಲಿ, ನಾನು ಬೇಡ ಅನ್ನುವುದಿಲ್ಲ. ಒಟ್ಟಿನಲ್ಲಿ ಬ್ಯಾಂಕುಗಳಲ್ಲಿ ಅವರು ಸಾಲ ತೆಗೆದುಕೊಳ್ಳುವುದಕ್ಕೆ ಅವಕಾಶ ಕೊಡಬೇಡಿ, ಒಬ್ಬ ರೈತ ಈವೊತ್ತಿನ ದಿವಸ ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಂಡರೆ ಇನ್ನು ೨-೩ ವರ್ಷದೊಳಗೆ ಅದಕ್ಕೆ ಬಡ್ಡಿ ಬಡ್ಡಿ ಸೇರಿ, ಚಕ್ರ ಬಡ್ಡಿ ಸೇರಿ ೪-೫ ಸಾವಿರ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ದೇಶದಲ್ಲಿ ರೈತನೇ ಬೆನ್ನೆಲುಬು ಎಂದು ಹೇಳುವಾಗ ಆ ರೈತನ ಬೆನ್ನು ಮುರಿಯುವಂಥಾ ಕೆಲಸಕ್ಕೆ ಹೋಗಬಾರದು ಎಂದು ಕೇಳಿಕೊಳ್ಳುತ್ತೇನೆ. ಆತನು ಬೆವರುಸುರಿಸಿಕೊಂಡು ದುಡಿಯುವಾಗ ನಾವು

ಸಹಕಾರೀ ಕ್ಷೇತ್ರದಲ್ಲಿ ಏನು ಒಂದು ತತ್ವವನ್ನು ಹಾಕಿಕೊಂಡಿದ್ದೇವೋ ಅದರಂತೆ ಹೋಗಿ ಅವನ ಆರ್ಥಿಕ ಸ್ಥಿತಿ ಉತ್ತಮ ಮಾಡಬೇಕೇ ವಿನಾ ಬ್ಯಾಂಕ್‌ಗಳಿಗೆ ಹೋಗಿ ಅವನನ್ನು ಮತ್ತೆ ಸಾಲಗಾರನಾಗಿ ಮಾಡುವಂಥಾ ಒಂದು ಅನಿಷ್ಟ ಪದ್ಧತಿಗೆ ನಾವು ಹೋಗಬಾರದು, ಅಂಥಾದ್ದಕ್ಕೆ ಯಾರೂ ಸಹ ಪ್ರೋತ್ಸಾಹವನ್ನೂ ಸಹ ಕೊಡಬಾರದು. ಈವೊತ್ತಿನ ದಿವಸ ಅಸಿಸ್ಟೆಂಟ್ ರಿಜಿಸ್ಟ್ರಾರ್, ಡೆಪ್ಯೂಟಿ ರಿಜಿಸ್ಟ್ರಾರ್, ಜಾಯಿಂಟ್ ರಿಜಿಸ್ಟ್ರಾರ್ ಅವರು ಬ್ಯಾಂಕ್‌ನವರನ್ನು ಕರೆಸಿ ಈ ಸಹಕಾರೀ ಕ್ಷೇತ್ರಕ್ಕೆ ಸಾಲ ಕೊಡಿಸುವ ಪದ್ಧತಿ ಹೋಗಬೇಕು, ಅವರಿಗೆ ಸಾಲ ಕೊಡಿ ಎಂದು ನೀವೇ ಹೇಳುವುದಕ್ಕೆ ಹಕ್ಕಿದೆಯೇ ? ಒಂದು ವೇಳೆ ಸಾಲ ತೆಗೆದುಕೊಂಡರೆ ಅವರು ಆ ಕಾರ್ಖಾನೆಯನ್ನು ೨-೩ ವರ್ಷದಲ್ಲಿ ರೂಢಿಸಿಕೊಳ್ಳುವುದಕ್ಕಾಗುತ್ತದೆಯೇ ? ಆ ರೈತರಿಗೆ ಏನಾದರೂ ಡಿವಿಡೆಂಡ್ ಸಿಗುತ್ತದೆಯೇ ? ಅವರು ತೆಗೆದುಕೊಂಡಿರತಕ್ಕಂಥಾ ಸಾಲವನ್ನು ೨-೩ ವರ್ಷದಲ್ಲಿ ತೀರಿಸುವುದಕ್ಕಾಗುತ್ತದೆಯೇ ? ಆಗುವುದಿಲ್ಲ. ಯಾರೇ ಆಗಲಿ ಸಾಲ ತೆಗೆದುಕೊಂಡು ಕಾರ್ಖಾನೆ ಸ್ಥಾಪನೆ ಮಾಡುವುದಾದರೆ ಅದರ ಸಾಲವನ್ನು ತೀರಿಸಬೇಕಾದರೆ ೧೦ ವರ್ಷವಾದರೂ ಬೇಕು, ಇಲ್ಲವೇ ಕೊನೇ ಪಕ್ಷ ೫ ವರ್ಷವಾದರೂ ಬೇಕು, ಅದುವರೆಗೆ ಒಬ್ಬ ರೈತ ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಂಡಿದ್ದರೆ, ಕೊನೆಯವರೆಗೆ ೩-೪ ಸಾವಿರ ರೂಪಾಯಿ ಬಡ್ಡಿ ಕೊಡಬೇಕಾಗುತ್ತದೆ, ಯಾವ ಕಾರ್ಖಾನೆ ಆಗಲಿ ಸರಿಯಾದ ಉತ್ಪತ್ತಿ ಬರಬೇಕಾದರೆ ಕೊನೇ ಪಕ್ಷ ೫ ವರ್ಷವಾದರೂ ಬೇಕು. ಅದಕ್ಕಿಂತ ಕಡಿಮೆ ಅವಧಿಯಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಇದರಿಂದ ರೈತನಿಗೆ ಹೊರೆಯಾಗುತ್ತದೇ ವಿನಾ ಪ್ರಯೋಜನವಾಗುವುದಿಲ್ಲ. ಈ ಬಗ್ಗೆ ತಾವು ಗಮನ ಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ವಿಚಾರ ಹೇಳುವುದಾದರೆ, ಕಂದಾಯ ಇಲಾಖೆಯಲ್ಲಿ ಆ ರೈತನಿಗೆ ಯಾವ ರೀತಿಯಾಗಿ ಪಟ್ಟಾ ಕೊಡುತ್ತಾರೋ ಅದೇ ರೀತಿಯಾಗಿ ಈ ಸಹಕಾರೀ ಕ್ಷೇತ್ರದಲ್ಲಿರುವವರಿಗೂ ಪಟ್ಟಾ ಕೊಡುವ ಒಂದು ಪದ್ಧತಿಯನ್ನು ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಹಾಗೆ ಮಾಡಿದರೆ ಅವನು ಮತ್ತೆ ಮತ್ತೆ ಸಾಲಕ್ಕೆ ಬರದಂತೆ ಮಾಡಬಹುದು. ಆ ಪಟ್ಟಾದಲ್ಲಿ ಎಲ್ಲಿ ಸಾಲತೆಗೆದುಕೊಂಡಿದ್ದಾನೆ, ಅದನ್ನು ತೀರಿಸಿದ್ದಾನೆಯೇ ಇಲ್ಲವೇ ಎನ್ನುವುದು ಸ್ಪಷ್ಟವಾಗಿ ಕಾಣುತ್ತದೆ. ಈ ಬಗ್ಗೆ ಸರ್ಕಾರದವರು ಯೋಗ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಈವೊತ್ತಿನ ದಿವಸ ಅಧಿಕಾರಿಗಳು ಒಂದು ಅನಿಶ್ಚಿತ ಪರಿಸ್ಥಿತಿಯಲ್ಲಿದ್ದಾರೆ, ಆ ರೈತನ ಆರ್ಥಿಕ ಕ್ಷೇತ್ರದ ಕಡೆಗೆ ಗಮನ ಹರಿಸುವುದಿಲ್ಲ. ಅತ್ತಕಡೆ ಗಮನಹರಿಸುವ ಹಾಗೆ ಮಾಡಬೇಕು, ತಮಗೆ ಹೇಳಬೇಕಾದರೆ, ಈವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸಹಕಾರೀ ಪದ್ಧತಿಯಲ್ಲಿ ಕೆಲಸ ಮಾಡುವಂಥ ೨೨ ಸಾವಿರ ಸೊಸೈಟಿಗಳು ಇವೆ. ಆ ಸೊಸೈಟಿಗಳಲ್ಲಿ ಕಾರ್ಯದರ್ಶಿಗಳು ಏನು ಕೆಲಸ ಮಾಡುತ್ತಿದ್ದಾರೆ, ಅವರುಗಳು ೨೨-೩೦ ವರ್ಷಗಳಿಂದಲೂ ಒಂದೇ ಕಡೆಯಲ್ಲೇ ಇದ್ದಾರೆ. ಕೆಲವರಿಗೆ ಅವರೇ ದುಡ್ಡು ಕೊಟ್ಟು ದೊಡ್ಡ ಸಾಹುಕಾರರಾಗಿದ್ದಾರೆ. ಆದುದರಿಂದ ಅವರನ್ನು ಬೇರೆಕಡೆಗೆ ಬದಲಾವಣೆ ಮಾಡಬೇಕು ಎಂದು ಹೇಳುತ್ತೇನೆ. ಮಾನ್ಯ ಬಸವಲಿಂಗಪ್ಪನವರು ಕಂದಾಯ ಮಂತ್ರಿಗಳಾಗಿದ್ದಾಗ ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ಅದಕ್ಕಿಂತ ಮೊದಲು ವಿಲೇಜ್ ಅಕೌಂಟೆಂಟರುಗಳು ಬ್ರಹ್ಮ ಇದ್ದ ಹಾಗೆ ಇದ್ದರು. ಅದೇ ರೀತಿಯಲ್ಲಿ ಮಾನ್ಯ ಶ್ರೀಕಂಠಯ್ಯನವರೂ ಸಹ ಈ ಸೊಸೈಟಿಗಳಲ್ಲಿರತಕ್ಕಂಥಾ ವಿಲೇಜ್ ಅಕೌಂಟೆಂಟ್‌ರುಗಳನ್ನು ಬದಲಾವಣೆ ಮಾಡಬೇಕು, ಹಾಗೆ ಮಾಡದೇ ಹೋದರೆ ಈ ಸಹಕಾರ ಸಂಘಗಳಲ್ಲಿ ಸುಧಾರಣೆ ತರಲಿಕ್ಕೆ ಸಾಧ್ಯವಾಗುವುದಿಲ್ಲ ಅನ್ನುವ ಮಾತನ್ನು ಹೇಳುತ್ತೇನೆ. ಜೊತೆಗೆ ನಾನು ಮೊದಲೇ ಹೇಳಿದ ಹಾಗೆ ಈ ಸಹಕಾರೀ ಕ್ಷೇತ್ರದಲ್ಲೂ ಕೂಡ ಪಟ್ಟಾ ಸಿಸ್ಟಂ ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಅವನು ಎಲ್ಲೆಲ್ಲಿ ಸಾಲ ತೆಗೆದುಕೊಂಡಿರುತ್ತಾನೋ ಅವೆಲ್ಲಾ ಅದರಲ್ಲಿ ದಾಖಲೆಯಾಗಿರಬೇಕು. ತಮಗೆ ಹೇಳಬೇಕಾದರೆ ಕೆಲವರು ೪-೫ ಸೊಸೈಟಿಗಳಲ್ಲಿ ಸಾಲ ತೆಗೆದುಕೊಂಡಿರುತ್ತಾರೆ. ಈ ಸೊಸೈಟಿ ಸೆಕ್ರೆಟರಿಗೆ ೧೦೦ ರೂಪಾಯಿ ಕೊಟ್ಟರೆ ಸಾಕು ಅದರಲ್ಲಿ ಸಾಲ ತೆಗೆದುಕೊಂಡಿದ್ದಾನೆ ಅಂತ ಎಂಟ್ರಿನೇ ಮಾಡಿರುವುದಿಲ್ಲ. ಅವನು ಮತ್ತೊಂದು ಕಡೆ ಹೋಗಿ ಸಾಲ ತೆಗೆದುಕೊಂಡಿರುತ್ತಾನೆ. ಈವೊತಿನ ದಿವಸ ಈ ರೀತಿ ನಡೆಯುತ್ತಾ ಇದೆ. ಉದಾಹರಣೆಗೆ ನಮ್ಮ ಸವದತ್ತಿ ತಾಲೂಕಿನ ಮುನವಳ್ಳಿ ಗ್ರಾಮದಲ್ಳಿ ಒಬ್ಬ ರೈತ ಒಮ್ಮೆ ಸಾಲ ತೆಗೆದುಕೊಂಡಿದ್ದರೆ, ಇನ್ನೊಂದು ಕಡೆಯಲ್ಲಿ ಗೊಬ್ಬರದ ಸಾಲ ತೆಗೆದುಕೊಂಡಿದ್ದರೆ, ಮತ್ತು ಅವನು ಯಾವ ಸಾಲವನ್ನೇ ತೆಗೆದುಕೊಂಡಿರಲಿ ವಿಲೇಜ್ ಅಕೌಂಟೆಂಟ್‌ಗೆ ಸ್ವಲ್ಪ ದುಡ್ಡು ಕೊಟ್ಟು ಬಿಟ್ಟರೆ ಅವನ ಹೆಸರು ಬಿಟ್ಟುಬಿಡುತ್ತಾನೆ. ಹೀಗಾಗಿ ಅವರುಗಳು ನಾಲ್ಕಾರು ಕಡೆ ಸಾಲವನ್ನು ತೆಗದುಕೊಳ್ಳುತ್ತಾರೆ. ಈ ದೃಷ್ಟಿಯಿಂದ ಇದರ ಬಗ್ಗೆ ಪಟ್ಟಾ ಬುಕ್ ಅನ್ನು ಅವರಿಗೆ ಕೊಡುವ ಹಾಗೆ ಜಾರಿಗೆ ತರಬೇಕೆಂದು ಹೇಳುತ್ತೇನೆ. ಒಬ್ಬ ಪ್ರಾಮಾಣಿಕವಾದ ರೈತ ಸಾಲ ಪಡೆದು ಪ್ರಾಮಾಣಿಕವಾಗಿ

ಉತ್ಪಾದನೆ ಮಾಡಿದ್ದರೂ ಸಹ ಅವನಿಗೆ ಆತನು ಬೆಳೆದಂಥಾ ಬೆಲೆಗೆ ಸರಿಯಾದ ಬೆಲೆ ಇರುವುದಿಲ್ಲ, ಆದುದರಿಂದ ನಾನು ಹೇಳುವುದೇನೆಂದರೆ ಆತ ಎಲ್ಲೆಲ್ಲಿ ಸಾಲ ತೆಗೆದುಕೊಂಡಿರುತ್ತಾನೋ ಆ ಕಾಗದ ಪತ್ರಗಳನ್ನು ಆತ ಸರಿಯಾಗಿ ಇಡದೇ ಹೋದರೆ ಆ ಕೆಲಸವನ್ನು ತಾವಾದರೂ ಮಾಡಬೇಕು. ಆ ರೀತಿ ಮಾಡುವುದು ಯೋಗ್ಯ ಎಂದು ಹೇಳುತ್ತೇನೆ. ಆ ಕಾಗದಪತ್ರಗಳನ್ನು ಅವರವರೇ ಇಡುವಂತೆ ತಾವು ಖಡ್ಡಾಯ ಮಾಡಬೇಕೆಂದು ಹೇಳುತ್ತೇನೆ.

(SRI M. C. BASAPPA.—IN THE CHAIR)

ಈ ರೈತರಿಗೆ ಈ ಸಹಕಾರೀ ಕ್ಷೇತ್ರ ಅನ್ನುವುದು ಸಂಜೀವಿನಿ ಇದ್ದ ಹಾಗೆ ಒಂದು ತಾಯಿ ಮನೆ ಇದ್ದ ಹಾಗೆ, ಅವರು ಒಂದು ಬೋರ್ ವೆಲ್ ತೆಗೆಸಲಿ. ಒಂದು ಪಂಪ್‌ಸೆಟ್ ಹಾಕಬೇಕಾಗಲೀ ಎಲ್ಲದಕ್ಕೂ ಕೂಡ ಬ್ಯಾಂಕ್‌ಗೆ ಹೋಗಬೇಕು. ಒಂದು ಟ್ರಾಕ್ಟರ್ ತೆಗೆದುಕೊಳ್ಳಬೇಕಾದರೂ ಕೂಡ ಬ್ಯಾಂಕ್‌ಗೆ ಹೋಗಬೇಕು. ಅವರಿಂದ ಅವನು ಸಾಲ ಪಡೆದುಕೊಳ್ಳಬೇಕು. ಆದರೆ ಈ ಒಂದು ಕೆಲಸಕ್ಕೆ ಮಾತ್ರ ಅಂದರೆ ಈವತ್ತಿನ ದಿವಸ ಅವನು ತನ್ನ ಭೂಮಿಯನ್ನು ಸಮಪಾತಳಿ ಮಾಡುವುದಕ್ಕೆ ಸರಿಯಾದ ನೆರವು ದೊರೆಯುತ್ತಾ ಇಲ್ಲ. ಈವೊತ್ತಿನ ದಿವಸ ತಾವು ಅವನಿಗೆ ನೀರು ಕೊಟ್ಟಿದ್ದೀರಿ. ಅಂದರೆ ಅದು ಬಂಗಾರ ಇದ್ದ ಹಾಗೆ, ಅದರಲ್ಲಿ ನೀರು ಇದ್ದರೂ ಕೂಡ ಅದನ್ನು ಉಪಯೋಗ ಮಾಡಿ ಕೊಂಡರೆ ಅವನು ತನ್ನ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬಹುದು. ಹಾಗೆ ತನ್ನ ಆರ್ಥಿಕ ಪರಿಸ್ಥಿತಿ ಯನ್ನು ಎದುರಿಸಲಿಕ್ಕೆ ಮುಖ್ಯವಾಗಿ ನೀರು ಇದ್ದರೂ ಸಹ ತನ್ನ ಭೂಮಿಯನ್ನು ಸಮಪಾತಳಿ ಮಾಡ ಬೇಕಾಗುತ್ತದೆ, ಅದಕ್ಕೆ ಯಾವ ಬ್ಯಾಂಕ್‌ನವರೂ ಕೂಡ ಸಾಲ ಕೊಡುವುದಿಲ್ಲಾ, ಆದುದರಿಂದ ತಾವು ಅವನಿಗೆ ಟ್ರಾಕ್ಟರ್‌ಸ್‌ಗೆ ಸಾಲ ಕೊಡುವ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಈ ಭೂಮಿ ಯನ್ನು ಸಮಪಾತಳಿ ಮಾಡುವುದಕ್ಕೆ ಎಷ್ಟೋ ಸಂಸ್ಥೆಗಳು ಇವೆ. ಅದರಲ್ಲಿ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಅಂತ ಏನು ಮಾಡಿದ್ದೀರಿ ಅದರ ಮೂಲಕ ಈವೊತ್ತಿನ ದಿವಸ ಟ್ರಾಕ್ಟರ್ ತೆಗೆದು ಕೊಂಡು ಆ ರೈತನ ಭೂಮಿಯನ್ನು ಸಮಪಾತಳಿ ಕೆಲಸವನ್ನು ಕೊಡುವುದಕ್ಕೆ ಹೋಗಿಲ್ಲ.

೪-೦೦ ಪಿ.ಎಂ.

ಮಲಪ್ರಭಾ ಯೋಜನೆಯಿಂದ ಐದೂವರೆ ಲಕ್ಷ ಎಕರೆ, ಘಟಪ್ರಭಾ ಯೋಜನೆಯಿಂದ ಏಳೂವರೆ ಲಕ್ಷ ಎಕರೆ ಮತ್ತು ಕೃಷ್ಣ ಯೋಜನೆಯಿಂದ ೩೦ ಲಕ್ಷ ಎಕರೆ ಜಮೀನನ್ನು ಸಾಗುವಳಿ ಮಾಡಬೇಕಾಗಿದೆ. ಈ ಎಲ್ಲ ಜಮೀನನ್ನು ಸಮಪಾತಳಿ ಮಾಡದಿದ್ದರೆ ನಾವು ಖರ್ಚು ಮಾಡುವ ಸಾವಿರಾರು ಕೋಟಿ ರೂಪಾಯಿ ಗಳು ವ್ಯರ್ಥವಾಗುತ್ತದೆ. ಭೂ ಅಭಿವೃದ್ಧಿ ಬ್ಯಾಂಕ್‌ನವರು, ಭೂಮಿಯನ್ನು ಸಮಪಾತಳಿ ಮಾಡಲಿಕ್ಕೆ ಬೀಜವನ್ನು ಕೊಳ್ಳಲಿಕ್ಕೆ ಆರ್ಥಿಕ ಸಹಾಯ ಮಾಡಿ ರೈತರ ಉನ್ನತಿಗೆ ಕಾರಣೀಭೂತರಾಗಿದ್ದಾರೆ. ಇವತ್ತು ಇಡೀ ರಾಷ್ಟ್ರದಲ್ಲಿ ನಮ್ಮ ಭೂ ಅಭಿವೃದ್ಧಿ ಬ್ಯಾಂಕ್‌ನವರು ಉತ್ಕೃಷ್ಟವಾದ ಸೇವೆಯನ್ನು ಸಲ್ಲಿಸುತ್ತಿದ್ದಾರೆ. ಈ ದೃಷ್ಟಿಯಿಂದಲೇ ಅದಕ್ಕೆ ವಿಶ್ವಬ್ಯಾಂಕಿನವರೂ ಕೂಡ ಪ್ರಶಸ್ತಿಯನ್ನು ಕೊಟ್ಟಿ ದ್ದಾರೆ. ರೈತರ ಕಷ್ಟಕಾರ್ಪಣ್ಯಗಳಿಗೆ, ನೀರು ಸಿಕ್ಕದೆ ಇದ್ದ ರೈತರಿಗೆ ನೀರನ್ನು ದೊರಕಿಸಿಕೊಳ್ಳಲಿಕ್ಕೆ ಮತ್ತು ಅವರ ಆರ್ಥಿಕೋನ್ನತಿ ಮಾಡಿಕೊಳ್ಳುವುದಕ್ಕೆ ಸಹಾಯ ಮಾಡುತ್ತಿದ್ದಾರೆ. ಇನ್ನೂ ಹೆಚ್ಚಿನ ರೀತಿಯಲ್ಲಿ ಮಾನ್ಯಮಂತ್ರಿಗಳು ಈ ದಿಸೆಯಲ್ಲಿ ಸಹಾಯ ಮಾಡುತ್ತಾರೆಂದು ನಾನು ತಿಳಿದು ಕೊಂಡಿದ್ದೇನೆ. ಇವತ್ತು ನಮ್ಮ ಜಿಲ್ಲೆಯಿಂದ ೭ ನೂಲಿನ ಗಿರಣಿಗಳಿಗಾಗಿ ಪರವಾನೆಯನ್ನು ಕೇಳಿದ್ದಾರೆ, ಒಂದಕ್ಕೂ ಇನ್ನೂ ಲೈಸೆನ್ಸ್ ಸಿಕ್ಕಿಲ್ಲ. ಇಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಮಾಡಬೇಕು ಎನ್ನುವ ಸೂಚನೆಯೂ ಇದೆ. ಇದಕ್ಕೆ ಎಷ್ಟು ದುಡ್ಡು ಕೊಡಬೇಕು, ಎನ್ನುವುದಾವುದನ್ನೂ ಇಲ್ಲಿ ತೋರಿಸಿಲ್ಲ. ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ರೈತರು ಕಬ್ಬನ್ನು ತೆಗೆದುಕೊಂಡು ಹೋದ ಕೂಡಲೆ ಅವರಿಗೆ ಹಣ ದೊರಕುವಂಥ ವ್ಯವಸ್ಥೆಯನ್ನು ತಾವು ಮಾಡಬೇಕು. ಯಾವುದಾದರೂ ಒಂದು ಹಣಕಾಸು ಸಂಸ್ಥೆ ಯಿಂದ ಸಕ್ಕರೆ ಕಾರ್ಖಾನೆಗಳವರು ಹಣವನ್ನು ಪಡೆದು ರೈತರಿಗೆ ತೊಂದರೆಯಾಗದಂತೆ ನೋಡಿಕೊಳ್ಳ ಬೇಕು. ರೈತ ಕಬ್ಬು ಕೊಟ್ಟು ಕಾರ್ಖಾನೆಗಳತ್ತ ನೂರಾರು ಬಾರಿ ಓಡಾಡುವಂಥ ಪರಿಸ್ಥಿತಿ ಇರಬಾರದು ಮಾನ್ಯ ಮಂತ್ರಿಗಳಾದ ಶ್ರೀಕಂಠಯ್ಯನವರು ವಾಸ್ತವಾಂಶಗಳನ್ನು ಗಮನಿಸಿ ರೈತರ ಹಾಗೂ ಶ್ರೀಸಾಮಾನ್ಯನ ಉನ್ನತಿಗಾಗಿ ಕೆಲಸ ಮಾಡುತ್ತಿದ್ದಾರೆ. ಅವರು ಸಾಕಷ್ಟು ಅನುಭವವುಳ್ಳವರಾಗಿದ್ದಾರೆ ಅವರು ಇನ್ನೂ ರೈತರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತಾರೆಂದು ನಾನು ಆಶಿಸುತ್ತೇನೆ.

ಇನ್ನೂ ಸಂಕೇಶ್ವರ ಸಕ್ಕರೆ ಕಾರ್ಖಾನೆಯ ಬಗ್ಗೆ ಎರಡು ಮಾತನ್ನು ಹೇಳುತ್ತೇನೆ. ೧೯೭೬ರಲ್ಲಿ ಈಗಿರುವ ಅಡಿಷನಲ್ ರಿಜಿಸ್ಟ್ರಾರ್‌ರವರು ಅಲ್ಲಿ ನಡೆದ ಅವ್ಯವಹಾರದ ಬಗ್ಗೆ ಎನ್‌ಕ್ವೈರಿ ಮಾಡಿ ಒಂದು ರಿಪೋರ್ಟನ್ನು ಕೊಟ್ಟಿದ್ದಾರೆ.

ಅಲ್ಲಿ ಹುಳುಗಳು ತಿನ್ನುವುದಕ್ಕೆ ಇನ್ನೆಷ್ಟು ದಿವಸ ಅವಕಾಶ ಮಾಡುತ್ತೀರಿ. ದಯಮಾಡಿ ಆ ಹುಳುಗಳನ್ನು ಅಲ್ಲಿಂದ ಹೊರಗೆ ಹಾಕಿರಿ. ಅಲ್ಲಿ ನಡೆದಿದ್ದ ಅವ್ಯಹಾರದ ಬಗ್ಗೆ ವರದಿಯನ್ನು ಕೊಟ್ಟಾಗ ಕ್ರಮ ತೆಗೆದುಕೊಳ್ಳದೆ ಏಕೆ ತಡೆದಿದ್ದೀರಿ ? ರಾಜ್ಯದ ಒಡವರ ದುಡ್ಡನ್ನು ಪೋಲು ಮಾಡುವಂತ ಹಿತಾಸಕ್ತಿ ಜನರನ್ನು ಕಂಡು ಹಿಡಿದು ಅವರಿಗೆ ತಕ್ಕ ಶಾಸನ ಮಾಡಿ ಎಂದು ನಾನು ತಮ್ಮಲ್ಲಿ ನಮ್ರ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ, ರಾಜ್ಯದಲ್ಲಿ ಮಾರ್ಕೆಟ್‌ಯಾರ್ಡ್‌ಗಳನ್ನು ಅಭಿವೃದ್ಧಿ ಮಾಡಬೇಕು ಎಂದು ಮಾನ್ಯ ಮಾರುಕಟ್ಟೆ ಸಚಿವರು ತಿಂಗಳಲ್ಲಿ ೨೮ ದಿವ ಪ್ರವಾಸ ಮಾಡಿ ಹಗಲೂ ಇರುಳೂ ಕೆಲಸ ಮಾಡಿ ಇವುಗಳ ಪ್ರಗತಿಯನ್ನು ಸಾಧನೆ ಮಾಡುತ್ತಿದ್ದಾರೆ. ಮಾನ್ಯ ಸಚಿವರು ತಮ್ಮ ಕಾರ್ಯವನ್ನು ಇದೇ ರೀತಿ ಮುಂದುವರಿಸಿಕೊಂಡು ಹೋಗಲಿ ಎಂದು ಹೇಳುತ್ತೇನೆ. ನಮ್ಮ ಸವದತ್ತಿ ಮುನವಳ್ಳಿ ಮಾರ್ಕೆಟ್ಟಿಗೆ ಸುಮಾರು ಹತ್ತು ಸಾವಿರ ಚೀಲ ಸೆಂಗಾ ಬರುತ್ತದೆ. ಆದಕಾರಣ ಇಲ್ಲಿಯ ಮಾರ್ಕೆಟ್‌ಯಾರ್ಡ್ ಅಭಿವೃದ್ಧಿಯಾಗಬೇಕು ಇದಕ್ಕೆ ಮಾರುಕಟ್ಟೆ ಮಂತ್ರಿಗಳು ಇನ್ನೂ ಹೆಚ್ಚಿನ ಹಣವನ್ನು ಕೊಡ ಬೇಕೆಂದು ಹೇಳುತ್ತೇನೆ.

ಮಾನ್ಯ ಸಹಕಾರ ಮಂತ್ರಿಗಳು ತಂದಂತಹ ಈ ಬೇಡಿಕೆಯನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡಿ ಅಧ್ಯಕ್ಷರು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ. ಬಸವಲಿಂಗಪ್ಪ (ಯಲಹಂಕ).—ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯ ಮೇಲೆ ನಾನು ಸುದೀರ್ಘವಾಗಿ ಭಾಷಣ ಮಾಡಬೇಕು ಎಂದು ನಿಂತುಕೊಂಡಿಲ್ಲ. ಈ ಇಲಾಖೆಯಲ್ಲಿ ಕೆಲಸ ಮಾಡುವವರು ಸರಿಯಾಗಿ ಕೆಲಸ ಮಾಡಿದರೆ ಇದರಿಂದ ಜನಗಳಿಗೆ ಬಹಳ ಅನುಕೂಲವಾಗುತ್ತದೆ. ಮಾನ್ಯ ದೇವೇಗೌಡರು ಮತ್ತಿತರ ಮಾನ್ಯ ಸದಸ್ಯರಾದಿಯಾಗಿ ಈ ಇಲಾಖೆಯ ಮೇಲೆ ಮಾತನಾಡಿ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಈ ಇಲಾಖೆಯಲ್ಲಿ ಕೆಲಸ ಮಾಡತಕ್ಕವರ ನಡವಳಿಕೆಯಲ್ಲಿ ಆಗಲಿ ಈ ಸಹಕಾರ ಸಂಸ್ಥೆಗಳ ಬಗ್ಗೆ ಆಗಲಿ ನನಗೆ ಅಷ್ಟು ಅಭಿರುಚಿಯಿಲ್ಲ. ಅನುಭವವೂ ಇಲ್ಲ. ಆದರೆ ಒಂದೆರಡು ವಿಷಯಗಳನ್ನು ಇಲ್ಲಿ ಹೇಳಬೇಕು ಎನ್ನುವ ಸದಿಚ್ಛೆಯಿಂದ ನಿಂತುಕೊಂಡಿದ್ದೇನೆ. ಮಾನ್ಯ ಸಹಕಾರ ಮಂತ್ರಿಗಳಾದ ಶ್ರೀಕಂಠಯ್ಯನವರಿಗೆ ಜನಗಳಿಗೆ ಸಹಾಯ ಮಾಡಬೇಕು ಎನ್ನುವುದು ಅವರ ಆಸೆ. ಹೆಚ್ಚು ಸಹಾಯ ಮಾಡಬೇಕು ಎಂದು ಹೇಳಿ ಹಣಕಾಸು ಸಂಸ್ಥೆಗಳಿಂದ ರಿಸರ್ವ್ ಬ್ಯಾಂಕಿನಿಂದ, ಕೇಂದ್ರ ಸರ್ಕಾರದಿಂದ ಮತ್ತು ಎಲ್ಲಾ ಕಡೆಯಿಂದಲೂ ಹಣವನ್ನು ತಂದಿದ್ದಾರೆ. ತಂದಿರುವ ಹಣ ಸಾಲ ಎನ್ನುವುದು ಅವರಿಗೆ ಗೊತ್ತಿದೆಯೋ ಇಲವೋ ನನಗೆ ತಿಳಿದಿಲ್ಲ. ಇವರಿಗೆ ಯಾರು ಹಣ ಸಹಾಯ ಮಾಡಿದರೂ ಸಹ ಅದು ಸಾಲ ಎನ್ನುವುದನ್ನು ಮೊದಲು ಇವರು ತಿಳಿದುಕೊಳ್ಳ ಬೇಕು. ಈ ಇಲಾಖೆಗೆ ಸಂಬಂಧಪಟ್ಟಂತೆ ಅಂಕಿಅಂಶಗಳನ್ನು ನಾವು ನೋಡಿದರೆ ಇಲ್ಲಿ ಕೆಲಸಮಾಡ ತಕ್ಕವರು ಈ ಅಂಶವನ್ನು ಅರಿತುಕೊಂಡಿಲ್ಲವೆಂದು ನಾನು ಹೇಳಬೇಕಾಗಿದೆ. ಮಾನ್ಯ ಮಂತ್ರಿಗಳು ಇದರ ಬಗ್ಗೆ ಗಮನ ಕೊಟ್ಟಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ಅದೆಲ್ಲವನ್ನು ಗಮನದಲ್ಲಿಟ್ಟುಕೊಂಡೇ ಅವರು ಸಹಾಯ ಮಾಡುವು ದಕ್ಕೆ ಹೊರಟ್ಟಿದ್ದಾರೆ.

ಶ್ರೀ ಬಿ. ಬಸವಲಿಂಗಪ್ಪ.—ನಾನು ಈ ಬಗ್ಗೆ ಹೆಚ್ಚಾಗಿ ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ಅಕೌಂಟೆಂಟ್ ಜನರಲ್‌ರವರು ಒಂದು ವಿಚಾರವನ್ನು ಇಲ್ಲಿ ಪ್ರಕಟ ಮಾಡಿದ್ದಾರೆ. ಪೇಜ್ ೩೭ರಲ್ಲಿ ಹೇಳಿರುವಂತೆ ೨೮.೪೬೮ ಲಕ್ಷ ರೂಪಾಯಿಗಳನ್ನು ಕೋ-ಆಪರೇಟಿವ್ ಬ್ಯಾಂಕ್‌ಗಳಿಂದ ಸಾಲ ತೆಗೆದು ಕೊಂಡಿದ್ದಾರೆ. ಅದಕ್ಕೆ ಸರ್ಕಾರದವರು ಗ್ಯಾರಂಟಿ ಕೊಟ್ಟಿದ್ದಾರೆ. ಅದರಿಂದ ಸುಮಾರು ೨೮೬ ಲಕ್ಷ ರೂಪಾಯಿಗಳಷ್ಟು ಕಮೀಷನ್ ಬರಬೇಕು. ಆದರೆ ಸರ್ಕಾರ ಗ್ಯಾರಂಟಿ ಕೊಟ್ಟಿದ್ದರೂ ಕೂಡ ಅದನ್ನು ವಸೂಲು ಮಾಡಿಲ್ಲ. ಈ ಬ್ಯಾಂಕುಗಳಿಗೂ ಕೂಡ ಏನೂ ಪ್ರಯೋಜನವಾಗಿಲ್ಲ. ಸರ್ಕಾರಕ್ಕೆ

ಬರತಕ್ಕಂಥ ಹಣ ಅಲ್ಲೇ ಇದೆ. ಅದರ ವಸೂಲಾತಿ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಕೋಆಪರೇಟಿವ್ ಬ್ಯಾಂಕ್‌ಗಳೂ ಕೂಡ ಸುಮ್ಮನೆ ಇವೆ. ಇದರಿಂದಾಗಿ ಶ್ರೀಮಾನ್ ದೇವೇಗೌಡರು ಹೇಳಿದ ಹಾಗೆ ೮ ಬ್ಯಾಂಕುಗಳು ಡಿಫಾಲ್ಟ್ ಆಗಿವೆ. ರಿಸರ್ವ್‌ಬ್ಯಾಂಕ್‌ನವರೂ ಕೂಡ ಅವರಿಗೆ ಸಾಲವನ್ನು ಕೊಡುವುದಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರ ತನ್ನ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಮಾಡಿದೆಯೋ ಎಂದು ಪ್ರಶ್ನೆ ಮಾಡಬೇಕಾಗುತ್ತದೆ. ಅಲ್ಲದೆ ಈ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳು ಕೇವಲ ಸಾಲವನ್ನು ಕೊಡುವುದಕ್ಕೆ ಆಸಕ್ತಿ ವಹಿಸಿದ್ದಾರೆಯೋ ಹೊರತು ಆ ಸಾಲವನ್ನು ವಸೂಲು ಮಾಡುವುದಕ್ಕೆ ಆಸಕ್ತಿಯನ್ನು ವಹಿಸಿಲ್ಲ ಎನ್ನತಕ್ಕಂಥ ವಿಚಾರ ಇದರಿಂದ ಸ್ಪಷ್ಟವಾಗಿ ಗೊತ್ತಾಗುತ್ತಿದೆ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಛೇರ್ಮನ್ ಆಗಿದ್ದಂತಹ ಕಾಲದಲ್ಲಿ ಈ ಇಲಾಖೆಯ ಲೆಕ್ಕಪತ್ರಗಳನ್ನು ತಪಾಸಣೆ ಮಾಡತಕ್ಕಂಥ ಕಾಲದಲ್ಲಿ ನಾನು ಇದನ್ನು ನೋಡಿದ್ದೇನೆ. ಅದನ್ನೆಲ್ಲಾ ಇಲ್ಲಿ ವಿವರವಾಗಿ ಹೇಳುವುದಕ್ಕೆ ನಾನು ಹೋಗುವುದಿಲ್ಲ. ಈ ಅಧಿಕಾರಿಗಳು ಈ ವಿಚಾರದಲ್ಲಿ ಅವರ ಕರ್ತವ್ಯವನ್ನು ಸರಿಯಾದ ರೀತಿಯಲ್ಲಿ ಮಾಡಿದ್ದಾರೆಯೋ ಅಥವಾ ಇಲ್ಲವೇ ಎಂಬುದನ್ನು ನೋಡಿದರೆ, ಅದಕ್ಕೆ ಗ್ಯಾರಂಟಿ ಎಷ್ಟು ಕೊಡ ಬೇಕೋ ಅಷ್ಟು ಕೊಟ್ಟಿದ್ದಾರೆ. ಆದರೆ ಕಮಿಷನ್ ಎಷ್ಟು ಬಂದಿದೆ ವಸೂಲಾತಿ ಆಗಿದೆಯೋ ಇಲ್ಲವೇ ಎಂಬುವುದನ್ನು ನೋಡುವುದಕ್ಕೆ ಹೋಗಿಲ್ಲ. ಈ ವಿಚಾರವನ್ನು ನಾನು ತಮ್ಮ ಗಮನಕ್ಕೆ ತಂದಿದ್ದೇನೆ. ಆಮೇಲೆ ಪೇಜ್ ನಂ. ೧೨೮ರಲ್ಲಿ ಅಕೌಂಟೆಂಟ್ ಜನರಲ್‌ರವರು ಇನ್ನೊಂದು ವಿಚಾರವನ್ನು ಹೇಳಿದ್ದಾರೆ. ಅದರಪ್ರಕಾರ ಈ ಕೋಆಪರೇಟಿವ್ ಸೆಕ್ಟಾರ್ ಇನ್‌ಸ್ಟಿಟ್ಯೂಷನ್‌ನಲ್ಲಿ ೨೮ ಕೋಟಿ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ್ದಾರೆ. ಅದರಲ್ಲಿ ಎಷ್ಟು ಹಣ ವಾಪಸ್ ಬಂತು? ಅವರು ಎಷ್ಟು ವಸೂಲು ಮಾಡಿದ್ದಾರೆ. ಅದರಲ್ಲಿ ಸುಮಾರು ೪ ಕೋಟಿ ರೂಪಾಯಿಗಳನ್ನು ಮಾತ್ರ ಸರ್ಕಾರದವರು ವಸೂಲಿ ಮಾಡಿದ್ದಾರೆ. ಇದನ್ನು ಇನ್‌ವೆಸ್ಟ್ ಮಾಡಿರತಕ್ಕಂಥ ಹಣಕ್ಕೆ ಸರಿತೂಗಿಸಿ ನೋಡಿದರೆ—ಇದು ಏನೇನೂ ಇಲ್ಲ, ಅದರಲ್ಲಿ ಏನು ಇನ್‌ವೆಸ್ಟ್‌ಮೆಂಟ್ ಮಾಡಿದ್ದಾರೆ ಅದೆಲ್ಲಾ ಹಾಗೆಯೇ ಇದೆ. ಅದನ್ನು ವಸೂಲು ಮಾಡುವುದಕ್ಕೆ ಹೋಗಿಲ್ಲ. ಇದು ಏತಕ್ಕೆ ಹೀಗಾಯಿತು ಎನ್ನುವ ಬಗ್ಗೆ ಮಾನ್ಯ ಮಂತ್ರಿಯವರು ಸಮಂಜಸವಾದ ಉತ್ತರ ಕೊಡಬೇಕು. ಅವರು ಸಮಂಜಸವಾದ ಉತ್ತರವನ್ನು ಕೊಟ್ಟರೆ ನನಗೆ ಸಂತೋಷ. ಈ ಅಂಕಿ ಅಂಶಗಳನ್ನೆಲ್ಲಾ ನಾನು ಏತಕ್ಕೆ ಅವರ ಗಮನಕ್ಕೆ ತರುತ್ತಿದ್ದೇನೆಂದರೆ ಸರ್ಕಾರದವರು ಇನ್‌ವೆಸ್ಟ್‌ಮೆಂಟ್ ಮಾಡುತ್ತಾ ಹೋಗುತ್ತಾರೆ, ಅಧಿಕಾರಿಗಳು ಅದನ್ನು ವಸೂಲು ಮಾಡುವುಧಕ್ಕೆ ಹೋಗುವುದಿಲ್ಲ. ಇದನ್ನು ಮಾನ್ಯ ಮಂತ್ರಿಯವರು ಜಪ್ತಿ ಮಾಡಬೇಕಾಗುತ್ತದೆ. ಅವರು ಜಪ್ತಿ ಮಾಡದಿದ್ದರೆ ಆ ಹಣವನ್ನು ವಸೂಲು ಮಾಡುವುದಕ್ಕಾಗುವುದಿಲ್ಲ. ಸಾಲ ವಸೂಲಿ ಮಾಡದೇ ಈ ಬಾಬಿನಿಂದ ಸರ್ಕಾರಕ್ಕೆ ಏನು ನಷ್ಟವಾಗಿದೆ ಅದರ ವಸೂಲಾತಿಯ ಕಡೆಗೆ ಮಾನ್ಯ ಮಂತ್ರಿಯವರು ಹೆಚ್ಚು ಗಮನ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಂಪಾಪತಿ (ದಾವಣಗೆರೆ).—ಸನ್ಮಾನ್ಯ ಅಧ್ಯಕ್ಷರೇ, ನಾನು ಈ ಸಹಕಾರಿ ಸಂಸ್ಥೆಗಳಲ್ಲಿ ಕೆಲಸ ಮಾಡಿದವನಲ್ಲ, ಅದರ ಬಗ್ಗೆ ನನಗೆ ಹೆಚ್ಚಾಗಿ ಗೊತ್ತಿಲ್ಲ. ಆದರೂ ಮಾನ್ಯ ಸಹಕಾರಿ ಸಚಿವರು ಇಲ್ಲಿ ಏನೊಂದು ಕೆಲವು ಅಂಕಿಅಂಶಗಳನ್ನೊಳಗೊಂಡ ವಾರ್ಷಿಕ ವರದಿಯನ್ನು ಕೊಟ್ಟಿದ್ದಾರೆ ಆದರ ಬಗ್ಗೆ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಅವರ ಇಲಾಖೆಯ ವಾರ್ಷಿಕ ವರದಿಯನ್ನು ಈ ಸಾರಿಯೂ ಇಂಗ್ಲೀಷಿನಲ್ಲೇ ಕೊಟ್ಟಿದ್ದಾರೆ, ಇದು ಬಹಳ ದುರಾದೃಷ್ಟದ ಸಂಗತಿ.

ಅಧ್ಯಕ್ಷರು.—ಕೆಲವು ಇಲಾಖೆಗಳ ವಾರ್ಷಿಕ ವರದಿಗಳನ್ನು ಕನ್ನಡದಲ್ಲೇ ಕೊಟ್ಟಿದ್ದಾರೆ.

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೇ, ಈಗ ಕನ್ನಡದಲ್ಲಿರುವಂತಹ ವಾರ್ಷಿಕ ವರದಿ ನನಗೆ ತಂದುಕೊಟ್ಟಿದ್ದಾರೆ. ಸಂತೋಷ ಇರಲಿ. ಈ ಸಹಕಾರಿ ಸಂಸ್ಥೆಗಳ ಬಗ್ಗೆ ಹೇಳಬೇಕು ಎಂದರೆ, ಇಡೀ ರಾಜ್ಯದಲ್ಲಿ ಯಾವ ಒಂದು ಸಹಕಾರ ಸಂಸ್ಥೆ ಕೂಡ ನಮ್ಮ ಒಂದು ನಿರೀಕ್ಷಣೆಗೆ ತಕ್ಕಂತೆ ಕೆಲಸ ಮಾಡುತ್ತಾ ಇಲ್ಲ. ಸಹಕಾರ ತತ್ವ ಜನಸಾಮಾನ್ಯರಿಗೆ ತಿಳಿಯುವ ರೀತಿಯಲ್ಲಿ ಅವು ವ್ಯವಹಾರ ನಡೆಸುತ್ತಾ ಇಲ್ಲ. ಇದರಿಂದಾಗಿ ಜನರು ಇದರ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ ಎಂದು ನನ್ನ ಖಚಿತವಾದ ಅಭಿಪ್ರಾಯ. ಇವತ್ತು ಅನೇಕ ವಿಷಯಗಳು ಜನರಿಗೆ ಗೊತ್ತಿಲ್ಲ. ಆದ್ದರಿಂದ ಆ ಜನರು ಮಧ್ಯವರ್ತಿ ಜನಗಳನ್ನು ಅವಲಂಬಿಸಿದ್ದಾರೆ. ಅವರು ಮಧ್ಯವರ್ತಿ ಜನರನ್ನು ಅವಲಂಬಿಸಿರುವುದರಿಂದ ಅವರೆಲ್ಲಾ ಸುಲಭವಾಗಿ ಮೋಸ ಹೋಗುತ್ತಿದ್ದಾರೆ. ಆದ್ದರಿಂದ ಈ ಸಹಕಾರ ಸಂಸ್ಥೆಗಳಿಂದ ಸಾಮಾನ್ಯ ಜನರಿಗೆ ಯಾವುದೇ ರೀತಿಯ ಅನುಕೂಲ ಸಿಕ್ಕುತ್ತಾ ಇಲ್ಲ. ಇದರಿಂದಾಗಿ ಇವತ್ತು ಈ ಸಹಕಾರ ಸಂಸ್ಥೆಗಳ

ಬೆಳವಣಿಗೆ ನಾವು ನಿರೀಕ್ಷಿಸಿದಷ್ಟು ಆಗಂತ್ತಾ ಇಲ್ಲ ಎನ್ನತಕ್ಕಂಥ ವಿಚಾರವನ್ನು ನಮ್ಮ ಸರ್ಕಾರದವರು ಹಾಗೂ ಮಾನ್ಯ ಮಂತ್ರಿಯವರು ಗಮನಿಸಬೇಕು. ಈ ದಿಶೆಯಲ್ಲಿ ಎಲ್ಲಾ ವ್ಯವಹಾರಗಳನ್ನೂ ಕೂಡ ಕನ್ನಡದಲ್ಲೇ ನಡೆಸಿದರೆ ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಪ್ರತಿಯೊಬ್ಬರಿಗೂ ಅರ್ಥವಾಗುತ್ತದೆ. ನಮ್ಮ ಸರ್ಕಾರದವರು ನಮಗಾಗಿ ಏನು ಕೆಲಸ ಮಾಡುತ್ತಿದ್ದಾರೆ. ಈ ಸಹಕಾರ ಸಂಸ್ಥೆಗಳ ಮೂಲಕ ನಮಗೆ ಏನು ಸಹಾಯ ಸಿಕ್ಕುತ್ತದೆ, ಅದರಿಂದ ಸಾಲವನ್ನು ಹೇಗೆ ಪಡೆಯಬೇಕು. ಅದನ್ನು ಹೇಗೆ ಉಪಯೋಗಿಸಿಕೊಳ್ಳಬೇಕು, ನಾವು ಈ ರಾಜ್ಯಕ್ಕೆ ಹೇಗೆ ಸೇವೆಯನ್ನು ಸಲ್ಲಿಸಬೇಕು ಎನ್ನತಕ್ಕಂಥ ವಿಚಾರಗಳನ್ನು ಪ್ರತಿಯೊಬ್ಬರೂ ತಿಳಿದುಕೊಂಡಾಗ ಮಾತ್ರ ಈ ಸಹಕಾರ ಸಂಸ್ಥೆಗಳು ಅತ್ಯುನ್ನತ ರೀತಿಯಲ್ಲಿ ಬೆಳೆಯುವುದಕ್ಕೆ ಸಾಧ್ಯ. ಮಾನ್ಯ ಮಂತ್ರಿಯವರು ಎಲ್ಲ ವ್ಯವಹಾರವನ್ನೂ ಕನ್ನಡದಲ್ಲೇ ಮಾಡುವುದರಿಂದ ಅವರೇನು ಜನ ಸಾಮಾನ್ಯರ ಸೇವೆಯನ್ನು ಮಾಡುತ್ತಿದ್ದಾರೆ. ಅದರ ಪ್ರತಿಫಲ ಅವರಿಗೆ ಸಿಕ್ಕುವುದಕ್ಕೆ ಸಾಧ್ಯವಾಗುತ್ತದೆ. ಇದೇ ಸಂದರ್ಭದಲ್ಲಿ ನಮ್ಮ ದಾವಣಗೆರೆಯಲ್ಲಿ ಇರತಕ್ಕಂಥ ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯ ಬಗ್ಗೆ ಇಲ್ಲಿ ಹೇಳಬೇಕಾಗಿದೆ. ಆ ಸಹಕಾರೀ ಸಕ್ಕರೆ ಕಾರ್ಖಾನೆಯನ್ನು ಸರ್ಕಾರದವರು ಸ್ಥಾಪಿಸಿರತಕ್ಕಂಥ ಉದ್ದೇಶ ಏನೆಂದರೆ, ಅಲ್ಲಿರತಕ್ಕಂಥ ರೈತರಿಗೆ ಅದರಿಂದ ಅನುಕೂಲವಾಗಬೇಕು ಎನ್ನತಕ್ಕಂಥ ಉದ್ದೇಶದಿಂದ ಮತ್ತು ಅಲ್ಲಿರತಕ್ಕಂಥ ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸವನ್ನು ಒದಗಿಸುವುದರ ಮೂಲಕ ಆ ಭಾಗದಲ್ಲಿರತಕ್ಕಂಥ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುವುದೂ ಒಂದು ಉದ್ದೇಶವಾಗಿತ್ತು. ಸರ್ವೆ ಸಾಮಾನ್ಯವಾಗಿ ದೇಶದಲ್ಲಿರತಕ್ಕಂಥ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸಬೇಕಾದರೆ ಇಂತಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು. ಅದರಂತೆ ಈ ಎರಡು ಉದ್ದೇಶಗಳನ್ನು ಇಟ್ಟುಕೊಂಡು ಕೈಗಾರಿಕೆಗಳನ್ನು ಸ್ಥಾಪನೆ ಮಾಡತಕ್ಕಂಥ ಅಭಿಪ್ರಾಯವನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿದ್ದಾರೆ. ಮತ್ತು ಭದ್ರಾ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿದ್ದಾರೆ ಎಂದು ನನಗನ್ನಿಸುತ್ತಿದೆ. ಸರ್ಕಾರದವರು ಸಕ್ಕರೆ ಕಾರ್ಖಾನೆಯ ಜೊತೆಗೆ ಇನ್ನಾವುದೇ ಕೈಗಾರಿಕೆಗಳನ್ನು ಸ್ಥಾಪಿಸಿದರೂ ಕೂಡ ಆ ಕೈಗಾರಿಕೆಯನ್ನು ಸರಿಯಾದ ರೀತಿಯಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಒಂದು ಬೈಲಾ ಮಾಡಿಕೊಂಡಿರುತ್ತಾರೆ ಆ ನಿಯಮದ ಪ್ರಕಾರ ಇವತ್ತು ಆಡಳಿತ ವರ್ಗದವರು ನಡೆದುಕೊಳ್ಳಬೇಕು. ಏಕೆಂದರೆ ಈ ಸಹಕಾರಿ ಸಂಸ್ಥೆಗಳು ಸಾರ್ವಜನಿಕ ಸಂಸ್ಥೆಗಳಾಗಿರುತ್ತವೆ. ಸಾರ್ವಜನಿಕರ ಹಣ ಮತ್ತು ಸರ್ಕಾರದ ಹಣ ಈ ಎರಡೂ ಒಟ್ಟಿಗೆ ಅದರಲ್ಲಿ ಸೇರಿರುವುದರಿಂದ ಅದನ್ನು ಸರಿಯಾದ ರೀತಿಯಲ್ಲಿ ಅಭಿವೃದ್ಧಿಪಡಿಸತಕ್ಕಂಥ ಒಂದು ಆಡಳಿತ ಮಂಡಳಿ ಇರಬೇಕು, ಆ ಆಡಳಿತ ಮಂಡಲಿ ಆ ನಿಯಮಗಳನ್ನು ಉಲ್ಲಂಘಿಸದಂತೆ ನಡೆದುಕೊಂಡು ಹೋಗಬೇಕು ಎನ್ನತಕ್ಕಂಥಾದ್ದು ಆ ಬೈಲಾದ ಉದ್ದೇಶ. ಆ ನಿಯಮದ ಪ್ರಕಾರ ಆ ಒಂದು ಆಡಳಿತ ಮಂಡಲಿಯಲ್ಲಿ ಕಬ್ಬು ಬೆಳೆಯತಕ್ಕಂಥವರು ೯ ಜನ ಇರಬೇಕು. ಒಬ್ಬರು ಸಹಕಾರ ಸಂಸ್ಥೆಗಳಲ್ಲಿ ಕೆಲಸ ಮಾಡಿದವರು ಇರಬೇಕು. ಇನ್ನಿಬ್ಬರು ಕಬ್ಬು ಬೆಳೆಯದೇ ಇರತಕ್ಕಂಥವರು ಇರಬೇಕು. ಅಂದರೆ ಅವರು ವ್ಯಾಪಾರ ಮಾಡುವವರು ಆಗಿರಬಹುದು ಒಟ್ಟಿನಲ್ಲಿ ೧೨ ಜನರ ಒಂದು ಮಂಡಲಿ ಇರಬೇಕು. ಅದರ ಆಡಳಿತದ ಅವಧಿ ೩ ವರ್ಷ. ಈ ಅವಧಿಯಲ್ಲಿ ಒಂದೇ ಸಾರಿ ಮೂರು ಜನರು ನಿವೃತ್ತವಾಗುವಂತಹ ಪರಿಸ್ಥಿತಿ ಬಂದಾಗ ಏನು ಮಾಡುತ್ತಾರೆ ಎಂದರೆ ಲಾಟರಿಯಲ್ಲಿ ಹಾಕಿ ಆ ಲಾಟರಿಯಲ್ಲಿ ಯಾರ ಹೆಸರು ಬರುತ್ತದೆಯೋ ಅವರು ಮೊದಲು ನಿವೃತ್ತರಾಗಬೇಕು. ಆ ರೀತಿ ಮೊದಲ ಸುತ್ತಿನಲ್ಲಿ ನಿವೃತ್ತರಾಗಲು ಬಂದ ಹೆಸರು ಶ್ರೀಮಾನ್ ಶಿವಪ್ಪ ಎನ್ನುವವರ ಹೆಸರು ಬಂತು. ಮತ್ತೇ ಎರಡನೆಯ ಬಾರಿ ಶ್ರೀಮಾನ್ ಬಿ. ಎಂ. ರುದ್ರಯ್ಯ ಎಂಬುವರ ಹೆಸರು ಬಂತು. ಮತ್ತೆ ಮೂರನೆಯದಾಗಿ ಶ್ರೀಮಾನ್ ಬಿ. ಸಿ. ಕುಲವಂತಪ್ಪ ಎನ್ನುವವರ ಹೆಸರು ಬಂತು. ಆದರೆ ಅವರ ಹೆಸರುಗಳು ಬಂದ ಮೇಲೆ ಅವರು ನಿವೃತ್ತರಾಗಬೇಕಾಗಿತ್ತು. ಆದರೆ ಅವರು ಆ ಸ್ಥಾನದಿಂದ ನಿವೃತ್ತರಾಗಲಿಲ್ಲ. ಅವರು ಈ ವಿಷಯವನ್ನು ಸರ್ಕಾರದ ಅಧಿಕಾರಿಗಳಿಗೂ ತಿಳಿಸಲಿಲ್ಲ. ಅವರೇ ನೇರವಾಗಿ ಹೈಕೋರ್ಟಿಗೆ ಬಂದು ಒಂದು ರಿಟ್ ಪಿಟೀಷನ್ ಫೈಲ್ ಮಾಡಿ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದರು. ಮತ್ತೆ ಅವರು ಆ ರೀತಿ ತಡೆಯಾಜ್ಞೆಯನ್ನು ತೆಗೆದುಕೊಂಡು ಹೊಗಿ ಇನ್ನುಳಿದ ಇಬ್ಬರನ್ನು ಸಹ ಹೈಕೋರ್ಟಿಗೆ ಕಳುಹಿಸಿ ತಡೆಯಾಜ್ಞೆಯನ್ನು ತೆಗೆದುಕೊಂಡು ಬಂದಿದ್ದಾರೆ. ಅವರು ರಾಣಿಬೆನ್ನೂರಿನ ಶ್ರೀಮಾನ್ ಕುಲವಂತಪ್ಪ ಮತ್ತು......

ಅಧ್ಯಕ್ಷರು.—ಈ ಮನೆಯ ಸದಸ್ಯರು ಅಲ್ಲದೆ ಇರುವಂತಹವರ ಹೆಸರನ್ನು ಇಲ್ಲಿ ಹೇಳುವುದು ಬೇಡ.

ಶ್ರೀ ಪಂಪಾಪತಿ.—ಈ ವಿಷಯವನ್ನು ಸರ್ಕಾರದ ಅಧಿಕಾರಿಗಳಿಗೆ ತಿಳಿಸಬೇಕಾಗಿತ್ತು. ಅವರಿಗೆ ತಿಳಿಸಿದ್ದರೆ ಅವರು ಹೈಕೋರ್ಟಿಗೆ ಬಂದು ಅವರಿಗೆ ಕೊಟ್ಟಿರುವಂತಹ ತಡೆಯಾಜ್ಞೆಯನ್ನು ರದ್ದು ಪಡಿಸ ಬಹುದಾಗಿತ್ತು. ಆದರೆ ಆ ಕೆಲಸವನ್ನು ಸಹ ಅವರು ಮಾಡಲಿಲ್ಲ. ಇದುವರೆವಿಗೂ ತಿಳಿಸಿದ್ದಾರೋ ಇಲ್ಲವೋ ಗೊತ್ತಿಲ್ಲ. ನಮ್ಮಲ್ಲಿ ಒಂದು ಗಾದೆ ಹೇಳುತ್ತಾರೆ. ಅದು ಏನೆಂದರೆ, ''ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ'' ಎಂದು ಹಾಗೆ ಅಲ್ಲಿರುವಂತಹ ರೈತರು ಹಣವನ್ನು ಹಾಕಿಕೊಂಡು ಹೈಕೋರ್ಟಿಗೆ ಬಂದು ಅವರಿಗೆ ಕೊಟ್ಟಿರುವ ತಡೆಯಾಜ್ಞೆಯನ್ನು ರದ್ದುಪಡಿಸಿ ಮತ್ತು ಹಾಕಿದ್ದ ರಿಟ್‌ಪಿಟೀಷನ್ ಕೂಡ ವಜಾ ಮಾಡಿಸಿದ್ದಾರೆ. ಆದರೂ ಸಹ ಸರ್ಕಾರದವರು ಅವರ ಮೇಲೆ ಇನ್ನೂ ಕ್ರಮ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣ ಏನು ಎಂದು ನಾನು ಮಾನ್ಯ ಸಹಕಾರ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಮತ್ತು ಅವರು ಉತ್ತರ ಕೊಡುವಾಗ ಇದರ ಬಗ್ಗೆ ವಿವರಣೆಯನ್ನು ಸಹ ಕೊಡಬೇಕು.

ಇವತ್ತು ಸಹಕಾರ ಸಂಘದ ಸಾರ್ವಜನಿಕ ಸೇವೆಯ ಬಗ್ಗೆ ಅಧಿಕಾರಿಗಳು ಗಮನ ಹರಿಸುತ್ತಿಲ್ಲ ಎನ್ನುವಂತಹ ಒಂದು ಪ್ರಶ್ನೆ ನಮ್ಮ ಮುಂದೆ ಇದೆ. ಈ ಮಂಊರು ಜನರು ಹಾಕಿದ್ದ ರಿಟ್‌ಪಿಟೀಷನ್ ವಜಾ ಆಗಿ ಹೈಕೋರ್ಟಿನಿಂದ ತೀರ್ಪು ಬಂದ ಮೇಲೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳಿಗೂ ಹಾಗೂ ಮಾನ್ಯ ಕಂದಾಯ ಮಂತ್ರಿಗಳಿಗೂ ಮತ್ತು ಸಹಕಾರ ಸಚಿವರಿಗೂ ಹಾಗೂ ಸಂಬಂಧ ಪಟ್ಟ ಎಲ್ಲಾ ಅಧಿಕಾರಿಗಳಿಗೂ ಮನವಿಯನ್ನು ಸಲ್ಲಿಸಿದ್ದೇವೆ. ಆದರೂ ಈ ಭಾಗದಲ್ಲಿರುವಂತಹ ರೈತರ ಬಗ್ಗೆ ಯಾರಿಗೂ ಕಳಕಳಿ ಇಲ್ಲ. ಇವರಿಗೆ ಸಹಾಯ ಮಾಡಬೇಕು ಎನ್ನುವಂತಹ ಕಳಕಳಿ ಇಲ್ಲ. ಆದ್ದರಿಂದ ನಾನು ಈ ವಿಷಯವನ್ನು ಬಹಳ ದುಃಖದಿಂದ ಹೇಳಬೇಕಾಗಿದೆ. ಸರ್ಕಾರದವರು ಎಷ್ಟೊಂದು ಬೇಜವಾಬ್ದಾರಿಯಿಂದ ವರ್ತನೆ ಮಾಡುತ್ತಿದ್ದಾರೆ ಎನ್ನುವುದು ಇದರಿಂದ ಅರ್ಥವಾಗುತ್ತದೆ. ಇದೇ ರೀತಿಯಲ್ಲಿ ಸಹಕಾರ ಸಂಘಗಳು ಮುಂದುವರಿಯುವುದಾದರೆ ನಮ್ಮ ರಾಜ್ಯದಲ್ಲಿರುವಂತಹ ಎಲ್ಲಾ ಸಹಕಾರಿ ಸಂಘ ಸಂಸ್ಥೆಗಳು ಹಾಳಾಗಿ ಹೋಗುತ್ತವೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನಲ್ಲಿ ಹತ್ತಿ ಸಂಗ್ರಹಣೆ ಮಾಡಿ ಹತ್ತಿಬಟ್ಟೆಯನ್ನು ಎಷ್ಟು ಚೆನ್ನಾಗಿ ತಯಾರು ಮಾಡುತ್ತಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಹತ್ತಿ ನೂಲು ಇದೆ. ಆದರೆ ಅದನ್ನು ಉಪಯೋಗ ಮಾಡಿಕೊಂಡು ಬಟ್ಟೆಯನ್ನು ತಯಾರು ಮಾಡು ವಂತಹ ಜನರು ಸಹ ಇದ್ದಾರೆ. ಆದರೆ ಅದಕ್ಕೆ ಬೇಕಾದಂತಹ ಅನುಕೂಲಗಳು ಇಲ್ಲ. ಆದ್ದರಿಂದ ನಾನು ಹೇಳುವುದೇನೆಂದರೆ, ಮಾನ್ಯ ಸಹಕಾರಿ ಸಚಿವರು ಬೇರೆ ಬೇರೆ ರಾಜ್ಯಗಳಲ್ಲಿ ಯಾವ ರೀತಿಯ ವ್ಯವಸ್ಥೆ ಇದೆ ಎಂಬುದನ್ನು ತಿಳಿದುಕೊಂಡು ಬಂದು ಅದೇ ರೀತಿಯಲ್ಲಿ ನಮ್ಮ ರಾಜ್ಯದಲ್ಲಿಯೂ ಕೂಡ ಸಹಕಾರಿ ಸಂಸ್ಥೆಗಳು ಸರಿಯಾದ ರೀತಿಯಲ್ಲಿ ನಡೆಯುವಂತೆ ಅಧಿಕಾರಿಗಳಿಗೆ ಸೂಚನೆ ಕೊಟ್ಟು ವ್ಯವಸ್ಥಿತವಾಗಿ ನಡೆಯುವಂತೆ ಮಾಡಬೇಕು, ಇಲ್ಲದಿದ್ದರೆ ಈ ಸಹಕಾರಿ ಸಂಸ್ಥೆಗಳು ಉಳಿಯುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ಕಬ್ಬನ್ನು ವಿಪರೀತವಾಗಿ ಬೆಳೆಯುತ್ತಿದ್ದಾರೆ. ಆದರೆ ಸರ್ಕಾರದವರ ಒಂದು ಒಪ್ಪಂದದ ಪ್ರಕಾರ ಒಂದು ಟನ್ ಕಬ್ಬಿಗೆ ಸುಮಾರು ೨೮೫ ರೂಪಾಯಿ ಗಳನ್ನು ಕೊಡಬೇಕಾಗಿದ್ದರೂ ಅಲ್ಲಿನ ಮ್ಯಾನೇಜ್‌ಮೆಂಟ್‌ನವರು ೨೧೬ ರೂಪಾಯಿಗಳನ್ನು ಮಾತ್ರ ಕೊಡುತ್ತೇವೆ ಎಂದು ಹೇಳುತ್ತಾರೆ. ರೈತರು ಹೆಚ್ಚು ಹಣವನ್ನು ಖರ್ಚು ಮಾಡಿ ಕಬ್ಬನ್ನು ಬೆಳೆದಿರು ತ್ತಾರೆ. ತಾವು ಈಗ ಏನಾದರೂ ಕಡಿಮೆ ಬೆಲೆಯನ್ನು ಕೊಟ್ಟರೆ ಅವರಿಗೆ ಬಹಳ ತೊಂದರೆಯಾಗು ತ್ತದೆ. ಇದನ್ನು ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಬೇಕು. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಇದರಿಂದ ಕಾರ್ಖಾನೆಗಳಿಗೂ ತೊಂದರೆಯಾಗುತ್ತದೆ ರೈತರಿಗೆ ತೊಂದರೆಯಾಗು ತ್ತದೆ ಮತ್ತು ಕಾರ್ಮಿಕರಿಗೆ ತೊಂದರೆಯಾಗುತ್ತದೆ. ತಾವು ಈಗ ೨೮೫ ರೂಪಾಯಿಗಳು ಕೊಡುವುದಿಲ್ಲ ೨೧೬ ರೂಪಾಯಿಗಳು ಮಾತ್ರ ಕೊಡುವುದು ಎಂದು ಹೇಳಿದರೆ ಖಂಡಿತವಾಗಿ ಮುಷ್ಕರ ನಡೆಯುತ್ತದೆ. ತಾವು ಕೊಡುವಂತಹ ರೇಟಿಗೆ ಕಬ್ಬನ್ನು ಬೆಳೆಯುವುದಕ್ಕಾಗುವುದಿಲ್ಲ. ಕೃಷಿಕರಿಗೆ ಹೆಚ್ಚು ಕೆಲಸವಿರು ತ್ತದೆ. ಹೆಚ್ಚು ಕೆಲಸ ಮಾಡಿ ಕಡಿಮೆ ಉತ್ಪತ್ತಿ ಬಂದರೆ ಅದು ಹೇಗೆ ಸಾಧ್ಯ ?

೪-೩೦ ಪಿ. ಎಂ.

ಇದೆಲ್ಲಕ್ಕೂ ಹೊಣೆ ಯಾರು ? ಈ ಹೊಣೆಗೇಡಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ನಾನು ಈ ಸಂದರ್ಭದಲ್ಲಿ ಪ್ರಶ್ನೆ ಮಾಡುತ್ತೇನೆ. ಇವತ್ತು ಮಾನ್ಯ ಸಚಿವರು ಈ ಎಲ್ಲಾ ವಿಷಯವನ್ನೂ ಕೂಡ ಕೂಲಂಕಷವಾಗಿ ಗಮನಿಸಿ, ಯಾರು ಕಾನೂನಿಗೆ ವಿರುದ್ಧವಾದಂಥ ರೀತಿಯಲ್ಲಿ ಆ ಸ್ಥಾನದಲ್ಲಿದ್ದಾರೆ ಅಂಥವರನ್ನು ಕೂಡಲೆ ಉಚ್ಚಾಟನೆ ಮಾಡಲೇಬೇಕು. ತಮ್ಮ ಅಧಿಕಾರಿಗಳನ್ನು ಆ ಸ್ಥಾನಗಳಿಗೆ ನೇಮಿಸಿ ಆಡಳಿತವನ್ನು ನಡೆಸತಕ್ಕಂಥ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ನಮ್ಮ ದಾವಣಗೆರೆಯಲ್ಲಿವೆ. ಇವರು ಸಾಲ ಕೊಡುವಾಗಲೇ ಅಡಿಷನಲ್ ಷೇರು ಬಂಡವಾಳ ಎಂದು ೧೦ ಪರ್ಸೆಂಟ್ ಷೇರನ್ನು ಕಟ್ಟಿಸಿಕೊಳ್ಳುತ್ತಾರೆ. ಕೆಲವು ಕಡೆ ಅವರು ಕೊಟ್ಟಂಥ ಸಾಲವನ್ನು ಮರು ಪಾವತಿ ಮಾಡುವಾಗ ಕೊನೆಯಲ್ಲಿ ಈ ಷೇರು ಬಂಡವಾಳವನ್ನೂ ಕೂಡ ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ಆದರೆ ದಾವಣಗೆರೆಯಲ್ಲಿ ಆ ರೀತಿ ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಒಂದು ಫ್ಯಾಕ್ಟರಿ ಸಾಲ ತೆಗೆದುಕೊಳ್ಳಬೇಕಾದರೆ ಸುಮಾರು ೫೦ ಸಾವಿರ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾರೆಂದರೆ ೫೦೦೦ ರೂಪಾಯಿವರೆಗೂ ಷೇರು ಬಂಡವಾಳ ತೆಗೆದುಕೊಳ್ಳುತ್ತಾರೆ, ಅದಕ್ಕೆ ಬಡ್ಡಿ ಇಲ್ಲ. ಹಾಗೇ ಆ ಹಣ ಇರುತ್ತದೆ. ಇದರಿಂದ ರೈತರಿಗೆ ತೊಂದರೆಯಾಗುತ್ತಾ ಇದೆ. ಇದರ ಬಗ್ಗೆಯೂ ತಾವು ವಿಚಾರಮಾಡಿ. ಬೇರೆ ಕಡೆ ಅದನ್ನು ಸಾಲಕ್ಕೆ ವಜಾ ಮಾಡಿಕೊಳ್ಳುತ್ತಾರೆ. ಆದರೆ ಇಲ್ಲಿ ಆ ರೀತಿ ಮಾಡುತ್ತಾ ಇಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಇದನ್ನು ಸ್ವಲ್ಪ ನೋಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಸರ್ಕಾರದವರು ನಮ್ಮ ರೈತರಿಗೆ ಏನೋ ಸಹಾಯ ಮಾಡುತ್ತಾ ಇದ್ದೇವೆ, ಕಡಿಮೆ ದರದಲ್ಲಿ ಸಾಲ ಒದಗಿಸುತ್ತಾ ಇದ್ದೇವೆ ಎಂದು ಹೇಳುತ್ತಾರೆ. ಆದರೆ ಒಂದು ವಿಚಾರವನ್ನು ಹೇಳುತ್ತೇನೆ. ರಿಸರ್ವ್ ಬ್ಯಾಂಕ್‌ನವರು ಶೇಕಡ ೭ ರಂತೆ ಬಡ್ಡಿ ಹಾಕುತ್ತಾರೆ. ಆದರೆ ಇವರು ರೈತರಿಗೆ ಉತ್ಪಾದನಾ ಸಾಲಕ್ಕೆ ೧೨ ಪರ್ಸೆಂಟ್ ಬಡ್ಡಿ ಹಾಕುತ್ತಾರೆ. ಅಂದರೆ ಇದು ಅದರ ಡಬಲ್ ಆಯಿತು ನೀವು ಕಡಿಮೆ ದರದ ಬಡ್ಡಿಗೆ ಸಾಲ ತೆಗೆದುಕೊಂಡು ಬಂದು ಹೆಚ್ಚಿನ ಬಡ್ಡಿ ದರದಲ್ಲಿ ರೈತರಿಗೆ ಸಾಲ ಕೊಡುವ ಮತ್ತು ಅವರಿಂದ ವಸೂಲು ಮಾಡತಕ್ಕ ಒಂದು ಪದ್ಧತಿ ಏನಿದೆ ಅದನ್ನು ಕಡಿಮೆ ಮಾಡಬೇಕು. ನೀವು ಶೇಕಡ ೭ ರಷ್ಟು ಬಡ್ಡಿಗೆ ಹಣ ತರತಕ್ಕದ್ದು, ಅದಕ್ಕೆ ಏನಾದರೂ ಸ್ವಲ್ಪ ಖರ್ಚು ಒದಗಿಸಿ, ೧೨ ಪರ್ಸೆಂಟ್ ಬಡ್ಡಿ ಅಂದರೆ ಬಹಳ ಜಾಸ್ತಿಯಾಗುತ್ತದೆ. ಅದನ್ನು ಕಡಿಮೆ ಮಾಡಬೇಕು ಎಂದು ನಾನು ನಿಮ್ಮನ್ನು ಕೇಳಿಕೊಳ್ಳುತ್ತೇನೆ. ಇನ್ನೊಂದು ವಿಚಾರವೇನೆಂದರೆ, ರಾಜ್ಯದಲ್ಲಿ ಅನೇಕ ಸಹಕಾರಿ ಸಂಸ್ಥೆಗಳಿವೆ. ಇಲ್ಲಿ ಎಲ್ಲಾ ಸಾಲ ಕೊಟ್ಟಿದ್ದೀರಿ. ಇದರ ಪ್ರಕಾರ ಹೇಳುವುದಾದರೆ ೪೨೫೫ ಸಹಕಾರಿ ಸಂಸ್ಥೆಗಳ ಲೆಕ್ಕ ಪರಿಶೋಧನೆ ಕೆಲಸ ಬಾಕಿ ಉಳಿದಿದೆ ಎಂದು ಹೇಳಿದ್ದೀರಿ. ಲೆಕ್ಕ ಶೋಧನೆ ನಡೆದಿರುವಲ್ಲಿ ಕಂಡುಬಂದಂತೆ ೧ ಕೋಟಿ ೩೮ ಲಕ್ಷ ರೂಪಾಯಿಗಳ ದುರ್ವ್ಯವಹಾರ ಇವತ್ತು ನಡೆದಿದೆ. ಈ ಎಲ್ಲಾ ಸಂಸ್ಥೆಗಳಲ್ಲೂ ಲೆಕ್ಕ ಶೋಧನೆಯಾದರೆ ಎಷ್ಟು ಕೋಟಿ ರೂಪಾಯಿ ಆಗುತ್ತದೆ ಎಂದು ಯೋಚನೆ ಮಾಡಬೇಕು. ಏಕೆ ಈ ರೀತಿ ಆಗುತ್ತಿದೆ, ಅಧಿಕಾರಿಗಳು ಇದನ್ನು ಗಮನಿಸುತ್ತಾ ಇಲ್ಲವೇ, ಸಾರ್ವಜನಿಕರ ಹಣ ಕೋಟ್ಯಾಂತರ ರೂಪಾಯಿ ಇವತ್ತು ದುರ್ವ್ಯವಹಾರ ಆಗುತ್ತಿದೆ ಅಂದರೆ ಇದನ್ನು ಗಮನಿಸತಕ್ಕಂಥಾದ್ದು ಸರ್ಕಾರದ ಕರ್ತವ್ಯವಲ್ಲವೇ? ಅಧಿಕಾರಿಗಳ ಕರ್ತವ್ಯವಲ್ಲವೇ? ಅಥವಾ ಇದನ್ನು ಗುರುತಿಸದೇ ಹೋದರೆ ಅಂಥಾ ಅಧಿಕಾರಿಗಳ ಮೇಲೆ ನಮ್ಮ ಸರ್ಕಾರದವರು ಏನು ಕ್ರಮ ಕೈಗೊಂಡಿದ್ದಾರೆ ಎನ್ನುವುದನ್ನು ತಿಳಿಸಬೇಕು. ಆಡಿಟ್, ಆಗದೇ ಇರತಕ್ಕ ಸೊಸೈಟಿಗಳು ಇವೆ. ೩ ವರ್ಷಗಳಿಂದ ೪೪ ಸೊಸೈಟಿಗಳು ಆಡಿಟ್ ಆಗಿಲ್ಲ, ೨ ವರ್ಷಗಳಿಂದ ೭೪ ಸೊಸೈಟಿಗಳು ಆಡಿಟ್ ಆಗಿಲ್ಲ, ೪ ವರ್ಷಗಳಿಂದ ೨೨ ಸೊಸೈಟಿಗಳು ಆಡಿಟ್ ಆಗಿಲ್ಲ, ೫ ವರ್ಷಗಳಿಂದ ೮ ಸೊಸೈಟಿಗಳು ಆಡಿಟ್ ಆಗಿಲ್ಲ, ೬ ವರ್ಷಗಳಿಂದ ೯ ಸೊಸೈಟಿಗಳು ಆಡಿಟ್ ಆಗಿಲ್ಲ, ೭ ವರ್ಷಗಳಿಂದ ೨ ಸೊಸೈಟಿ ಆಡಿಟ್ ಆಗಿಲ್ಲ, ೮ ವರ್ಷಗಳಿಂದ ೫ ಸೊಸೈಟಿ ಆಡಿಟ್ ಆಗಿಲ್ಲ. ೯ನೇ ವರ್ಷಕ್ಕೆ ೬ ಸೊಸೈಟಿಗಳು ಆಡಿಟ್ ಆಗಿಲ್ಲ, ೧೦ನೇ ವರ್ಷಕ್ಕೆ ೪ ಸೊಸೈಟಿಗಳು ಆಡಿಟ್ ಆಗಿಲ್ಲ. ಈ ರೀತಿ ಹತ್ತುತ್ತು ವರ್ಷ ಸೊಸೈಟಿಗಳಲ್ಲಿ ಆಡಿಟ್ ಆಗದೇ ಹೋದರೆ ಹೇಗೆ? ಕೆಲವು ಕಡೆ ಸೊಸೈಟಿಗಳು ಇಲ್ಲವೇ ಇಲ್ಲ ಎಂದು ಬರೆದುಕೊಂಡಿದ್ದಾರೆ. ಅವು ಇಲ್ಲವೇ ಅಥವಾ ಗುರುತು ಹಚ್ಚುವುದಕ್ಕೆ ಆಗಿಲ್ಲವೇ, ಹಣ ಕೊಟ್ಟಿದ್ದಾರೆ, ಆದರೆ ಸೊಸೈಟಿ ಎಲ್ಲಿದೆ ಎಂದು ಗುರುತಿಸುವುದಕ್ಕೆ ಸರ್ಕಾರದಿಂದ ಸಾಧ್ಯವಾಗಿಲ್ಲ. ಈ ಮಟ್ಟದಲ್ಲಿ ನಮ್ಮ ಈ ಸಹಕಾರ ಇಲಾಖೆ ಕೆಲಸ ಮಾಡಿದರೆ, ಖಂಡಿತವಾಗಿಯೂ ಸಹಕಾರಿ ಸಂಸ್ಥೆಗಳು ಬೆಳೆಯುವುದಿಲ್ಲ. ಮಾನ್ಯ ಸಚಿವರು ಸಹಕಾರಿ ಸಂಸ್ಥೆಗಳಲ್ಲಿ ಚೆನ್ನಾಗಿ ಪಳಗಿದವರು, ಅನುಭವಿಗಳು. ಆದರೆ ಈ ಎಲ್ಲಾ ಲೋಪದೋಷಗಳನ್ನು ಸರಿಪಡಿಸಬೇಕಾದರೆ

ಅವರು ನಿರ್ದಾಕ್ಷಿಣ್ಯವಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ, ಮತ್ತು ನಿಷ್ಠೂರವಾಗಿ ಕೆಲಸ ಮಾಡಬೇಕಾಗುತ್ತದೆ. ಈ ಸಹಕಾರಿ ಸಂಸ್ಥೆಗಳನ್ನು ಬೆಳೆಸುವುದಕ್ಕೆ ಅವರಿಗೆ ಎಲ್ಲಾ ರೀತಿಯಾದಂಥ ಪ್ರೋತ್ಸಾಹವನ್ನು ಕೊಡುತ್ತೇವೆ. ಅವರು ನಿರ್ದಾಕ್ಷಿಣ್ಯವಾಗಿ, ನಿಷ್ಠೂರವಾಗಿ ಈ ಎಲ್ಲಾ ತಪ್ಪು ತಡೆಗಳನ್ನು ತಿದ್ದುವುದಕ್ಕೆ ಪ್ರಯತ್ನ ಮಾಡಬೇಕು ಎನ್ನತಕ್ಕ ಮಾತನ್ನು ಹೇಳುತ್ತೇನೆ. ಈ ಸಂದರ್ಭದಲ್ಲಿ ಇನ್ನೊಂದು ಮಾತನ್ನು ಹೇಳುತ್ತೇನೆ, ಭದ್ರಾ ಸಹಕಾರಿ ಸಂಸ್ಥೆಯ ರೈತ ಸಂಘದವರು ಕೊಟ್ಟಿರತಕ್ಕ ಹೇಳಿಕೆಗಳು ಮತ್ತು ಅವರು ಕೊಟ್ಟಿರತಕ್ಕ ಮನವಿ ಈ ಪತ್ರಿಕೆಯಲ್ಲಿ ಬಂದಿದೆ ಮತ್ತು ಹೇಳಿಕೆಯೂ ಇದೆ. ಇದನ್ನು ತಮ್ಮ ಮೂಲಕ ಮಾನ್ಯ ಮಂತ್ರಿಗಳಿಗೆ ಕಳಿಸಿಕೊಡುತ್ತೇನೆ. ಇಷ್ಟು ಹೇಳಿ, ಸಹಕಾರಿ ಸಂಸ್ಥೆಗಳ ವಿಷಯದ ಮೇಲೆ ನನಗೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಶಿವಪ್ಪ.—ಮಾನ್ಯ ಸದಸ್ಯರು ಈ ಸಭೆಯಲ್ಲಿ ನನ್ನ ಹೆಸರನ್ನು ಹೇಳಿದರು. ಅದಕ್ಕೆ ನಾನು ಉತ್ತರ ಕೊಡುತ್ತೇನೆ.

ಛೇರ್ಮನ್.—ಬೇರೆ ಸಂಘದ ಹೆಸರನ್ನು ಹೇಳಿದರು.

ಶ್ರೀ ಹೆಚ್. ಶಿವಪ್ಪ.—ಆ ಸಂಘದ ಅಧ್ಯಕ್ಷ ನಾನೇ.

ಛೇರ್ಮನ್.—ನೀವು ಮಾತನಾಡುವಾಗ ಮಾತನಾಡಿ. ಈಗ ಶ್ರೀಮಾನ್ ವಿ. ಎಲ್. ಶಿವಪ್ಪನವರು ಮಾತನಾಡುತ್ತಾರೆ.

ಶ್ರೀ ಹೆಚ್. ಶಿವಪ್ಪ.—ನಾನು ಭಾಷಣ ಮಾಡುವುದಿಲ್ಲ, ಕ್ಲಾರಿಫಿಕೇಷನ್ ಕೇಳುತ್ತೇನೆ. ಅಧ್ಯಕ್ಷರೇ, ಮಾನ್ಯ ಸದಸ್ಯರು, ಚುನಾಯಿತ ಸದಸ್ಯರು ಅಕ್ರಮವಾಗಿ ಅಧಿಕಾರದಲ್ಲಿದ್ದಾರೆ ಎಂದು ಹೇಳಿದರು ೧೯೭೮ರಲ್ಲಿ ಈ ಸಂಘಕ್ಕೆ ಚುನಾವಣೆ ನಡೆಯಿತು. ಅವರು ತಿಳಿಸಿದಹಾಗೆ ಬೆಳೆಗಾರರ ವರ್ಗದಿಂದ ೯ ಜನ ಚುನಾಯಿತರಾದರು. ವರ್ಷೇ ವರ್ಷೇ ಮೂರನೇ ಒಂದು ಭಾಗ ನಿವೃತ್ತಿಯಾಗಬೇಕು ಎಂದು ಬೈಲಾನಲ್ಲಿದೆ, ಅದು ಸಹಜ. ಆದರೆ ಇನ್ನೊಂದು ವಿಷಯ ಬೈಲಾನಲ್ಲಿದೆ. ಏನೆಂದರೆ, ಒಂದು ಸಲ ಚುನಾಯಿತರಾದರೆ ೩ ವರ್ಷ ಅಧಿಕಾರದಲ್ಲಿರಬೇಕು ಎಂದು. ಮಾನ್ಯ ಸದಸ್ಯರು ತಮಗೆ ತಿಳಿಸಿದ ಹಾಗೆ, ಮೊದಲನೇ ವರ್ಷ ಲಾಟರಿ ಎತ್ತಿದಾಗ ಅದು ಅಕ್ರಮವಾಯಿತು. ಯಾರ್ಯಾರು ನಿವೃತ್ತಿ ಹೊಂದಬೇಕು ಎಂದು ೬ ತಿಂಗಳ ಒಳಗಾಗಿ ತೀರ್ಮಾನ ಮಾಡಬೇಕು. ಮಾಡದೇಹೋದ ಪಕ್ಷದಲ್ಲಿ ಡೈರೆಕ್ಟರ್ ಆಫ್ ಶುಗರ್ ಅವರು ತೀರ್ಮಾನ ಮಾಡಬೇಕು ಎನ್ನತಕ್ಕ ಒಂದು ನಿಯಮವಿದೆ. ದುರಾದೃಷ್ಟವಶಾತ್. ನಾನು ಆರು ತಿಂಗಳು ಅಧ್ಯಕ್ಷನಾಗಿ ಇರಲಿಲ್ಲ, ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿದ್ದರು, ಆಗ ನಾನು ಉಪಾಧ್ಯಕ್ಷನಾಗಿದ್ದೆ. ಆ ಸಭೆಯಲ್ಲಿ ಹಾಜರೂ ಇರಲಿಲ್ಲ, ಆಗ ತೀರ್ಮಾನ ಆಯಿತು, ನನ್ನ ಹೆಸರು ಬಂತು. ಇಲ್ಲಿ ಕಾಂಟ್ರಡಿಕ್ಷನ್ ಇದ್ದುದರಿಂದ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕು. ಮುಂದೆ ಈ ಪ್ರಶ್ನೆ ಉದ್ಭವವಾಗುತ್ತದೆ ಎನ್ನತಕ್ಕ ಉದ್ದೇಶದಿಂದ ನಾವು ಉಚ್ಚ ನ್ಯಾಯಾಲಯಕ್ಕೆ ಹೋದೆವು, ಅಲ್ಲಿ ಚುನಾವಣೆಗೆ ತಡೆಯಾಜ್ಞೆ ಕೊಟ್ಟರು.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದಕ್ಕೆ ನಾನು ಉತ್ತರ ಹೇಳುತ್ತೇನೆ.

CHAIRMAN.—The entire Position was explaned by Sri Pampapathi

SRI H. C SRIKANTAIAH.—I will explain. The hon. Member may please resume his seat.

CHAIRMAN.—So that is all the explanation.

ಶ್ರೀ ವಿ. ಎಲ್. ಶಿವಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಸಹಕಾರ ಇಲಾಖೆಯ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಲು ಇಚ್ಛಿಪಡುತ್ತೇನೆ. ಸನ್ಮಾನ್ಯ ಶ್ರೀಕಂಠಯ್ಯನವರು ಸಹಕಾರ ಇಲಾಖೆಯ ಸಚಿವರಾದ ಮೇಲೆ ಬಹಳಷ್ಟು ಮಾರ್ಪಾಡುಗಳನ್ನು ಮಾಡುತ್ತಾರೆಂದು ನಾವು ನಿರೀಕ್ಷಣೆ ಮಾಡಿದ್ದೆವು, ಆದರೆ ಆ ಒಂದು ಮಾರ್ಪಾಡು ಮಾಡಲಿಲ್ಲ. ಏತಕ್ಕೆಂದರೆ ಶಾಸನಕ್ಕೆ ತಿದ್ದುಪಡಿ ಮಾಡಬೇಕಾಗಿದೆಂದು ಹೇಳಿ ಒಂದು ಕಮಿಟಿ ಕೂಡ ಮಾಡಿದರು, ಅದು ಕೂಡ

ಇನ್ನೂ ಪೂರ್ತಿ ಮಾಡುವುದಕ್ಕೆ ಆಗಿಲ್ಲ. ಅದರಲ್ಲಿ ಏನೂ ಮಹತ್ವವಾದ ತಿದ್ದುಪಡಿ ಮಾಡಬೇಕಾದಂಥ ಅಗತ್ಯವಿರಲಿಲ್ಲ. ಬಹಳ ಮುಖ್ಯವಾಗಿ ಒಂದೆರಡು ಅಮೆಂಡ್‌ಮೆಂಟ್‌ಗಳನ್ನು ಮಾತ್ರ ಮಾಡಬೇಕಾಗಿತ್ತು, ಅದನ್ನೂ ಸಹ ನಿಧಾನವಾಗಿ ಮಾಡಬಹುದಾಗಿತ್ತು.

SRI M. C. NANAIAH.—Sir, I rise on a point of order. Sir, I don't know whether inside the Assembly a mini tea party is going on. Inside the Assembly a mini Assembly cannot take place.

CHAIRMAN.—I request the hon. member Sri Gadi not to stand like that and discuss with others.

ಶ್ರೀ ವಿ. ಎಲ್. ಶಿವಪ್ಪ.—ಆದುದರಿಂದ ರೂಲ್ ೨೯(ಡಿ) ಪ್ರಕಾರ ಪದಾಧಿಕಾರಿಗಳು ಮುಂದುವರೆಯಬಾರದೆಂದು ತಂದಿದ್ದೀರಿ. ಸ್ವಾಮಿ ಇದನ್ನು ಏತಕ್ಕೆ ಮಾಡಿದ್ದಾರೋ ಗೊತ್ತಿಲ್ಲ, ಈ ದೃಷ್ಟಿಯಿಂದ ಇದನ್ನು ವಿಚಾರ ಮಾಡಿ ಶಾಸನ ತಂದರೆ ಒಳ್ಳೆಯದು. ಇವತ್ತು ಸಹಕಾರಿ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಹೆಚ್ಚು ಹಣ ಹೊಡೆಯುವ ಜನ ಬರುತ್ತಿದ್ದಾರೆಯೇ ವಿನಹಃ ತಾತ್ವಿಕ ಸಿದ್ಧಾಂತದ ಮೇಲೆ ಕೆಲಸ ಮಾಡಲು ಮುಂದೆ ಬರುವಂಥವರು ಬಹಳ ಕಡಿಮೆಯಾಗುತ್ತಿದ್ದಾರೆ. ಏತಕ್ಕೆಂದರೆ ಇವತ್ತಿನ ದಿವಸ ಅವರಿಗೆ ಅವಕಾಶವೇ ಇಲ್ಲ; ಅಂಥವರು ಮರ್ಯಾದೆಯಿಂದ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಆದುದರಿಂದ ತಾವು ಕೂಡಲೇ ಸಹಕಾರ ಸಂಘಗಳಿಗೆ ಏನು ಚುನಾವಣೆಗಳೇ ಆಗಿಲ್ಲವೋ ಅದನ್ನು ನಡೆಸಿ, ಯಾರು ಬಡವ ಬಲ್ಲಿದರ ಬಗ್ಗೆ ಅನುಕಂಪವಿದೆಯೋ, ಯಾರು ಪ್ರಾಮಾಣಿಕವಾಗಿ ಜನರ ಸೇವೆ ಮಾಡಲು ಇಚ್ಛೆಯುಳ್ಳವರು ಇದ್ದಾರೋ ಅಂಥವರು ಚುನಾವಣೆಯಲ್ಲಿ ಗೆದ್ದು ಬಂದು ಕೆಲಸ ಮಾಡಲು ಅವಕಾಶ ಮಾಡಿಕೊಡಿ ಎಂದು ಹೇಳಬಯಸುತ್ತೇನೆ.

ಇನ್ನು ೧೯೮೧–೮೨ ರಲ್ಲಿ ಸಾಲವನ್ನು ಕೊಡುವುದಕ್ಕೋಸ್ಕರವಾಗಿ ಮಂಜೂರು ಮಾಡಿದಂಥ ಹಣವನ್ನು ಇಲ್ಲಿ ಹೇಳಿದ್ದಾರೆ. ಅದರಲ್ಲಿ ಅಲ್ಪಾವಧಿ, ಧೀರ್ಘಾವಧಿ ಮತ್ತು ಮಧ್ಯಮಾವಧಿ ಸಾಲಗಳಿಗೋಸ್ಕರವಾಗಿ ಎಷ್ಟೆಷ್ಟು ಇಟ್ಟಿದ್ದಾರೆನ್ನುವ ಬಗ್ಗೆ ಹೇಳಿದ್ದಾರೆ. ಆದರೆ ಸಹಕಾರ ಪದ್ಧತಿಯ ಮೇಲೆ ನೀವು ಸಾಲವನ್ನು ಕೊಡುವುದಾದರೆ ನಮ್ಮ ದೇಶಕ್ಕೆ ಒಟ್ಟು ಎಷ್ಟು ಹಣ ಬೇಕಾಗುತ್ತದೆಂದು ಯಾರಾದರೂ ಯೋಚನೆ ಮಾಡಿದ್ದಾರೆಯೇ? ಎಷ್ಟು ಜನ ವ್ಯವಸಾಯಗಾರರಿದ್ದಾರೆ? ಎಷ್ಟು ಜನಕ್ಕೆ ಎಷ್ಟು ಜಮೀನು ಇದೆ ಯಾವ ಯಾವ ತರಹದ ಜಮೀನು ಇದೆ, ನಾವು ಎಷ್ಟು ಹಣವನ್ನು ಒದಗಿಸಬೇಕಾಗಿದೆ ಎನ್ನತಕ್ಕ ಅಂಕಿ ಅಂಶಗಳು ಇವತ್ತಿನ ದಿವಸ ಇದ್ದಿದ್ದರೆ ಗೊತ್ತಾಗುತ್ತಿತ್ತು. ಅದರ ಬಗ್ಗೆ ಲೆಕ್ಕಾಚಾರವೇ ಇಲ್ಲ. ಇನ್ನು ೧೯೮೦–೮೧ರಲ್ಲಿ ರಿಜರ್ವ್ ಬ್ಯಾಂಕ್‌ನವರು ೫೭ ಕೋಟಿ ಮಂಜೂರು ಮಾಡಿದ್ದರೆ ನೀವು ತೆಗೆದುಕೊಂಡಿದ್ದು ಎಷ್ಟು ಎಂದರೆ ೩೯.೮೨ ಕೋಟಿ ರೂಪಾಯಿಗಳು ಮತ್ತು ೧೯೮೧–೮೨ರಲ್ಲಿ ೪೯–೭೫ ಕೋಟಿ ರೂ.ಗಳನ್ನು ಮಂಜೂರು ಮಾಡಿದ್ದರೆ ನೀವು ತೆಗೆದುಕೊಂಡಿರತಕ್ಕದ್ದು ೩೩.೫೦ ಕೋಟಿ ರೂ.ಗಳು ಮಾತ್ರ. ರಿಜರ್ವ್ ಬ್ಯಾಂಕ್‌ನವರು ಕೊಟ್ಟಂಥ ಸಾಲದ ಹಣವನ್ನು ಪೂರ್ತಿಯಾಗಿ ತೆಗೆದುಕೊಂಡು ಒದಗಿಸುವುದಕ್ಕೆ ನಿಮಗೆ ಆಗಿಲ್ಲ. ಜಿಲ್ಲಾ ಬ್ಯಾಂಕ್‌ಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇದೇ ರೀತಿಯಾಗಿ ಇವತ್ತಿನ ದಿವಸ ಭೂ ಅಭಿವೃದ್ಧಿ ಬ್ಯಾಂಕ್‌ಗಳು, ಪ್ರಾಥಮಿಕ ಬ್ಯಾಂಕ್‌ಗಳು ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಇವತ್ತು ನಿಷ್ಕ್ರಿಯೆಯಾಗಿರತಕ್ಕ ಬ್ಯಾಂಕ್‌ಗಳು ಎಷ್ಟು ಎಂದು ಸರ್ಕಾರ ದವರೇ ಕೊಟ್ಟಿರತಕ್ಕ ಅಂಕಿ ಅಂಶದ ಪ್ರಕಾರ ೨೯ ಎಂದು ಇದೆ. ಇವತ್ತು ಎಲ್ಲಾ ಸರಿಯಾಗಿರತಕ್ಕ ಬ್ಯಾಂಕ್‌ಗಳು ಎಂದರೆ ೧೭೭ ಬ್ಯಾಂಕುಗಳಲ್ಲಿ ೮೮ ಮಾತ್ರ ಸರಿಯಾಗಿವೆಂದು ಹೇಳಿದ್ದೀರಿ, ಇನ್ನು ಉಳಿದಿರತಕ್ಕ ೨೯ ಬ್ಯಾಂಕ್‌ಗಳನ್ನು ಸರಿಪಡಿಸುವವರು ಯಾರು? ಪುನಹ ಆ ಬ್ಯಾಂಕ್‌ಗಳು ಸಾಲವನ್ನು ಕೊಡುವ ಪರಿಸ್ಥಿತಿಯಲ್ಲಿವೆಯೋ? ಇವತ್ತಿನ ದಿವಸ ಎಷ್ಟು ಜನ ರಿಜಿಸ್ಟ್ರಾರ್‌ರವರು, ಎಷ್ಟು ಜನ ಅಡಿಷನಲ್ ರಿಜಿಸ್ಟ್ರಾರ್‌ರವರು ಮತ್ತು ಎಷ್ಟೋ ಜನ ಜಾಯಿಂಟ್ ರಿಜಿಸ್ಟ್ರಾರು ಇದ್ದಾರೆ. ಇವರ ಪೈಕಿ ಯಾರಾದರೂ ಒಬ್ಬರು ಆಗಿಂದಾಗ್ಗೆ ಹಳ್ಳಿಗಳಲ್ಲಿರತಕ್ಕ ಬ್ಯಾಂಕ್‌ಗಳಿಗೆ ಹೋಗಿ ಚೆಕ್ ಅಪ್ ಮಾಡುತ್ತಿದ್ದರೆ ಇಂಥಾ ಪರಿಸ್ಥಿತಿಯೇ ಉಂಟಾಗುತ್ತಿರಲಿಲ್ಲ. ಯಾರೂ ಆ ಕೆಲಸವನ್ನು ಮಾಡುತ್ತಿಲ್ಲ. ಯಾರಿಗೂ ಏನೂ ಆಗ ಬೇಕಾಗಿಲ್ಲ. ಅಧಿಕಾರಿಗಳಿಗೆ ಏನಾಗಿದೆ ಎಂದರೆ, ಅವರಿಗೆ ಬರೀ ಪ್ರಮೋಷನ್, ಮತ್ತೆ ತಾವು ಎಲ್ಲಿ ವಾಸ ಮಾಡಬೇಕು, ತಮ್ಮ ಮಕ್ಕಳನ್ನು ಎಲ್ಲಿ ಓದಿಸಬೇಕು. ಮತ್ತೆ ಮನೆಯನ್ನು ಎಲ್ಲಿ ವ್ಯವಸ್ಥಿತವಾಗಿ ಕಟ್ಟಿಕೊಳ್ಳಬೇಕು ಟ್ರಾನ್ಸ್‌ಫರ್ ಆದರೆ ಎಲ್ಲಿಗೆ ಹಾಕಿಸಿಕೊಳ್ಳಬೇಕು ಎಂದು ಹಾಗೆ ಹೀಗೆ ಅಂದುಕೊಂಡಿರುತ್ತಾರೆಯೇ ವಿನಹ ಸಹಕಾರ

ಚಳುವಳಿಯಲ್ಲಿ ಎಲ್ಲಿ ದೋಷವಿದೆ, ಎಲ್ಲಿ ತಪ್ಪಿದೆ ಎನ್ನುವುದನ್ನು ಸರಿಪಡಿಸುವುದು ಯಾರಿಗೂ ಬೇಕಾಗಿಲ್ಲ. ಈ ದೇಶದಲ್ಲಿ ನಡೆದುಕೊಂಡು ಬಂದಿರತಕ್ಕ ಇನ್ನೊಂದು ಕೆಟ್ಟ ಪದ್ಧತಿ ಏನೆಂದರೆ, ನಮಗೆ , ಸ್ವಾತಂತ್ರ್ಯ ಬರುವುದಕ್ಕಿಂತ ಮುಂಚಿತವಾಗಿ ಯಾವ ರೀತಿ ಆಡಳಿತಗಾರರಲ್ಲಿ ಮನೋಭಾವನೆ ಇತ್ತೋ ಈಗಲೂ ಅದೇ ಮನೋಭಾವನೆ ಇದೆ. ಸೆಕ್ರಟರಿಗಳ ಆಡಳಿತದ ಧೋರಣೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ ಹಾಗೆಯೇ ಮುಂದುವರಿದು ಕೊಂಡು ಬಂದಿದೆ. ಚುನಾವಣೆ ಆದಾಗ ನಾವು ಯಾರೋ ಶಾಸಕರು ಆರಿಸಿ ಬರುತ್ತೇವೆ, ನಾವು ಇಲ್ಲಿ ಎಷ್ಟು ವರ್ಷ ಇರುತ್ತೇವೆಯೋ ಎಂಬುದು ಖಚಿತವಾಗಿ ಗೊತ್ತಾಗುವುದಿಲ್ಲ. ಅದಕ್ಕೆ ನಾವು ಇಲ್ಲಿ ಅವರು ಹೇಳಿದ್ದಕ್ಕೆ ರುಜು ಹಾ ಹೊರಟು ಹೋಗುತ್ತಿದ್ದೇವೆ. ಆ ದೃಷ್ಟಿಯಿಂದ ಇವತ್ತಿನ ದಿವಸ ಈ ಇಲಾಖೆಯಲ್ಲಿ ಏನಾದರೂ ದ್ರೋಹವಾಗಿದ್ದ ಪಕ್ಷದಲ್ಲಿ ಅದಕ್ಕೆ ಕಾರಣ ಅಧಿಕಾರಿಗಳೇ. ಅಧ್ಯಕ್ಷರೇ ತಮಗೊಂದು ಉದಾಹರಣೆಯನ್ನು ಹೇಳುವುದಾದರೆ, ತುಮಕೂರು ಜಿಲ್ಲೆಯಲ್ಲಿ ಒಂದು ಕನ್‌ಸ್ಯೂಮರ್ಸ್ ಸ್ಟೋರ್ಸ್ ಎಂದು ಇತ್ತು. ಅದಕ್ಕೆ ಡೆಪ್ಯುಟಿ ರಿಜಿಸ್ಟ್ರಾರ್‌ರವರೇ ಮ್ಯಾನೇಜರ್ ಆಗಿದ್ದರು. ಮತ್ತೆ ಆ ಇಲಾಖೆಯ ಅಧಿಕಾರಿಗಳೂ ಅಲ್ಲಿ ಇದ್ದರು. ಆದರೆ ಇವತ್ತು ಸಂಸ್ಥೆ ಲಿಕ್ವಿಡೇಟ್ ಆಗಿದೆದೆ, ಸುಮಾರು ೫-೬ ಲಕ್ಷ ರೂ. ಗಳ ಹಣ ದುರ್ವ್ಯಯವಾಗಿದೆ, ಯಾರ ಮೇಲೆ ತಾವು ಇಲ್ಲಿಯವರೆಗೆ ಕ್ರಮವನ್ನು ತೆಗೆದುಕೊಂಡಿದ್ದೀರಿ? ಅವರು ಜಾಯಿಂಟ್ ರಿಜಿಸ್ಟ್ರಾರ್ ಆಗಿ ಪ್ರಮೋಷನ್ ಪಡೆದುಕೊಂಡು ರಿಟೈರ್ ಕೂಡ ಆಗಿರಬೇಕು. ಈ ರೀತಿಯಾಗಿ ಒಂದೊಂದು ಸೊಸೈಟಿಗಳಲ್ಲಿ ೪ ೫,೬ ಲಕ್ಷ ರೂ. ಗಳು ಮಿಸ್ ಅಪ್ರೊಪ್ರಿಯೇಷನ್ ಆಗಿರುವಾಗ ಅಂಥಾ ಸೊಸೈಟಿಗಳಲ್ಲಿರತಕ್ಕ ಯಾರ ಮೇಲೆ ಇದುವರೆಗೆ ತಾವು ಕ್ರಮವನ್ನು ತೆಗೆದುಕೊಂಡಿದ್ದೀರಿ? ಇದಕ್ಕೆಲ್ಲಾ ಅಧಿಕಾರಿಗಳೇ ಕಾರಣ ಕರ್ತರಾಗಿರತಕ್ಕವರು. ಆದರೆ ಅವರಲ್ಲಿಯೂ ಕೂಡ ಕೆಲವು ಒಳ್ಳೆಯ ಅಧಿಕಾರಿಗಳು ಇದ್ದಾರೆ, ಆದರೆ ಅಂಥವರು ಬಹಳ ವಿರಳ. ಆದುದರಿಂದ ತಾವು ಎಲ್ಲಿಯವರೆಗೆ ಅಧಿಕಾರಿಗಳ ಮೇಲೆ ಹತೋಟಿಯನ್ನು ಇಡುವುದಿಲ್ಲವೋ ಅಲ್ಲಿಯವರೆಗೆ ರೈತರು ಬದುಕುವುದಕ್ಕಾಗುವುದಿಲ್ಲ ಸಹಕಾರ ಸಂಘಗಳು ಬೆಳೆಯುವುದಿಲ್ಲವೆಂದು ಹೇಳಬಯಸುತ್ತೇನೆ. ಅಧ್ಯಕ್ಷರೇ, ಇವತ್ತು ನಾವು ಎಲ್ಲಿ ಕೇಳಿದರೂ ೧ ಕೋಟಿ ಮಿಸ್ ಅಪ್ರೊಪ್ರಿಯೇಷನ್ ಆಗಿದೆ, ೨ ಕೋಟಿ ಆಗಿದೆಂದು ಕೇಳುತ್ತಿದ್ದೇವೆ. ಮತ್ತೆ ೨೦ ಕೋಟಿ ಮಿಸ್ ಅಪ್ರೊಪ್ರಿಯೇಷನ್ ಆಗುತ್ತಿದೆ ಎಂದು ಕೇಳುತ್ತಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ.—೨೦ ಕೋಟಿವರೆಗೆ ಮಿಸ್ ಅಪ್ರೊಪ್ರಿಯೇಷನ್ ಆಗಿದೆಂದು ಹೇಳುತ್ತಿದ್ದೀರಿ. ಅದಕ್ಕೆ ನಾನು ಇವತ್ತು ಹೇಳುತ್ತಿದ್ದೇನೆ, ನೀವು ಪ್ರತಿ ವರ್ಷವೂ ತನಿಖೆ ನಡೆಸುತ್ತಾ ಬನ್ನಿ, ೧ ವರ್ಷದೊಳಗೆ ನಮ್ಮ ರಾಜ್ಯದಲ್ಲಿರತಕ್ಕ ಎಲ್ಲಾ ಸಹಕಾರ ಸಂಘಗಳನ್ನು ಪೂರ್ತಿಯಾಗಿ ತಪಾಸಣೆ ಮಾಡಿಕೊಂಡು ಬನ್ನಿ, ಎಷ್ಟು ಮಿಸ್ ಅಪ್ರೊಪ್ರಿಯೇಷನ್ ಆಗಿದೆ ಎನ್ನತಕ್ಕದ್ದು ತಮಗೆ ಗೊತ್ತಾಗುತ್ತದೆ. ಕೆಲವು ಪ್ರದೇಶದಲ್ಲಿ ತಾವು ಹೇಳಿದ ಹಾಗೆ ಆಗಿರಬಹುದು, ಆದರೆ ತಾವು ಹೇಳಿದ ರೀತಿಯಲ್ಲಿ ಅಷ್ಟು ಪ್ರಮಾಣದಲ್ಲಿ ನಡೆದಿಲ್ಲ. ತಮ್ಮ ತುಮಕೂರು ಜಿಲ್ಲೆಯ ಬಗ್ಗೆ ಹೇಳುವುದಾದರೆ ಅಲ್ಲಿ ಏನು ನಡೆದಿದೆಯೋ ನನಗೆ ಗೊತ್ತಿಲ್ಲ.

ಶ್ರೀ ವಿ. ಎಲ್. ಶಿವಪ್ಪ.—ಬಹುತೇಕವಾಗಿ ಇದು ಶಾಪದ ರೀತಿಯಲ್ಲಿ ಎಲ್ಲ ಕಡೆ ಇದೆ. ಬಹಳ ದಿವಸ ಇದರ ಒಂದು ಭಯಭೀತಿ ಇತ್ತು, ಈಗ ಸ್ವಲ್ಪ ಕಡಿಮೆಯಾಗಿದೆ. ನಾನು ಉದಾಹರಣೆಗಾಗಿ ತುಮಕೂರು ಜಿಲ್ಲೆಯದನ್ನು ಹೇಳಿದೆ, ರಾಜ್ಯಾದ್ಯಂತ ಎಲ್ಲ ಕಡೆ ಇದೇ ರೀತಿ ಇದೆ. ನಾವೆಲ್ಲ ರೈತರು, ಬಹಳ ಕಷ್ಟದಲ್ಲಿರುವ ಜನ. ನಮಗೆ ಈ ಡೆಟರ ರಿಲೀಫ್ ಆಕ್ಟನ್ನು ತಂದು ಹೊರಗಡೆ ಖಾಸಗಿಯಾಗಿ ಸಾಲ ಪಡೆಯುವ ವ್ಯವಸ್ಥೆಯನ್ನು ತಪ್ಪಿಸಿದ ಮೇಲೆ ಇವತ್ತು ಎಲ್ಲಿ ಹೋದರೂ ಹಣ ಹುಟ್ಟುವುದಿಲ್ಲ. ರೈತ ಹಣಕ್ಕಾಗಿ ಮನೆ ಮಠ ಎಲ್ಲ ಮಾರಿ ಕೊನೆಗೆ ಇದ್ದ ತಾಮ್ರ ಹಿತ್ತಾಳೆ, ಬೆಳ್ಳಿ–ಬಂಗಾರವನ್ನೆಲ್ಲ ಮಾರಿ ಆಯಿತು. ಈಗ ಉಳಿದಿರುವುದು ಅಲ್ಯೂಮಿನಿಯಂ ಮತ್ತು ಪ್ಲಾಸ್ಟಿಕ್ ಸಾಮಾನುಗಳು ಮಾತ್ರ. ರೈತರು ಇಂಥ ಸ್ಥಿತಿಯಲ್ಲಿರುವಾಗ ಸಹಕಾರ ಸಂಸ್ಥೆಗಳೇನಿವೆ, ಅವಕ್ಕೆ ಹಣ ಸಹಾಯ ನೀಡಿ ರೈತರಿಗೆ ಸಾಲ ದೊರೆಯುವಂತೆ ಮಾಡತಕ್ಕ ಇಲಾಖೆ ಎಂದರೆ ಸಹಕಾರ ಇಲಾಖೆ. ಈ ಇಲಾಖೆಯಿಂದ, ರಾಜ್ಯದಲ್ಲಿ ರೈತರು ಯಾರು ಬದುಕುವುದಕ್ಕೆ ಸಾಧ್ಯವಿಲ್ಲದಂತಾಗಿದೆ. ಒಂದು ಟ್ರಾಕ್ಟರ್ ತೆಗೆದುಕೊಳ್ಳಬೇಕೆಂದರೆ ಅದರ ಬೆಲೆ ಒಂದು ಲಕ್ಷದ ೩೦ ಸಾವಿರ ರೂಪಾಯಿಗಳಾಗುತ್ತದೆ, ಅದರಲ್ಲಿ ಶೇಕಡ ೨೦ರಷ್ಟು ಹಣವನ್ನು ಮುಂಗಡವಾಗಿ ಕಟ್ಟಿದರೆ ಮಾತ್ರ ಟ್ರಾಕ್ಟರ್ ಕೊಡುತ್ತಾರೆ. ಈ ಬಾಬಿಗಾಗಿ ತೆಗೆದುಕೊಳ್ಳತಕ್ಕ ಸಾಲಕ್ಕೆ $12\frac{1}{2}$ ಪರ್ಸೆಂಟ್ ಬಡ್ಡಿ ಕೊಡಬೇಕಾಗುತ್ತದೆ. ಮತ್ತು ಆ ಸಾಲವನ್ನು ೭ ಕಂತಿನಲ್ಲಿ ವಾಪಸ್ಸು ಕೊಡಬೇಕಾಗುತ್ತದೆ. ಈಗ ಭೂ ಸುಧಾರಣಾ ಕಾನೂನು ತಂದಿರುವುದರಿಂದ ೧೦ ಎಕರೆಯ ಮೇಲೆ

ಜಮೀನನ್ನು ಇಟ್ಟುಕೊಳ್ಳುವ ಹಾಗೆ ಇಲ್ಲ. ಅಷ್ಟು ಜಮೀನು ಇಟ್ಟುಕೊಂಡು ಟ್ರಾಕ್ಟರು ಕೊಂಡು ವ್ಯವಸಾಯ ಮಾಡುವುದರಿಂದ ಎಷ್ಟು ಖರ್ಚಾಗುತ್ತದೆ ಮತ್ತು ಎಷ್ಟು ಆದಾಯ ಬರುತ್ತದೆಂಬುದನ್ನು ತಾವು ವಿಚಾರ ಮಾಡಬೇಕು. ಯಾರು ಪಟ್ಟಣಗಳಲ್ಲಿ ಮನೆ ಕಟ್ಟಿಕೊಂಡು ಯಾರ ಮಕ್ಕಳು ಇಂಜಿನಿಯರ್, ಡಾಕ್ಟರ್ ಆಗಿರುತ್ತಾರೋ ಅಂಥವರು ಏನಾದರೂ ಜಮೀನ್ದಾರರಾಗಿದ್ದರೆ ಟ್ರಾಕ್ಟರ್ ಇಡಬಹುದು. ಅದೇ ರೀತಿ, ರೈಸ್ ಮಿಲ್ ಮತ್ತಿತರ ಬಾಬುಗಳಿಂದ ಸಂಪಾದನೆ ಹೊಂದಿರುವವರು ಇಡಬಹುದು. ನಿಜವಾದ ರೈತಾಪಿ ಜನರು ಇಡುವುದು ಕಷ್ಟ. ಅವರು ತಮ್ಮ ಜೀವನ ನಡೆಸುವುದೇ ಕಷ್ಟ ಎನ್ನುವ ಸ್ಥಿತಿಯಲ್ಲಿರುತ್ತಾರೆ. ಸಾಮಾನ್ಯವಾಗಿ, ರೈತರಿಗೆ ಬಾವಿ ತೆಗೆಸಲು, ಪಂಪುಸೆಟ್ಟು ಹಾಕಿಸಲು, ಬೀಜ–ಗೊಬ್ಬರ ಮುಂತಾದವುಗಳನ್ನು ಕೊಳ್ಳಲು ಸಹಕಾರ ಸಂಘಗಳ ಮೂಲಕ ಸಾಲ ಕೊಡುತ್ತಾರೆ. ಆದರೆ ೧೦ ಎಕರೆಯ ಮೇಲ್ಪಟ್ಟಿದ್ದ ದೊಡ್ಡ ರೈತರೇನಾದರೂ ಬಾವಿ ತೆಗೆಯಲು ಮತ್ತೊಂದಕ್ಕೆ ಸಾಲ ಕೇಳಿದರೆ ಕೊಡುವುದಿಲ್ಲ, ಬಡವರಿಗೆ ಮತ್ತು ಸಣ್ಣ ರೈತರಿಗೆ ಮಾತ್ರ ಕೊಡುತ್ತೇವೆಂದು ಹೇಳುತ್ತಾರೆ. ನಾವು ಬಹಳ ಜನರಿಗೆ ಸಾಲ ಕೊಟ್ಟಿದ್ದೇವೆ, ಸುಮಾರು ೨೭ ಸಾವಿರ ಜನರ ಪೈಕಿ ೧೨ ಸಾವಿರ ರೈತರಿಗೆ ಆ ಒಂದು ಸಾಲ ಕೊಟ್ಟಿದ್ದೇವೆಂದು ತಮ್ಮ ವರದಿಯಲ್ಲಿ ಹೇಳಿದ್ದೀರಿ. ಅಹರಲ್ಲಿ ದೊಡ್ಡ ರೈತರು ಎಷ್ಟು ಮಂದಿ ಇದ್ದಾರೆ ಮತ್ತು ಸಣ್ಣ ರೈತರು ಎಷ್ಟು ಮಂದಿ ಇದ್ದಾರೆ, ಹಾಗೂ ನೀವು ಕೊಟ್ಟಿರತಕ್ಕ ಅಂಕಿ ಅಂಶಗಳೆಲ್ಲ ಸರಿಯಾಗಿವೆಯೋ ಎಂದು ಕೇಳುತ್ತೇನೆ ? ೨೭ ಸಾವಿರ ಜನರಿಗೂ ಈ ಒಂದು ಸಾಲವನ್ನು ಒದಗಿಸಲು ಇರತಕ್ಕ ತೊಂದರೆಯಾದರೂ ಏನು ? ಇದನ್ನು ವಿಚಾರ ಮಾಡಬೇಕು. ಮಾನ್ಯ ಸಹಕಾರ ಸಚಿವರು ಒಂದು ಸಾರಿಯಾದರೂ ಯಾವುದಾದರೂ ಒಂದು ಜಿಲ್ಲೆಯನ್ನು ರೆವ್ಯೂ ಮಾಡಿದರೆ ನಿಜವಾದ ಅಂಶ ಏನು, ಇಲಾಖಾಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆಂಬುದು ಗೊತ್ತಾಗುತ್ತಿತ್ತು. ಇವರು ಆ ಕೆಲಸವನ್ನು ಮಾಡಿಲ್ಲ. ೨೬೩೨ ಜನ ಸಾಲಗಾರರಿಗೆ ೧೮೩೧.೮ ಲಕ್ಷ ರೂಪಾಯಿಗಳನ್ನು ಒದಗಿಸಿದ್ದಾರೆ, ಅದರಲ್ಲಿ ಮಾರ್ಜಿನಲ್ ಫಾರ್ಮರ್ಸ್ ೧೮೨೩೦ ಮಂದಿ ಮತ್ತು ೯೪೦೨ ಮಂದಿ ಸಣ್ಣ ರೈತರು ಎಂದು ಹೇಳಿದ್ದಾರೆ. ಹೀಗೆ ಒಟ್ಟು ೨೭ ಸಾವಿರ ಜನ ರೈತರಿಗೆ ಈ ವರ್ಷ ಸಾಲ ಕೊಟ್ಟಿದ್ದೇವೆಂದು ಹೇಳಿದ್ದಾರೆ, ಅಲ್ಲಿಗೆ ಬಹಳ ಜನ ರೈತರು ಉದ್ಧಾರವಾಗಿರಬೇಕು. ಈ ಇಲಾಖೆ ಮುಂಚೆ ಸರಿಯಾದ ಇಲಾಖೆಯಾಗಿತ್ತು, ಇದಕ್ಕೆ ಕ್ಯಾಬಿನೆಟ್ ದರ್ಜೆಯ ಮಂತ್ರಿಗಳಿರುತ್ತಿದ್ದರು. ಈಗ ಇದರ ಬಗ್ಗೆ ತಾತ್ಸಾರ ಮನೋಭಾವನೆಯನ್ನು ತಾಳಿದ ಹಾಗೆ ಕಾಣುತ್ತದೆ. ಹಿಂದೆ ೨೦ ಅಂಶಗಳ ಕಾರ್ಯಕ್ರಮ ಜಾರಿಯಲ್ಲಿದ್ದಾಗ ಈ ಇಲಾಖೆ ಬಹಳ ಪ್ರಾಮುಖ್ಯವಾಗಿತ್ತು. ಈಗಲಾದರೂ ಕೂಡ ಸಹಕಾರ ಸಚಿವರು ಎಲ್ಲ ಜಿಲ್ಲೆಗಳಲ್ಲೂ ಪ್ರವಾಸ ಮಾಡಿ ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಎಲ್ಲ ಸೊಸೈಟಿಗಳ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಇಲಾಖಾಧಿಕಾರಿಗಳನ್ನು ಕರೆಸಿ ಯಾವ ಯಾವ ಸಂಸ್ಥೆಗಳು ಹಣ ದುರುಪಯೋಗ ಮಾಡಿವೆ, ಯಾವ ಯಾವ ಸಂಸ್ಥೆಗಳು ಸಾಲವನ್ನು ಕೊಟ್ಟಿಲ್ಲ ಎಂಬುದನ್ನು ರೆವ್ಯೂ ಮಾಡಬೇಕೆಂದು ಹೇಳುತ್ತೇನೆ. ಆಗ ಅರ್ಥವಾಗುತ್ತದೆ ಎಷ್ಟು ಜನ ಅಧಿಕಾರಿಗಳು ಕೆಲಸ ಮಾಡಿಲ್ಲ ಎಂಬುದು. ಜೊತೆಗೆ ಅಸಿಸ್ಟೆಂಟ್ ರಿಜಿಸ್ಟ್ರಾರ್ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್‌ಗಳು ಎಷ್ಟೆಷ್ಟು ಸೊಸೈಟಿಗಳನ್ನು ವಿಸಿಟ್ ಮಾಡಿದ್ದಾರೆ ಹಾಗೂ ತನಿಖೆ ನಡೆಸಿದ್ದಾರೆಂಬುದನ್ನು ಸಹ ನೋಡಬಹುದು, ಮಂತ್ರಿ ಯಾರು ಅಧ್ಯಕ್ಷರನ್ನು ಡೈರೆಕ್ಟರನ್ನು ಹೆದರಿಸುವುದು ಇತ್ಯಾದಿ ಮಾಡುತ್ತಾರೆ, ಯಾರಿಗೆ ಹಣ ಕೊಟ್ಟಿದ್ದಾರೆ, ಯಾರಿಗೆ ಹಣ ಕೊಟ್ಟಿಲ್ಲ ಎಂಬುದನ್ನು ಸಹ ನೋಡಬಹುದು. ಮೇಲಾಗಿ ಇಲಾಖೆಯಲ್ಲಿರತಕ್ಕ ಅಸಿಸ್ಟೆಂಟ್ ರಿಜಿಸ್ಟ್ರಾರ್‌ಗಳಿಗೆ ಡೆಪ್ಯೂಟಿ ರಿಜಿಸ್ಟ್ರಾರ್ ಆಗಿ ಬಡ್ತಿ ನೀಡಿದ್ದಾರೆಯೇ ಇಲ್ಲವೆ ಎಂಬುದನ್ನು ನೋಡಬೇಕು. ಈ ಎಲ್ಲ ದೃಷ್ಟಿಯಿಂದ ಇಲಾಖೆ ಸರಿಯಾಗಿ ಕೆಲಸ ಮಾಡದಿದ್ದರೆ ಇಲಾಖೆ ಬದುಕುವುದಿಲ್ಲ ಮತ್ತು ಆದರಿಂದ ರೈತರಿಗೆ ಏನೂ ಪ್ರಯೋಜನವಾಗುವುದಿಲ್ಲ. ಇಲಾಖೆ ಬದುಕಿದರೆ ರೈತರು ಬದುಕುತ್ತಾರೆ, ರೈತರು ಬದುಕಬೇಕಾದರೆ ಇಲಾಖೆ ಬದುಕಿರಬೇಕು, ಈ ಇಲಾಖೆಗೆ ಶಕ್ತಿ ಇರಬೇಕು. ಎಷ್ಟೆಷ್ಟು ಹಣ ಕೊಡಬೇಕೆಂಬುದನ್ನು ವಿಚಾರ ಮಾಡಬೇಕು. ಇವತ್ತಿನ ದಿವಸ ೫೦೦–೧೦೦೦ ರೂಪಾಯಿ ಸಾಲ ಕೊಟ್ಟಿದ್ದು ಅದನ್ನು ರೈತ ವಾಪಸ್ಸು ಕೊಡಲಿಲ್ಲವೆಂದರೆ ಅವನನ್ನು ಡೀಫಾಲ್ಟರ್ ಎಂದು ಮಾಡಿ ಅವನಿಗೆ ಸಾಲ ಕೊಡುವುದಿಲ್ಲ. ಅವನ ಶಕ್ತಿ ಏನಿದೆ, ಅವನು ಏತಕ್ಕಾಗಿ ಕೊಡಲಿಲ್ಲ, ಅವನಿಗೆ ಆ ಸಾಲ ತೀರಿಸಲು ಮತ್ತೆ ಹಣ ಕೊಡಬೇಕೇ ಎಂಬುದನ್ನು ವಿಚಾರ ಮಾಡಿಲ್ಲ. ಅವನು ಡೀಫಾಲ್ಟರ್ ಆಗಿರುವುದರಿಂದ ಅವನಿಗೆ ಸಾಲ ಕೊಡುವುದು ಬೇಡ ಎಂಬ ಅಭಿಪ್ರಾಯ ಬಂದದ್ದರಿಂದ ಆ ಜನರು ಪಡತಕ್ಕ ಕಷ್ಟವನ್ನು ಹೇಳತೀರದಾಗಿದೆ. ರೈತ ಸಹಕಾರ ಸಂಘದಿಂದ ಪಡೆಯತಕ್ಕ ಸಾಲಕ್ಕೆ 12½ ಪರ್ಸೆಂಟ್ ಬಡ್ಡಿ ಕೊಡಬೇಕು. ಜೊತೆಗೆ ಅವನು ಕೊಳ್ಳತಕ್ಕ ಪದಾರ್ಥಗಳಾದ ಹಾರೆ–ಗುದ್ದಲಿಗೆ ೫೦–೬೦ ರೂಪಾಯಿ ಕೊಡಬೇಕು, ಆದರೆ ಅವನು ಮಾರತಕ್ಕ ರಾಗಿಗೆ ಮಾತ್ರ ಕ್ವಿಂಟಾಲಿಗೆ ೧೫೦ ರೂಪಾಯಿ

ಈ ಒಂದು ತಾರತಮ್ಯ ಶೇಕಡ ೮೦ ರಷ್ಟು ಮಂದಿ ರೈತರು ಏನು ನಮ್ಮ ದೇಶದಲ್ಲಿದ್ದಾರೆ ಅವರೆಲ್ಲರಿಗೂ ಆಗುತ್ತಿದೆ. ಹೀಗಾದರೆ, ಅವರು ಹೇಗೆ ಬದುಕಬೇಕು ? ಅವರನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತಾರೆ, ಆದರೆ ಏನು ಉದ್ಧಾರ ಮಾಡಿದ್ದೇವೆಂಬುದನ್ನು ಹೇಳುವವರು ಯೋಚನೆ ಮಾಡಬೇಕು. ಈ ದೃಷ್ಟಿಯಲ್ಲಿ ಸರಿಯಾದ ರೀತಿಯಲ್ಲಿ ಕೆಲಸ ಮಾಡದೆ ಇದ್ದರೆ ನಾವು ಯಾರು ಎಷ್ಟು ಮಂದಿ ಈ ಒಂದು ಪಾತ್ರದಲಿ ಬಾಗಿಯಾಗಿದ್ದೇವೆಂಬುದನ್ನು ವಿಚಾರ ಮಾಡಬೇಕು ಈ ದಿಸೆಯಲ್ಲಿ ನಮ್ಮ ಶ್ರೀಕಂಠಯ್ಯನವರು ನವಚೈತನ್ಯ ಕೊಟ್ಟು ಕೆಲಸ ಮಾಡಿದಿದ್ದರೆ ಬಹಳ ಕಷ್ಟವಾಗುತ್ತದೆ. ಅವರು ಸ್ವತಃ ರೈತರು ಮತ್ತು ಅವರ ಸುತ್ತ ಮುತ್ತ ಬಡವರಿದ್ದಾರೆ. ಆದರೆ ಅವರು ಇವತ್ತಿನ ದಿವಸ ಎಷ್ಟಕ್ಕೆ ಸೀಮಿತ ವಾಗಿದ್ದಾರೆಂದರೆ, ತನ್ನ ಕ್ಷೇತ್ರ, ತನ್ನ ಜಿಲ್ಲೆ, ತಮ್ಮ ರಾಜಕಾರಣದಲ್ಲೇ ಮಗ್ನರಾಗಿ ಈ ಇಲಾಖೆಯನ್ನು ಪೂರ್ಣವಾಗಿ ಕಡೆಗಣಿಸಿದ್ದಾರೆ. ಹೀಗಾದರೆ ರೈತರು ಶಾಪ ಹಾಕಿಯಾರು ಎಂಬ ಎಚ್ಚರಿಕೆಯನ್ನು ನಾನು ಈ ಸಂದರ್ಭದಲ್ಲಿ ನೀಡಬಯಸುತ್ತೇನೆ. ಈ ದೃಷ್ಟಿಯಿಂದು ಪ್ರತಿಯೊಂದು ಜಿಲ್ಲೆಗಳಿಗೂ ಹೋಗಿ ಎಲ್ಲ ಸಹಕಾರ ಸಂಘಗಳನ್ನು ರೆವ್ಯೂ ಮಾಡಿ ಆ ಜನರಿಗೆ ಏನು ಸಹಾಯ ಮಾಡಬೇಕು, ಯಾವ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಿಲ್ಲ ಎಂಬುದನ್ನು ತನಿಖೆ ಮಾಡಿ ನೋಡಬೇಕು. ಜಿಲ್ಲಾ ಮತ್ತು ವಿಭಾಗ ಮಟ್ಟಗಳಲ್ಲಿ ಮೀಟಿಂಗ್‌ಗಳನ್ನು ಕರೆಯಬೇಕು. ಬರೀ ಬೆಂಗಳೂರಿನಲ್ಲಿ ಕುಳಿತು ರಾಜಕಾರಣ ಮಾಡಿದರೆ ಸಾಲದು. ಎಲ್ಲ ಕಡೆ ಮಾಡಿದರೆ ಜನರಿಗೆ ಬಹಳ ಸಹಾಯವಾಗುತ್ತೆಂಬ ಆಸೆಯನ್ನು ನಾನಾದರೂ ಇಟ್ಟುಕೊಂಡಿದ್ದೇನೆ, ಏಕೆಂದರೆ ಇವರಿಗೆ ಎಲ್ಲ ರೀತಿಯ ಕಷ್ಟ ಸುಖ ಗೊತ್ತಿದೆ, ಜೊತೆಗೆ ಇವರು ರೈತ ಕುಟುಂಬದಿಂದ ಬಂದವರು. ಮೇಲಾಗಿ, ಅವರ ಬಂಧು ಬಳಗವೆಲ್ಲ ಬಡತನದಲ್ಲೇ ಇದ್ದಾರೆ. ನಮಗೆ ಇವರಿಂದ ಬಹಳ ಸಹಾಯವಾಗುತ್ತದೆಂದು, ಇವರಿಂದ ನಮ್ಮ ಜನ ಬದುಕುತ್ತಾರೆಂದು ತಿಳಿದುಕೊಂಡಿದ್ದೆವು, ಆದರೆ ಇವರು ಅಷ್ಟೊಂದು ವಿಶಾಲವಾಗಿ ಹೋಗಲಿಲ್ಲ. ಆ ದೃಷ್ಟಿಯಿಂದ, ಈಗಲಾದರೂ ಅವರು ಆ ಕಡೆ ತಮ್ಮ ಗಮನವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

(ಅಧ್ಯಕ್ಷರು ತಮ್ಮ ಪೀಠಕ್ಕೆ ಬಂದರು)

ಪ್ರಾಥಮಿಕ ಮತ್ತು ಜಿಲ್ಲಾ ಬ್ಯಾಂಕುಗಳನ್ನು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡದೆ ಹೋದರೆ ನಿಮ್ಮ ಯೋಜನೆ ಎಲ್ಲ ಭಾಷಣದ ರೂಪದಲ್ಲಿ ಉಳಿಯುತ್ತದೆಯೇ ವಿನಹ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆ ದೃಷ್ಟಿಯಿಂದ ದೊಡ್ಡ ರೈತರು, ಮಧ್ಯಮ ರೈತರು ಸಣ್ಣ ರೈತರು ಎಂದು ವಿಭಜಿಸದೆ ದೊಡ್ಡ ರೈತರಿಗೂ ಸಹಾಯ ಧನ ಕೊಡುವ ವ್ಯವಸ್ಥೆ ಮಾಡಬೇಕು. ಅವರೇನು ಅಂಥ ಶ್ರೀಮಂತರಲ್ಲ. ರೈತರಾಪಿ ವರ್ಗದಲ್ಲಿದ್ದು ವ್ಯಾಪಾರ ಮಾಡುತ್ತಿರುವವರಿಗೆ ಕೊಡಬೇಡಿ, ಯಾರು ಅದನ್ನೇ ಜೀವನಕ್ಕೆ ಹಚ್ಚಿಕೊಂಡಿದ್ದಾರೆ ಅಂಥವರಿಗೆ ಸಾಲ ಕೊಡಿ. ಒಟ್ಟಿನಲ್ಲಿ, ಪ್ರತಿಯೊಬ್ಬ ರೈತರಿಗೂ ಸಹಾಯ ಧನ ನೀಡತಕ್ಕ ಪದ್ಧತಿಯನ್ನು ಜಾರಿಗೆ ತರಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

೫-೦೦ ಪಿ.ಎಂ.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ವಿಷಯವಾಗಿ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಸೆಸ್ಸನ್ನು ೨ ಪರ್ಸೆಂಟ್ ಏನು ಹಾಕಲಾಗಿದೆ ಅದನ್ನು ಕಡಿಮೆ ಮಾಡಬೇಕೆಂದು ಕೇಳುವವರು ಬರೀ ವರ್ತಕರು ಮಾತ್ರ, ರೈತರು ಇದನ್ನು ಕೇಳುತ್ತಿಲ್ಲ. ಇಲ್ಲಿ ಯಾರು ಮಾಲನ್ನು ಖರೀದಿ ಮಾಡುತ್ತಾರೆಯೋ ಅವರು ಮಾತ್ರ ೨ ಪರ್ಸೆಂಟ್ ಸೆಸ್ಸನ್ನು ಕೊಡಬೇಕೆಂದು ಇದೆ. ಈ ಸೆಸ್ ಬಗ್ಗೆ ನಾನು ಹೇಳಬೇಕೆಂದಿರುವುದುಏನೆಂದರೆ, ಈ ೨ ಪರ್ಸೆಂಟ್ ಸೆಸ್ ಕೂಡಾ ಕೆಲವು ಕಡೆ ಸರಿಯಾಗಿ ವಸೂಲಿಯಾಗುತ್ತಿಲ್ಲ. ಎಲ್ಲೋ ಕೆಲವು ಭಾಗದಲ್ಲಿ ಇದರ ವಸೂಲಿ ಸರಿಯಾಗಿ ಆಗುತ್ತಿದೆ. ಈ ಬಗ್ಗೆ ಅಲ್ಲ ಸೆಕೆಂಡ್ ಅಕೌಂಟ್ ಸಿಸ್ಟಮ್ ಇದೆ. ಈ ಮಾರ್ಕೆಟ್ ಸೆಸ್ಸನ್ನು ಸರಿಯಾಗಿ ವಸೂಲು ಮಾಡಿದರೆ ಅದರ ಜೊತೆಗೆ ಮಾರಾಟ ತೆರಿಗೆಯೂ ತನಗೆ ತಾನೇ ಬರುತ್ತದೆ. ಇವೆರಡಕ್ಕೂ ಸಂಬಂಧ ಇದೆ. ಈ ಸೆಸನ್ನು ಸರಿಯಾಗಿ ವಸೂಲಿ ಮಾಡಿದರೆ ನಾವು ಏನು ಮಧ್ಯಪಾನದಿಂದ ಹಣವನ್ನು ಸಂಪಾದನೆ ಮಾಡುತ್ತಿದ್ದೇವೆ ಅದು ನಮಗೆ ಬೇಕಾಗಿಲ್ಲ. ಅಲ್ಲಿ ಎಷ್ಟು ಹಣ ಬರುತ್ತದೆ ಅದರ ಎರಡು ಪಟ್ಟು ಹಣ ಈ ಸೆಸನ್ನು ಸರಿಯಾಗಿ ವಸೂಲಿ ಮಾಡಿದಲ್ಲಿ ಬರುತ್ತದೆ. ಒಂದು ಮೂಟೆಗೆ ೮ ರೂಪಾಯಿ ಸೆಸ್ ಬಂದರೆ, ಅದರ ಮಾರಾಟದಿಂದ ಅದರ ನಾಲ್ಕು ಪಟ್ಟು ತೆರಿಗೆ ಬರುತ್ತದೆ. ಕದ್ದು ಮಾರುವವನಿಗೆ ಅದೆಲ್ಲಾ ಲಾಭ, ಎಲ್ಲ ಆತನ ಜೋಬಿಗೆ ಹೋಗುತ್ತದೆ. ಅಬಕಾರಿಯಿಂದ ಬರುವ ಹಣಕ್ಕಿಂತಾ ಇದರಲ್ಲೇ ಹೆಚ್ಚು ಹಣ ಬರುವುದರಿಂದ, ಮುಂದೆ ಪಾನ ನಿರೋಧ ಜಾರಿಗೆ ತಂದು ಜನರ ಆರೋಗ್ಯ ಭಾಗ್ಯವನ್ನು ಕಾಪಾಡಬಹುದು. ದುರ್ಮಾಗದಲ್ಲಿರುವವರನ್ನು

ಒಳ್ಳೆಯ ದಾರಿಗೆ ತರಬಹುದು. ಆದ್ದರಿಂದ ಸೆಸ್ಸನ್ನು ಬಿಡದೆ ವಸೂಲಿ ಮಾಡುವ ಕಡೆ ಹೆಚ್ಚು ಲಕ್ಷ್ಯ ಕೊಡಬೇಕೆಂದು ಹೇಳಿ, ಮಾನ್ಯ ಸಹಕಾರ ಮಂತ್ರಿಗಳು ಇಲಾಖೆ ಬಗ್ಗೆ ಹೆಚ್ಚು ಶ್ರಮವಹಿಸಿ ಕೆಲಸ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಚ್. ಗಂಗಾಧರನ್.—ಅಧ್ಯಕ್ಷರೇ,

ಅಧ್ಯಕ್ಷರು.—ಮಾನ್ಯ ಮಂತ್ರಿಗಳ ಉತ್ತರ ೫ ಗಂಟೆಗೆ ಪ್ರಾರಂಭವಾಗಬೇಕಾಗಿತ್ತು. ಇನ್ನೂ ೫ ಜನ ಮಾತನಾಡುವವರು ಇದ್ದಾರೆ. ಆ ನಂತರ ಮಾನ್ಯ ಮಂತ್ರಿಗಳು ೧ ಗಂಟೆ ಉತ್ತರ ಕೊಡಬೇಕಾಗುತ್ತದೆ. ತಾವು ತಮ್ಮ ಭಾಷಣವನ್ನು ಬೇಗ ಮುಗಿಸಿ.

ಶ್ರೀ ವಿ. ಲಕ್ಷ್ಮೀಸಾಗರ್.—ಈ ದಿನ ಚರ್ಚೆ ಆಗಲಿ. ನಾಳೆ ೧ ಗಂಟೆ ಮುಂಚೆ ಸಭೆ ಸೇರಿ ಈ ಬೇಡಿಕೆ ಮೇಲೆ ಮಾನ್ಯ ಮಂತ್ರಿಗಳು ಉತ್ತರ ಕೊಡಬಹುದು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ನಾಳೆ ಬೇಕಾದರೆ ಉತ್ತರವನ್ನು ನಾನು ಕೊಡಬಲ್ಲೆ.

ಅಧ್ಯಕ್ಷರು.—ಹಾಗಾದರೆ ನಾಳೆ ೧ ಗಂಟೆ ಬೇಗ ಸಭೆ ಸೇರುವುದು ಸೂಕ್ತ.

ಶ್ರೀ ಎಚ್. ಗಂಗಾಧರನ್.—ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಈ ಸಹಕಾರ ಚಳುವಳಿ ಇಡೀ ಭಾರತದಲಿಯೇ ಅತ್ಯಂತ ಪ್ರಗತಿಯಿಂದ ಸಾಗಿದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಬಹುಶಃ ಭಾರತದಲ್ಲಿಯೇ ಅಲ್ಲ, ಜಗತ್ತಿನಲ್ಲಿ ಯಾವ ರಾಜ್ಯದಲ್ಲಿಯೂ ಇಲ್ಲದಂತಹ ಪ್ರಗತಿಯನ್ನು ಸಾಧಿಸಿದೆಯೆಂದು ನಾನು ಹೇಳುತ್ತಿದ್ದೇನೆ. ಯಾವ ದಿಕ್ಕಿನಲ್ಲಿ ಇವತ್ತು ಪ್ರಗತಿಯಾಗಿದೆಯೆಂಬುದನ್ನು ನಾವು ಇಲ್ಲಿ ವಿಚಾರ ಮಾಡಬೇಕಾಗಿದೆ. Our State Co-operative movement is highly progressive in abundent misappropriation and enormous corruption. ಈ ದಿಕ್ಕಿನಲ್ಲಿ ಅಪಾರವಾದ ಧನದ ಅಪಹರಣ ಆಗಾದ ಭ್ರಷ್ಟಾಚಾರದಲ್ಲಿ ಕರ್ನಾಟಕ ರಾಜ್ಯದ ಸಹಕಾರ ಚಳುವಳಿ ಬಹಳ ಮಟ್ಟಿಗೆ ಪ್ರಗತಿಯನ್ನು ಸಾದಿಸಿದೆ ಎನ್ನುವ ಮಾತನ್ನು ಮೊಟ್ಟಮೊದಲು ಪ್ರಾಸ್ತಾವಿಕವಾಗಿ ಸೂಚಿಸುತ್ತಾ ಅದಕ್ಕೆ ಅಧಾರಗಳು ಏನು ಎಂಬುದರ ಬಗ್ಗೆ ಕೇಳಿದರೆ, ನಮ್ಮ ಸರ್ಕಾರದವರು ಒಪ್ಪಿಕೊಂಡಿರತಕ್ಕ ಕೆಲವು ಅಂಶಗಳನ್ನು ಮಾತ್ರ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಕರ್ನಾಟಕ ಜಾಯಿಂಟ್ ಫಾರ್ಮಿಂಗ್ ಕೋ ಅಪರೇಟಿವ್ ಸೊಸೈಟಿಯಲ್ಲಿ ರೂ. ೩,೫೬,೭೧೬ ದುರುಪಯೋಗ ಆಗಿದೆಯೆಂದು ಶ್ರೀ ಮಾದೇಗೌಡರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದಾರೆ. ಬಳ್ಳಾರಿ ಸೆಂಟ್ರಲ್ ಕೊ-ಅಪರೇಟಿವ್ ಸೊಸೈಟಿಯಲ್ಲಿ ಅಪಾರವಾದ ಹಣ ಅಪಹರಣವಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಹಾಗೂ ಟಿ.ಎ.ಪಿ.ಸಿಎಂ.ಎಸ್. ಲಿಮಿಟೆಡ್ ಬಳ್ಳಾರಿಯಲ್ಲಿ ಫಂಡ್ಸ್ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಎಂಬುದನ್ನು ಸರ್ಕಾರ ಒಪ್ಪಿಕೊಂಡಿದೆ. ಅಗ್ರಿಕಲ್ಚರಲ್ ಸರ್ವೀಸ್ ಕೋ-ಅಪರೇಟಿವ್ ಸೊಸೈಟಿ, ಹೆಬ್ಬಾಳದಲ್ಲಿ ರೂ. ೨೭,೭೧೩.೨೨ ದುರುಪಯೋಗವಾಗಿದೆಯೆಂದು ಒಪ್ಪಿಕೊಳ್ಳಲಾಗಿದೆ. ಇಲ್ಲಿ ಮತ್ತೊಮ್ಮೆ ರೂ. ೯,೫೫೮ ಹಣ ದುರುಪಯೋಗವಾಗಿದೆ. ಹೀಗೆ ಹಣ ದುರುಪಯೋಗವಾಗಿರುವುದನ್ನು ಸರ್ಕಾರ ಈ ಸದನದಲ್ಲಿ ಒಪ್ಪಿಕೊಂಡಿದೆ, ಹೀರೇಹಡಗಲಿ ಸರ್ವೀಸ್ ಕೊ-ಅಪರೇಟಿವ್ ಸೊಸೈಟಿಯಲ್ಲಿ ಹಣ ಅಧಿಕವಾಗಿ ದುರ್ವಿನಿಯೋಗವಾಗಿರುವುದನ್ನು ಸರ್ಕಾರ ಒಪ್ಪಿಕೊಂಡಿದೆ. ಅಗ್ರಿಕಲ್ಚರಲ್ ಸೇವಾ ಸಹಕಾರ ಸಂಘ, ಬಂಟ್ವಾಳದಲ್ಲಿ ಹಣ ದುರುಪಯೋಗವಾಗಿದೆ. ಮಲ್ಲೇಶ್ವರಂ ಪ್ರೋಸೆಸಿಂಗ್ ಕೋ-ಅಪರೇಟಿವ್ ಸೊಸೈಟಿ, ಹಗರಿಬೊಮ್ಮನಹಳ್ಳಿಯಲ್ಲಿ ಸುಮಾರು ೨.೩೩,೯೫೧.೦೪ ರೂಪಾಯಿ ದುರ್ವಿನಿಯೋಗವಾಗಿದೆ, ಕಾಸ್ಟ್ ಆಫ್ ಸೆಂಟ್ರಲ್ ಕೊ-ಆಪರೇಟಿವ್ ಬಿಲ್ಡಿಂಗ್, ರಾಯಚೂರು ಇಲ್ಲಿ ರೂ. ೧೩.೪೮ ಲಕ್ಷ ಹಾಗೂ ವಿ.ಎಸ್.ಎಸ್.ಎಲ್, ಹುಣಸೇಹಳ್ಳಿ, ಶಿರಾ ತಾಲ್ಲೂಕು ಇಲ್ಲಿ ೨೮,೭೫೬,೬೨ ರೂಪಾಯಿ ದುರ್ವಿನಿಯೋವಾಗಿದೆ. ಹಾಗೂ ಉತ್ತೂರು ಆಸ್ಪತ್ರೆ ಕೊ-ಆಪರೇಟಿವ್ ಫಾರ್ಮಿಂಗ್ ಸೊಸೈಟಿ, ಹುಣಸೂರು ಇಲ್ಲಿ ಕೂಡಾ ರೂ, ೧.೬೩,೯೧೪.೧೨ ಮತ್ತು ರೂ. ೧೬,೫೦೦ ಹೀಗೆ ಹಣ ದುರುಪಯೋಗವಾಗಿದೆಯೆಂಬುದನ್ನು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೨,೪೯,೨೯೮-೭೧ ರೂಪಾಯಿಗಳು ಮೈಸೂರು ಜಿಲ್ಲೆಯಲ್ಲಿ ೩೦ ಲಕ್ಷ ರೂಪಾಯಿಗಳು ಈ ರೀತಿಯಾಗಿ ದುರಪಯೋಗವಾಗಿದೆ, ಇದು ನೀವು ಸಾಧಿಸಿರತಕ್ಕ ಪ್ರಗತಿ, ಮಾನ್ಯ ಮಂತ್ರಿಯವರು ತಮ್ಮ ವರದಿಯಲ್ಲಿ ಹೇಳುತ್ತಾ ೧.೩೮ ಕೋಟಿ ರೂಪಾಯಿಗಳು ದುರುಪಯೋಗವಾಗಿರುವುದನ್ನು ಕಂಡು ಹಿಡಿಯಲಾಗಿದೆ ಎಂದು ಬಹಳ ಸಂತೋಷದಿಂದ ಹೇಳಿಕೊಂಡಿದ್ದಾರೆ. ಹೈಲೆಟ್ ಎಂದು ಹೇಳಿಕೊಂಡಿ

ದ್ದಾರೆ. ಇಂಥ ದಿಕ್ಕಿನಲ್ಲಿ ಮುಂದುವರಿಯತಕ್ಕಂಥ ಸಂಘ ಸಂಸ್ಥೆಗಳು ನಮ್ಮ ದೇಶದಲ್ಲಿ ಬೆಳೆಯುತ್ತವೆ. ತಾವು ಕೊಟ್ಟಂತಹ ವರದಿಯಲ್ಲಿ ಎಷ್ಟು ಸಹಕಾರಸಂಘಗಳು ಕಬ್ಬಿಣ ತಿಂದಿವೆ? ಸಿಮೆಂಟ್ ತಿಂದಿವೆ? ಎಷ್ಟು ಗೋಣಿಚೀಲ ತಿಂದಿವೆ? ಎಷ್ಟು ಗೊಬ್ಬರ ತಿಂದಿವೆ? ಎಷ್ಟು ಧವಸಧಾನ್ಯ ತಿಂದಿವೆ? ಇದರ ಬಗ್ಗೆ ನಿಮ್ಮ ವರದಿಯಲ್ಲಿಏನೂಕಾಣುತ್ತಿಲ್ಲ: ನಾಲ್ಕುಸಾವಿರ ಸೊಸೈಟಿಗಳ ಆಡಿಟ್ಆಗಿಲ್ಲವೆಂದು ಹೇಳಿದ್ದೀರಿ. ಸುಮಾರು ೫೦೦ಕೋಟಿ ರೂಪಾಯಿಗಳನ್ನು ಈ ದೇಶದ ಮಿಷನರಿಗಾಗಿ ಖರ್ಚುಮಾಡುತ್ತಿರುವ ಸಂದರ್ಭದಲ್ಲಿನಾಲ್ಕು ಸಾವಿರ ಸೊಸೈಟಿಗಳ ಆಡಿಟ' ಮಾಡಿಸುವುದಕ್ಕೆ ಮತ್ತು ತನಿಖೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿಲ್ಲ. ಬಡಜನರ ಬೆವರಿನಿಂದ ಕಟ್ಟಿರತಕ್ಕಂಹ ಈ ಸಂಸ್ಥೆಗಳು ಯಾರ ರಕ್ತವನ್ನು ಹೀರುತ್ತವೆ ಎನ್ನುವ ಬಗ್ಗೆ ಸರ್ಕಾರ ತನ್ನ ಗಮನವನ್ನು ಹರಿಸಿಲ್ಲ ಎನ್ನುವುದು ವಿಷಾದಕರವಾದ ಸಂಗತಿ. ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷದ ಒಬ್ಬರು ಸಂಪಾದಕರಾಗಿರತಕ್ಕಂಥ ದಿನ ಪತ್ರಿಕೆಯೊಂದು ವರದಿ ಮಾಡಿದೆ. "ಡೈಲಿ ಸಾಲಾರ್" ಎನ್ನುವ ಉರ್ದು ಪತ್ರಿಕೆ ಎಂ.ಎಲ್.ಸಿ ರಹಮಾನ್ ಖಾನ್‌ರವರು ಇದರ ಸಂಪಾದಕರಾಗಿ ದ್ದಾರೆ. ಮೈಸೂರು ಜಿಲ್ಲೆ ನಂಜನಗೂಡು ತಾಲ್ಲೂಕಿನಲ್ಲಿರುವ ಒಂದು ಸಹಕಾರ ಸಂಘ, ತಾಲ್ಲೂಕು ಮಾರುಕಟ್ಟೆ ಸಮಿತಿ ಹಿಂದೆ ಲಕ್ಷಾಂತರ ರೂಪಾಯಿ ದುರ್ವಿನಿಯೋಗ ಮಾಡಿದಂತ ಸಂದರ್ಭದಲ್ಲಿ ಸಂಬಂಧಪಟ್ಟ ಅಧಿಕಾರಿ ಅತ್ಮಹತ್ಯೆ ಮಾಡಿಕೊಂಡ ಕಥೆಯನ್ನು ಕೇಳುತ್ತಿರುವಾಗಲೇ, ಇತ್ತೀಚಿಗೆ ಸದರೀ ಕೋ ಆಪರೇಟಿವ್ ಸೊಸೈಟಿ ೬,೦೦೦ ಕ್ವಿಂಟಲ್ ಭತ್ತವನ್ನು ಸಂಗ್ರಹ ಮಾಡಿದ್ದು. ಅದು ನಾಪತ್ತೆ ಯಾಗಿದೆಯೆಂದು ವರದಿಯಾಗಿದೆ. ಹಾಗೆ ಮೈಸೂರು ಜಿಲ್ಲೆಯಲ್ಲಿ ೪,೦೦೦ ಕ್ವಿಂಟಾಲ್ ಸಂಗ್ರಹ ಮಾಡಿ ದಂತ ಭತ್ತ ಕೂಡ ನಾಪತ್ತೆಯಾಗಿದ್ದು ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಂಡು ಉಳಿಸಿರತಕ್ಕ ಭತ್ತ ವನ್ನು ಶ್ರೀರಂಗಪಟ್ಟಣಕ್ಕೆ ಸಾಗಿಸುತ್ತಿದ್ದಾರೆ. ಸುಮಾರು ೧೦-೧೫ ಲಕ್ಷ ರೂಪಾಯಿಗಳ ಭತ್ತ ಇಲ್ಲ ಅಂದರೆ, ನೀವು ಜನಗಳಿಗೆ ಅನ್ನ ಹೇಗೆ ಒದಗಿಸುತ್ತೀರಿ? ನಿಮ್ಮ ಸಹಕಾರ ಸಂಸ್ಥೆಗಳ ಆಡಳಿತ ಎಷ್ಟರ ಮಟ್ಟಿಗೆ ನಡೆಯುತ್ತದೆ ಎನ್ನುವುದಕ್ಕೆ ಇದಕ್ಕಿಂತ ನಿದರ್ಶನ ಇಲ್ಲ. ೧೦-೧೫ ಲಕ್ಷ ರೂಪಾಯಿಗಳ ಭತ್ತ ಇಲ್ಲದಂತಾಗುವುದಕ್ಕೆ ಕಾರಣ ಯಾರು ? ಈ ವಿಚಾರದಲ್ಲಿ ಕೇವಲ ಗುಮಾಸ್ತರುಗಳನ್ನು ಮತ್ತು ಸಣ್ಣ ಪುಟ್ಟ ಅಧಿಕಾರಿಗಳನ್ನು ಸಸ್ಪೆಂಡ್‌ನಲ್ಲಿಟ್ಟಿದ್ದೀರಿ. ಇದರ ಹಿಂದೆ ಪ್ರಭಾವಶಾಲಿ ವ್ಯಕ್ತಿಯೊಬ್ಬರು ಇದ್ದಾ ರೆಂದು ಸಾಲಾರ್ ಪತ್ರಿಕೆಯಲ್ಲಿ ಬರೆದಿದ್ದಾರೆ. ಅಂಥ ಪ್ರಭಾವಶಾಲಿ ವ್ಯಕ್ತಿಗೆ ಸರ್ಕಾರ ಆಶ್ರಯಕೊಟ್ಟಿ ದೆಯೆ? ಅಥವಾ ಅವರನ್ನು ನಿಮ್ಮ ಮನೆಯಲ್ಲಿಟ್ಟಿದ್ದೀರಾ? ಅಥವಾ ಯಾರ ಮನೆಯಲ್ಲಿಟ್ಟಿದ್ದೀರಾ? ಇದನ್ನು ಇದುವರೆಗೂ ತನಿಖೆ ಮಾಡಿಲ್ಲ. ಬಡ ಜನತೆಗೆ ಬೇಕಾದಂತ ಕಾರ್ಯಕ್ರಮಗಳನ್ನು ಯಾವ ಸಂಘಗಳ ಮೂಲಕ ಹಾಕಿಕೊಳ್ಳಲಾಗಿತ್ತೋ ಅಂಥ ಸಂಘಗಳೇ ಹೀಗಾದರೆ ಹೇಗೆ?

ಶ್ರೀ ಸಿ.ಎಂ. ಇಬ್ರಾಹಿಂ.—ಯಾವ ಪತ್ರಿಕೆಯಲ್ಲಿ?

ಶ್ರೀ **ಹೆಚ್**. ಗಂಗಾಧರನ್.—'ಸಾಲಾರ್' ಎನ್ನುವ ಪತ್ರಿಕೆ.

ಶ್ರೀ ಸಿ.ಎಂ. ಇಬ್ರಾಹಿಂ.—ನಿಮಗೆ ಉರ್ದು ಓದುವುದಕ್ಕೆ ಬರುತ್ತದೆಯೇ?

ಶ್ರೀ ಹೆಚ್. ಗಂಗಾಧರನ್.—ಓದಿ ಕೇಳಿದ್ದೇನೆ, ಸಂಗ್ರಹವಾಗಿರತಕ್ಕ ಭತ್ತ ಇಲ್ಲದೇ ಇರುವು ದನ್ನು ಮತ್ತು ಸಹಕಾರ ಸಂಘಗಳು ಇದನ್ನು ದುರ್ವಿನಿಯೋಗ ಮಾಡಿರುವುದನ್ನು ಸರ್ಕಾರದ ಪಕ್ಷದಲ್ಲಿ ರುವಂತಹ ಪತ್ರಿಕೆಗಳೇ ಹೇಳಿದ್ದರೂ ಇದುವರೆವಿಗೂ ಯಾವ ಕ್ರಮವನ್ನು ಕೈಗೊಂಡಿಲ್ಲ. ಸರ್ಕಾರ ಇದರ ಬಗ್ಗೆ ತೀವ್ರವಾದ ಆಸಕ್ತಿ ವಹಿಸಿಲ್ಲ. ಸಹಕಾರ ಸಂಘಗಳ ಮೂಲಕ ಭತ್ತವನ್ನು ಸಂಗ್ರಹಣೆ ಮಾಡಿ, ಜನತೆಗೆ ಅನ್ನ ಒದಗಿಸುವುದಕ್ಕೆ ಬದಲು ಮಣ್ಣಿಡುವಂತ ಕೆಲಸದಲ್ಲಿ ಕೈಹಾಕುವಂತಾದ್ದು, ಈ ದೇಶದಲ್ಲಿ ಪ್ರಗತಿ ಎತ್ತ ಸಾಗುತ್ತಿದೆಯೆಂಬುದನ್ನು ಇದು ಎತ್ತಿ ತೋರಿಸುತ್ತಿದೆ. ನಮ್ಮ ದೇಶದಲ್ಲಿ ಕಳೆದ ೨೫ ವರ್ಷಗಳಿಂದ ಸಹಕಾರ ಸಂಘಗಳಲ್ಲಿ ಆಗಿರತಕ್ಕಂಥ ದುರುಪಯೋಗ ಹಾಗೂ ಅನ್ಯಾಯಗಳ ಬಗ್ಗೆ ಒಂದು ಶ್ವೇತಪತ್ರ ವನ್ನು ಪ್ರಕಟಿಸಬೇಕೆಂದು ಒತ್ತಾಯ ಮಾಡುತ್ತೇನೆ. ಕಳೆದ ೨೫ ವರ್ಷಗಳಲ್ಲಿ ಯಾವ ಯಾವ ಸೊಸೈಟಿಗಳು ಎಷ್ಟೆಷ್ಟು ಹಣ ದುರ್ವಿನಿಯೋಗ ಮಾಡಿವೆ? ಇದಕ್ಕೆ ಕಾರಣರು ಯಾರು? ಅವರು ಯಾವ ಪಕ್ಷಕ್ಕೆ ಸೇರಿದವರು? ಇದೆಲ್ಲಾ ಸಾರ್ವಜನಿಕರಿಗೆ ಗೊತ್ತಾಗಬೇಕಾಗಿದೆ. ಕಳೆದ ೧೭ನೇ ತಾರೀಖು ಪ್ರಜಾವಾಣಿ ಪತ್ರಿಕೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಮೇಲಿದ್ದ ಸುಮಾರು ೧೮,೦೦೦ ರೂಪಾಯಿಗಳಿಗೆ ಸಂಬಂಧಪಟ್ಟ ಪ್ರಶ್ನೆ ನ್ಯಾಯಾಲಯದ ಮುಂದಿದ್ದು, ನ್ಯಾಯಾಲಯ ಅದನ್ನು ರದ್ದು ಪಡಿಸಿದೆ ಎಂದು ವರದಿಯಾಗಿದೆ. ನಮ್ಮ ಸರ್ಕಾರ ಪರಿಶುದ್ಧವಾದ ಸರ್ಕಾರವೆಂದು ಜನತೆಗೆ ತೋರಿಸ ಬೇಕಾಗಿದೆ, ಈ ಕಾರಣಕ್ಕಾಗಿ ಮಾನ್ಯ ಮುಖ್ಯಮಂತ್ರಿಗಳ ಮೇಲಿದ್ದಂತ ಅಪಾದನೆಗಳಿಗೆ ಸಂಬಂಧ

ಪಟ್ಟಂತ ದಾಖಲೆಗಳು ಎಲ್ಲಿ ಹೋದವು? ದಾಖಲಾತಿಗಳನ್ನು ನೋಡಿದಾಗ, ಅವಲೋಕನ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳ ಮೇಲೆ ಬಂದಿರತಕ್ಕಂಥ ಆಪಾದನೆ ಸುಳ್ಳು ಎಂದು ಗೊತ್ತಾದರೆ, ಕರ್ನಾಟಕ ಜನತೆ ಹೆಮ್ಮೆ ಪಡುತ್ತಾರೆ, ಸಂತೋಷ ಪಡುತ್ತಾರೆ. ಅಲ್ಲದೆ, ಸಹಕಾರ ಮಂತ್ರಿಗಳಾದ ತಮ್ಮ ಮೇಲೂ ಕೂಡ ಆಪಾದನೆ ಇದ್ದು. ಅದರ ಬಗ್ಗೆ ಈ ಸದನದಲ್ಲಿ ದೊಡ್ಡ ವಾಗ್ಯುದ್ಧ ನಡೆದು, ಮಾಜಿ ಮುಖ್ಯ ಮಂತ್ರಿಗಳಾಗಿದ್ದಂತ ಶ್ರೀ ದೇವರಾಜ ಅರಸು ಅವರು ಆ ವಿಷಯವನ್ನು ಸಿ.ಓ.ಡಿ.ಗೆ ಒಪ್ಪಿಸಿದ್ದರು ಅದು ಏನಾಯಿತು? ಸತ್ಯಾಂಶ ಏನು ಎಂಬುದು ತಿಳಿಯಲಿಲ್ಲ. ನಿಮ್ಮೆಲ್ಲರ ಹೃದಯವನ್ನು ಜನತೆಯ ಮುಂದೆ ಬಿಚ್ಚಿಡಬೇಕಾದ ಪರಿಸ್ಥಿತಿ ಬಂದಿದೆ. ಈಗ ಮಂತ್ರಿಗಳಾಗಿರುವವರು ಮುಂದೆ ಆಗುವವರು ಯಾರೇ ಇರಲಿ, ಅವರ ಮೇಲೆ ಆಪಾದನೆಗಳು ಇದ್ದರೆ, ಆಪಾದನೆ ಸಹಿತವಾಗಿ ಸದನದ ಮುಂದೆ ಮಂಡಿಸಿದರೆ, ನಿಜವಿದಲ್ಲಿ ಕ್ಷಮಾಪಣೆ ಮಾಡೋಣ. ಕನ್ನಡ ನಾಡಿನಲ್ಲಿ ಶುದ್ಧ ಸರ್ಕಾರ ನಡೆಯುತ್ತಿದೆ ಎನ್ನುವುದು ಜನತೆಗೆ ಗೊತ್ತಾಗಲಿ, ಆ ಕಾರಣಕ್ಕಾಗಿ ಶ್ವೇತಪತ್ರವನ್ನು ಪ್ರಕಟಿಸುತ್ತೇನೆಂದು ಮಾನ್ಯ ಮಂತ್ರಿಯವರು ಉತ್ತರ ಕೊಡುವಾಗ ಹೇಳಲೇಬೇಕು. ಹೇಳದೇ ಇದ್ದ ಪಕ್ಷದಲ್ಲಿ, ವಿರೋಧ ಪಕ್ಷ ತನ್ನ ಕಾರ್ಯಕ್ರಮವನ್ನು ಜರುಗಿಸುವುದಕ್ಕೆ ಬದ್ಧವಾಗಿದೆಯೆಂದು ಸೂಚಿಸುತ್ತೇನೆ. ಶಾವು ಈ ಸದನದಲ್ಲಿ ಪ್ರಕಟಿಸುವಂತಾದ್ದು ಶ್ವೇತ ಪತ್ರವಾಗಿರಬೇಕೇ ಹೊರತು, ಅದು ಪ್ರೇತ ಪತ್ರ ಆಗಬಾರದು. ಕಳೆದ ೨೫ ವರ್ಷಗಳಲ್ಲಿ ನಮ್ಮ ದೇಶ ಗಳಲ್ಲಿ ನಮ್ಮ ದೇಶದಲ್ಲಿ ಸಹಕಾರ ಚಳುವಳಿ ಹೇಗೆ ನಡೆದುಕೊಂಡು ಬಂದಿದೆ. ಎಂಬ ಬಗ್ಗೆ ಸಹಕಾರ ಚಳುವಳಿಯ ಸಮಗ್ರ ಚಿತ್ರವನ್ನು ಶ್ವೇತಪತ್ರದ ಮೂಲಕ ಸದದದ ಮುಂದಿಡಬೇಕು. ಶ್ರೀಮಾನ್ ತೆಕ್ಕೇದ್‌ರವರು. ಶ್ರೀ ಶಿವಪ್ಪನವರು ಈ ವಿಚಾರದಲ್ಲಿ ಮಾತನಾಡಿದ್ದಾರೆ. ಮತ್ತೆ ಸರ್ಕಾರದ ಪ್ರಗತಿ ದಾಯಕವಾದ ಕಾರ್ಯಕ್ರಮಗಳು ಏನೆಂದರೆ. ಕಳೆದಎರಡು ವರ್ಷಗಳಲ್ಲಿ ಆದಂತ ಕೆಲಸಕಾರ್ಯಗಳ ಒಗ್ಗೆ ಅಂಕಿಅಂಶಗಳನ್ನು ಪುಟ ಎರಡರಲ್ಲಿ ಕೊಟ್ಟಿದ್ದೀರಿ. ಸಹಕರಾ ಸಂಘಗಳ ಸದಸ್ಯತ್ವ, ಷೇರು ಕ್ಯಾಪಿಟಲ್, ಡಿಪಾಸಿಟ್, ಲೋನ್ ಅಡ್ವಾನ್ಸ್ ರೂರಲ್ ಪಾಪ್ಯುಲೇಷನ್ ಮತ್ತು ಸಹಕಾರ ಸಂಘಗಳಲ್ಲಿ ಸೇರಿರುವಂತ ಕುಟುಂಬಗಳ ವಿವರಗಳನ್ನು ಕೊಟ್ಟಿದ್ದೀರಿ. ೧೯೮೦ನೇ ಇಸವಿಯಲ್ಲಿ ಏನೊಂದು ಅಂಕಿಅಂಶಗಳನ್ನು ಕೊಟ್ಟಿದ್ದರೋ ೮೧ನೇ ಇಸವಿಯಲ್ಲಿ ಅದೇ ಅಂಕಿಅಂಶಗಳನ್ನು ಹೇಳಿದ್ದೀರಿ. ಶ್ರವಣಬೆಳಗೊಳದಿಂದ ಹೊರಟಂತ ಬಸ್ಸು ಅಲ್ಲೇ ನಿಂತಿದೆ. ಬೆಂಗಳೂರು ತಲುಪಲೇ ಇಲ. ಪುಟ ನಾಲ್ಕರಲ್ಲಿ ಸರ್ಕಾರದವರು ಕೊಟ್ಟಂತ ಹಣವನ್ನು ಸಹಕಾರ ಸಂಘಗಳು ಸಾರ್ವಜನಿಕರಿಗೆ ಮುಟ್ಟಿಸುವಂತ ಕೆಲಸಕೂಡ ಮಾಡಲಿಲ್ಲ. ದೇವರು ಕೊಟ್ಟರೂ ಪೂಜಾರಿ ವರ ಕೊಡಲಿಲ್ಲ ಎಂದ ಹಾಗೆ ಇದೆ. ೮೧-೮೨ರಲ್ಲಿ ೩.೩೫ ಲಕ್ಷ ರೂಪಾಯಿ ಗಳನ್ನು ಮಂಜೂರು ಮಾಡಿದ್ದರೂ, ಕೊಟ್ಟಂತ ಹಣವನ್ನು ಖರ್ಚು ಮಾಡದೇ ಇರುವುದನ್ನು ಇಲ್ಲಿ ಗಮನಿಸಬಹುದು. ಸಾಲ ಕೊಡುವುದರಲ್ಲಿ ಕೂಡ ಪ್ರಗತಿಯಾಗಿಲ್ಲ. ದುರ್ಬಲ್ಲ ವರ್ಗದವರಿಗೆ ಸಾಲ ಕೊಡಬೇಕೆಂದು ಸರ್ಕಾರದಿಂದ ಮಂಜೂರಾದ ಹಣ ಹಾಗೇ ಇದೆ. ಪ್ರತಿಯೊಂದರಲ್ಲಿಯೂ ಡೌನ್ ಗ್ರೇಡ್ ಪ್ರೊಗ್ರೆಸ್ಸೇ ಆಗಿದೆ.

ಇವರದೆಲ್ಲಾ ಡೌನ್‌ಗ್ರೇಡ್ ಪ್ರೋಗ್ರೆಸ್ ಅಪ್‌ಗ್ರೇಡ್ ಪ್ರೋಗ್ರೆಸ್ ಇಲ್ಲವೇ ಇಲ್ಲ, ಇದು ಏತಕ್ಕೆ ಈ ರೀತಿ ಆಗುತ್ತದೆ ಎಂಬುದನ್ನು ಗಮನಿಸಬೇಕು. ಇನ್ನು ರೈತರಿಗೆ ಕೊಟ್ಟರತಕ್ಕ ಸಾಲದ ಬಗ್ಗೆ ಹೆಮ್ಮೆಯಿಂದ ಹೇಳಿಕೊಂಡಿದ್ದಾರೆ, ಹನ್ನೊಂದೂವರೆ ಕೋಟಿ ರೂಪಾಯಿಗಳ ಅರ್ಜಿಗಳು ಇದ್ದರೆ ಇವರು ಕೊಟ್ಟರತಕ್ಕದ್ದು ೭೬-೮೪ ಲಕ್ಷ ರೂಪಾಯಿ ಮಾತ್ರ ಇವರಿಗೆ ರೈತರ ಬಗ್ಗೆ ಎಷ್ಟು ಅಭಿಮಾನವಿದೆ ಎನ್ನುವುದನ್ನು ಅವರೇ ಆತ್ಮಶೋಧನೆ ಮಾಡಿಕೊಳ್ಳಲಿ, ಇನ್ನು ಪುಟ ೮. ಟೇಬಲ್ ೫, ಇದರಲ್ಲಿ ಡೀಟೈಲ್ಸ್ ಆಫ್ ರೀಎಂಬರ್ಸ್‌ಮೆಂಟ್ ಬಗ್ಗೆ ಲೆಕ್ಕ ಕೊಟ್ಟಿದ್ದಾರೆ, ಇದು ಹೇಗೆ ಆಯಿತು ಅಂಥ ನನಗೆ ಅರ್ಥವಾಗುತ್ತಿಲ್ಲ, ೨೭,೬೩೨ ಜನ ಫಾರಮರ್ಸ್ ಇದ್ದರೆ ಇವರು ರೀಎಂಬರ್ಸ್‌ಮೆಂಟ್ ಕೊಟ್ಟಿರ ತಕ್ಕ ಹಣ ೧.೮೩೧.೨೮ ಲಕ್ಷ ರೂಪಾಯಿ ಹಾಗೆ ೧೮.೫೨೦ ಮಾರ್ಜಿನಲ್ ಫಾರಮರ್ಸ್ ಇದ್ದರೆ ಇವರು ಕೊಟ್ಟಿರತಕ್ಕ ಹಣ ೧,೦೫೯ ಲಕ್ಷ, ಎಸ್. ಸಿ. ಎಸ್. ಟಿ. ೪೩೦ ಜನ ಇದ್ದರೆ ಕೊಟ್ಟಿರುವ ಹಣ ೬,೫೭೭ ಲಕ್ಷ ರೂ.ಗಳು ಇದನ್ನು ಲೆಕ್ಕ ಹಾಕಿದರೆ ಡಾಮಾಷಾ ಪರ್‌ಕ್ಯಾಪಿಟ ರೀಎಂಬರ್ಸ್‌ಮೆಂಟ್ ಸ್ಮಾಲ್ ಫಾರ್ಮರ್ಸ್‌ಗೆ ತಲೆಗೆ ೬೫೦ ರೂಪಾಯಿ, ಮಾರ್ಜಿನಲ್ ಫಾರಮರ್ಸ್‌ಗೆ ೫೭೦ ರೂಪಾಯಿ ಬರುತ್ತದೆ ಎಸ್. ಸಿ. ಎಸ್. ಟಿ. ೪೩೦ಕ್ಕೆ ೮,೫೭೭ ಲಕ್ಷ ಕೊಟ್ಟಿದ್ದೇವೆಂದು ಹೇಳುತ್ತೀರಿ. ದಾಮಾಷಾ ೨ ಲಕ್ಷ ರೂಪಾಯಿ ಬರುತ್ತದೆ. ಇದು ಹೇಗೆ ಬಂತು ಇದು ನಿಜವಾದ ಲೆಕ್ಕವೋ ಅಥವಾ ಜನರ ಕಣ್ಣಿಗೆ ಮಣ್ಣೆರಚುವ ಲೆಕ್ಕವೋ ಎಂಬುದನ್ನು ತಾವು ಇದರ ಬಗ್ಗೆ ಪರಿಶೀಲನೆ ಮಾಡಬೇಕಾಗಿದೆ, ಇನ್ನು ಪುಟ ೯ ರಲ್ಲಿ ತಲೆಕೆಳಕಾದಂಥ ಲೆಕ್ಕ ಇದೆ, ಅಲ್ಲಿ ನೋಡಿದರೆ ಸಾಲ ವಸೂಲು ಮಾಡುವುದರಲ್ಲಿ ೨೭.೦೩ ಕೋಟಿ ಇನ್ನೂ ಹಣ ವಸೂಲಾಗಿಲ್ಲ ಅಂದರೆ ಅಧಿಕಾರಿಗಳು ಚುರುಕಾಗಿಲ್ಲ ಅಂಥ ನನ್ನ ದೋಷಾರೋಪಣೆ

ಅಲ್ಲ, ಈ ಸಾಲ ಕೊಡತಕ್ಕದರಲ್ಲಿ ಅನಾಹುತ ಏನಾಗಿದೆ ಅದು ಕಾರಣ, ಇವೊತ್ತು ಹಣ ಸಾಲ ಕೊಡತಕ್ಕದ್ದರಲ್ಲಿ ರೈತನ ಪ್ರಗತಿಯಾಗಬೇಕು. ಮೊಟ್ಟಮೊದಲಿಗೆ ರಾಜಮಹಾರಾಜರ ಕಾಲದಲ್ಲಿ ಸೊಸೈಟಿಗಳು ಪ್ರಾರಂಭವಾದ್ದುದಕ್ಕೆ ಮೂಲ ಕಾರಣ ಏನು ಅಂದರೆ ಸಹಕಾರ ಸಂಘದಲ್ಲಿ ಹಣ ಏತಕ್ಕೆ ತೊಡಗಿಸುತ್ತಿದ್ದರು ಎಂದರೆ, ಮನೆಯಲ್ಲಿ ತಿಥಿ ಮಾಡಬೇಕಾದರೆ ಶ್ರಾದ್ಧ ಮಾಡಬೇಕಾದರೆ ಮದುವೆ ಮುಂಜಿ ಮಾಡಬೇಕಾದರೆ, ಸತ್ತವರನ್ನು ಹೊತ್ತು ಹಾಕಬೇಕಾದರೆ, ಸಮಯಕ್ಕೆ ಸರಿಯಾಗಿ ಹಣ ಸಿಕ್ಕಲಿ ಅಂಥ ಸಹಕಾರ ಸಂಘಗಳು ಹಳೆ ಮೈಸೂರಿನಲ್ಲಿ ಪ್ರಾರಂಭವಾದದು, ಅಲ್ಲಿಂದ ಸೊಸೈಟಿಗಳು ಹುಟ್ಟಿಕೊಂಡದ್ದು, ಇವೊತ್ತು ರೈತರ ಅಭ್ಯುದಯಕ್ಕೆ ಸಾಲ ಕೊಟ್ಟಿಲ್ಲ, ಸತ್ತಾಗ ಹೆಣ ಹೂಳುವುದಕ್ಕೆ. ಮಗಳ ಮದುವೆ ಮಾಡಲಿಕ್ಕೆ, ಮಗನ ಮುಂಜಿ ಮಾಡಲಿಕ್ಕೆ ಹಣ ಕೊಟ್ಟ ರೀತಿಯಲ್ಲಿ ಅವರಿಗೆ ಸಾಕಷ್ಟು ಕಂಬಗಳನ್ನು ಸುತ್ತಿಸಿ ಅವರು ಹಣ ಪಡೆಯುವಾಗ ಅರ್ಧ ಹಣ ಕೊಡ ಸಿಗುವುದಿಲ್ಲ. ಇನ್ನು ಕೆಲವು ಕೋ ಆಪರೇಟೀವ್ ಸೊಸೈಟಿಗಳ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆ ಎಂದು ನಾನು ಭಾವಿಸುತ್ತೇನೆ. ಅದರಲ್ಲಿರತಕ್ಕ ಕೆಲವೇ ಜನ ಅಧಿಕಾರಿಗಳು ಜನಗಳಿಗೆ ನಾವು ಸಾಲ ಕೊಡಿಸುತ್ತೇವೆಂದು ಹೇಳಿ, ಹೆಬ್ಬೆಟ್ಟು ಒತ್ತಿಸಿ ಲಕ್ಷಾಂತರ ರೂಪಾಯಿ ಸಾಲ ತಾನೇ ತೆಗೆದುಕೊಂಡು ಕೊನೆಗೆ ರೈತರಿಗೆ ನೋಟೀಸ್ ಹೋದ ತಕ್ಷಣ ನಾವು ಹಣ ಸಾಲ ತೆಗೆದುಕೊಂಡಿಲ್ಲ ಎಂದು ಹೇಳಿದಾಗ ಪ್ರಭಾವಿಶಾಲಿ ವ್ಯಕ್ತಿಗಳು, ಆಡಳಿತಪಕ್ಷ ಮೇಲಿದ ಪ್ರಭಾವ ಬೀರತಕ್ಕಂಥ ವ್ಯಕ್ತಿಗಳು, ಸರ್ಕಾರದ ಆಜ್ಞೆ ಹೊರಡಿಸುವಾಗ ಅವರೇ ಹಣ ಕಟ್ಟಿರತಕ್ಕಂಥ ನಿರ್ದಶನವನ್ನು ಸಹಕಾರ ಸಂಘದ ಜೀವನದಲ್ಲಿ ನಾವು ಕಾಣುತ್ತಿದ್ದೇವೆ. ಈ ಸಹಕಾರ ಸಂಘಗಳು ಯಾವ ದಿಕ್ಕಿನಲ್ಲಿ ಹಣ ಕೊಡಬೇಕಾಗಿತ್ತೋ ಆ ದಿಕ್ಕಿನಲ್ಲಿ ಹಣ ಕೊಟ್ಟಿಲ್ಲ, ಅಂಥ ಇದರಲ್ಲಿ ನಾವು ಮನಗಾಣಬೇಕಾಗಿದೆ, ಇನ್ನೊಂದು ಮುಖ್ಯವಾದ ವಿಚಾರವೆಂದರೆ ನಾವು ರೈತರಿಗೆ ಹೆಚ್ಚು ಹಣ ಕೊಡುತ್ತಿದ್ದೇವೆಂದು ನಮ್ಮ ಮಿತ್ರರು ಹೇಳಿದ್ದಾರೆ ನಾನು ಆ ರೀತಿ ಹೇಳಲಿಕ್ಕೆ ಹೋಗುವುದಿಲ್ಲ. ಅವರ ಲೆಕ್ಕದ ಪ್ರಕಾರ ಒಂದೇ ಒಂದು ಮಾತಿನಲ್ಲಿ ಹೇಳುವುದಾದರೆ, ರೈತರಿಗೆ ನಿಜವಾಗಿ ಕೊಡಬೇಕಾದ ಹಣದಲ್ಲಿ ಕಡಿಮೆಯಾಗಿದೆ. ಅಗ್ರಿಕಲ್ಚರಲ್ ಲೋನ್ ಅಡ್ವಾನ್ಸ್‌ಡ್ ೧೯೮೦–೮೧ ರ ಲೆಕ್ಕ ನೋಡುತ್ತಾ ಬಂದರೆ ೩೦–೬–೧೯೮೧ ರ ವರೆಗೆ ೧.೨೪೨ ಲಕ್ಷ ಇದ್ದುದು ಷಾರ್ಟ್‌ಟರ್ಮ್ ಲೋನ್ ಮತ್ತೆ ಇಳಿಯುತ್ತಾ ಬಂದಿದೆ, ಷಾರ್ಟ್‌ಟರ್ಮ್ ಲೋನ್ ೩೯೪.೮೦ ಲಕ್ಷ, ಮೀಡಿಯಂ ಟರ್ಮ್ ಲೋನ್ ೩೩೪.೨೦ ಲಕ್ಷ ಇದ್ದುದು, ೨೫೬ ಲಕ್ಷಕ್ಕೆ ಇಳಿದಿದೆ. ಈ ರೀತಿಯಾಗಿ ರೈತರಿಗೆ ಕೊಡತಕ್ಕ ಸಾಲದಲ್ಲಿ ದಿನದಿನವೂ, ವರ್ಷ ವರ್ಷವೂ ಕಡಿಮೆ ಮಾಡುತ್ತಿದ್ದೀರಿ. ರೈತರ ಬಗ್ಗೆ ನಾವು ಹೆಚ್ಚಿಗೆ ಹಣ ಕೊಡುತ್ತಿದ್ದೇವೆ ಎಂದು ಹೇಳಿಕೆಯನ್ನು ಕೊಡುತ್ತೀರಿ. ಇದು ಸತ್ಯಕ್ಕೆ ದೂರವಾದುದು. ಇನ್ನು ಪುಟ ೨೨ರಲ್ಲಿ ಡೈವರ್ಸಿಫಿಕೇಷನ್ ಆಫ್ ಲೋನ್ಸ್ ಬಗ್ಗೆ ಹೇಳಿದ್ದೀರಿ. ಇದು ನಿಜವಾದ ಡೈವರ್ಸಿಫಿಕೇಷನ್ನೇ ? ಇದನ್ನು ನಿಜವಾದ ರೀತಿಯಲ್ಲಿ ಮಾಡಿದ್ದೀರಾ ಎಂದು ಗಮನಿಸಬೇಕಾಗಿದೆ. ತಮ್ಮ ಇಲಾಖೆಯಲ್ಲಿ ಈ ತರಹ ಸಹಕಾರ ಸಂಘಗಳು ಇರತಕ್ಕಂತಾದ್ದು, ಗ್ರಾಮಾಂತರ ಜನರ ಅಭ್ಯುದಯಕ್ಕೆ ಮೀಸಲಾದಂಥ ಸಹಕಾರ ಸಂಘಗಳು. ಇದರಲ್ಲಿ ಡೈವರ್ಸಿಫಿಕೇಷನ್ ನೀವು ಮಾಡಿರತಕ್ಕದ್ದು ಕರ್ನಾಟಕ ಸ್ಟೇಟ್ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್, ಕರ್ನಾಟಕ ಸೋಪ್ಸ್ ಅಂಡ್ ಡಿಟರ್‌ಜೆಂಟ್ ಕಡೆಗೆ ತಾವು ಅಗ್ರಿಕಲ್ಚರಲ್ ಓರಿಯಂಟೆಡ್ ಇಂಡಸ್ಟ್ರೀಸ್ ಏನಿದೆ, ಅದರ ಕಡೆ ಗಮನ ಕೊಡಬೇಕಾಗುತ್ತದೆ, ಇದು ಬಹಳ ದುಃಖದಿಂದ ಹೇಳುವಂಥ ಮಾತು, ಇವರಿಗೆ ನಮ್ಮಲ್ಲಿರತಕ್ಕ ಕೇಂದ್ರಸರ್ಕಾರದ ಸೆಂಟ್ರಲ್ ಫುಡ್ ಅಂಡ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಉತ್ತಮವಾದಂಥ ಆಹಾರ ಪದಾರ್ಥಗಳ ಸಂಶೋಧನೆ ಮಾಡಿಕೊಟ್ಟಿದ್ದಾರೆ. ಅಮೂಲ್ ನಮ್ಮಲ್ಲೇ ತಯಾರಾದರೂ ನಮ್ಮಲ್ಲಿರತಕ್ಕ ಸಹಕಾರ ಸಂಘಗಳು ತಯಾರು ಮಾಡಲಿಕ್ಕೆ ಕೊಟ್ಟಿಲ್ಲ. ಅದು ಗುಜರಾತಿನ ಬಂಡವಾಳ ಶಾಹಿಗೆ ಹೋಯಿತು. ಇಲ್ಲಿ ವ್ಯವಸಾಯಗಾರರಿಂದ ಉತ್ಪನ್ನವಾಗತಕ್ಕಂಥ ವಸ್ತುಗಳನ್ನು ಕೈಗಾರಿಕೋದ್ಯಮದಲ್ಲಿ ತೊಡಗಿಸಿ ರೈತನಿಗೆ ಹಣ ಒದಗಿಸಿಕೊಡುವ ರೀತಿಯಲ್ಲಿ ನೀವು ಮಾಡಲಿಲ್ಲ, ಮುಸುಕಿನ ಜೋಳದ ಕಡ್ಡಿಯಲ್ಲಿ ಸಿಗರೇಟ್ ಮಾಡಲಿಕ್ಕೆ ಅನುಕೂಲವಾಗುತ್ತದೆಂದು ಅದಕ್ಕೆ ಒಂದು ಫ್ಯಾಕ್ಟರಿ ನಂಜನಗೂಡಿನಲ್ಲಿ ೧೦ ಕೋಟಿ ರೂಪಾಯಿ ಯೋಜನೆ ಮಾಡಬೇಕೆಂದು ಇತ್ತು, ಅದನ್ನು ಸಹಕಾರ ಸಂಘದಿಂದ ಮಾಡಿದರೆ ಲಕ್ಷಾಂತರ ಜನ ಮುಸುಕಿನ ಜೋಳ ಬೆಳೆಯತಕ್ಕವರು ಬದುಕುತ್ತಿದ್ದರು. ತಾವು ಆ ಕೆಲಸವನ್ನು ಮಾಡಲಿಲ್ಲ. ತಾವು ಡೈವರ್ಸಿಫಿಕೇಷನ್ ಮಾಡಿದ್ದಿರಿ. ಇನ್ನು ಡ್ರೈವೆಜಿಟಬಲ್ ಕ್ಯಾನಿಂಗ್ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ತರಕಾರಿ ಸಾಕಷ್ಟು ಬೆಳೆಯುತ್ತದೆ ಅದನ್ನು ಸದುಪಯೋಗ ಮಾಡಿಕೊಳ್ಳುವುದಕ್ಕೆ ಸಹಕಾರ ಸಂಘ ಮಾಡಿಲ್ಲ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಲಿಸಿನ ಹಣ್ಣು ಅನಾನಸ್ ಹಣ್ಣು ಕೊಳೆತು ಹೋಗುತ್ತಿದೆ ಅಲ್ಲಿ ನಿರುಪಯುಕ್ತವಾಗುತ್ತಿದೆ. ಆ ಬೆಳೆಗಳನ್ನು ಸದುಪಯೋಗ

ಮಾಡಿಕೊಳ್ಳಬೇಕಾದರೆ ಅವಶ್ಯವಿದೆ. ನಾನು ಮೊನ್ನೆ ವಿದ್ಯಾ ಇಲಾಖೆಯ ಮೇಲೆ ಮಾತನಾಡುತ್ತಾ ನಮ್ಮಲ್ಲಿರತಕ್ಕ ವಿಜ್ಞಾನಿಗಳನ್ನು ಉಪಯೋಗ ಮಾಡಿಕೊಳ್ಳುತ್ತಿಲ್ಲ ಎಂದು ಹೇಳಿದೆ. ನಮ್ಮ ದೇಶವು ಒಬ್ಬ ವಿಜ್ಞಾನಿ ಸಿಕ್ಕಿಂ ರಾಜ್ಯದಲ್ಲಿ ಕೆಲಸ ಮಾಡಿ ವೀಳ್ಯದೆಲೆ ಅಡಿಕೆಯೊಳಗೆ ಲಿಕ್ಕರ್ ಆಗತಕ್ಕ ಒಂದು ಫಾರ್ಮುಲಾವನ್ನು ತಯಾರಿಸಿ ವಿದೇಶಿ ವಿನಿಮಯ ಗಳಿಸುತ್ತಿದ್ದಾನೆ. ನಾವು ಇಲ್ಲಿ ವೀಳ್ಯದೆಲೆ ಬೆಳೆದು ಉತ್ತರ ಪ್ರದೇಶ. ಮಧ್ಯಪ್ರದೇಶಕ್ಕೆ ಕಳುಹಿಸುತ್ತಿದ್ದೇವೆ. ಅಡಿಕೆ ಬೆಳೆಯುತ್ತಿದ್ದೇವೆ, ವ್ಯವಸಾಯ ಗಾರಿಕೆಯಿಂದ ಉತ್ಪನ್ನವಾಗತಕ್ಕ ವಸ್ತುಗಳನ್ನು ಕೈಗಾರಿಕೆಗಳಲ್ಲಿ ತೊಡಗಿಸಿ ಅವನಿಗೆ ಹೆಚ್ಚು ಹಣ ಸಿಕ್ಕು ವಂಥ ಕಾರ್ಯಕ್ರಮವನ್ನು ಮಾಡುತ್ತಿಲ್ಲ. ಡೈವರ್ಸಿಫಿಕೇಷನ್ ಸರಿಯಾದ ರೀತಿಯಲ್ಲಿ ಆಗಿಲ್ಲ 'ಇನ್ನು ಮಾರ್ಕೆಟಿಂಗ್ ಮತ್ತು ತೂಕ ಮತ್ತು ಅಳತೆ ಇಲಾಖೆಗಳು ಪ್ರಗತಿದಾಯಕವಾದ ರೀತಿಯಲ್ಲಿ ಕೆಲಸ ವನ್ನು ನಡೆಸುತ್ತಿಲ್ಲ ನಮ್ಮ ರೈತರು ದಳ್ಳಾಳಿಗಳ ಕೈಗೆ ಸಿಕ್ಕುತ್ತಿದ್ದಾರೆ ರೆಗ್ಯುಲೇಟೆಡ್ ಮಾರ್ಕೆಟ್ ನಲ್ಲಿ ಏನಾಗುತ್ತಿದೆ ಎಂದರೆ, ಅಲ್ಲಿ ರಾಶಿ ತಂದು ಹಾಕಿದರೆ, ಒಂದು ಪಲ್ಲಕ್ಕೆ ೫ ಸೇರು ಗುಡಿಸುವವರಿಗೆ ಹೋಗುತ್ತದೆ, ೫ ಸೇರು ತೂಕ ಮಾಡುವವರಿಗೆ ಹೋಗುತ್ತದೆ. ಹೀಗಾಗಿ ಒಂದು ಕ್ವಿಂಟಾಲಿಗೆ ೨೫ ಸೇರು ಹೊರಟು ಹೋಗುತ್ತದೆ. ಇನ್ನು ನಮ್ಮ ವೇರ್‌ಹೌಸ್ ೧,೫೩,೯೮೭ ಮೆಟ್ರಿಕ್ ಟನ್ ಆಹಾರ ವನ್ನು ಸಂಗ್ರಹಣೆ ಮಾಡಲಿಕ್ಕೆ ಅವಕಾಶ ಮಾಡಿದ್ದೀರಿ. ಇವೊತ್ತು ಬಂಡವಾಳಶಾಯಿ ಕೈಗೆ ಹೋಗದ ರೀತಿಯಲ್ಲಿ ವೇರ್ ಹೌಸ್‌ನಲ್ಲಿ ಇಟ್ಟು ರೈತನಿಗೆ ನೇರವಾಗಿ ಹಣ ಕೊಡುವ ವ್ಯವಸ್ಥೆ ಇಲ್ಲ. ನಮ್ಮ ರಾಜ್ಯದಲ್ಲಿ ಕನಿಷ್ಟಪಕ್ಷ ವರ್ಷಕ್ಕೆ ೬೦ ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಉತ್ಪಾದನೆ ಮಾಡುತ್ತಿ ದ್ದೇವೆ, ತಾವು ೧,೫೩ ೯೮೭ ಮೆಟ್ರಿಕ್ ಟನ್ ಆಹಾರ ಸಂಗ್ರಹಣೆ ಮಾಡಲಿಕ್ಕೆ ಏರ್ಪಾಡು ಮಾಡಿ ದ್ದೀರಿ. ಪ್ರತಿ ವರ್ಷ ೩೫ ಲಕ್ಷ ಮೆಟ್ರಿಕ್ ಟನ್ ಆಹಾರ ಧಾನ್ಯ ಮಾರುಕಟ್ಟೆಗೆ ಬರುತ್ತದೆ. ಇದನ್ನೆಲ್ಲಾ ಸಂಗ್ರಹಣೆ ಮಾಡಲಿಕ್ಕೆ ನಿಮ್ಮಲ್ಲಿ ವ್ಯವಸ್ಥೆ ಎಲ್ಲಿದೆ ? ರೈತನಿಗೆ ಉಪಯೋಗವಾಗದೆ ಬಂಡವಾಳಶಾಯಿ ಕೈಗೆ ಹಣ ಸಿಕ್ಕತಕ್ಕಂಥ ಒಂದು ಮಾರ್ಗವನ್ನು ಮಾಡಿದ್ದೀರಿ. ಇನ್ನಾದರೂ ವೇರ್‌ಹೌಸ್ ಕಾರ್ಯಕ್ರಮದ ಬಗ್ಗೆ ತೀವ್ರ ಆಸಕ್ತಿವಹಿಸಿ, ಸಹಕಾರ ಸಂಸ್ಥೆಗಳಲ್ಲಿ ಜನೋಪಯುಕ್ತ ಕಾರ್ಯಕ್ರಮಗಳನ್ನು ನಿರೂಪಿಸದೇ ಇದ್ದ ಪಕ್ಷದಲ್ಲಿ ನಿಜವಾಗಿ ಕೂಡ ಸರ್ಕಾರ ತನ್ನ ಅದಕ್ಷತೆಯನ್ನು ಅಸಮರ್ಪಕ ಆಡಳಿತವನ್ನು ಒಪ್ಪಿಕೊಳ್ಳಬೇಕಾಗುತ್ತದೆ, ಎಲ್ಲಿ ಅಸಮರ್ಥಯಿಂದ ಅನ್ಯಾಯಗಳಾಗಿವೆ ಆದರ ಬಗ್ಗೆ ತಾವು ಕೂಡಲೇ ಸಹಕಾರ ಚಳುವಳಿ ಉಳಿಯಲಿ ಎನ್ನುವ ಕಾರಣದಿಂದ ಸಹಕಾರ ಚಳುವಳಿ ಬೆಳೆಯಲಿ ಎನ್ನುವ ಕಾರಣದಿಂದ ನಾನು ಏನು ಹೇಳಿದ್ದೇನೆ, ಇಲ್ಲಿ ಆಗಿರತಕ್ಕ ಅನ್ಯಾಯಗಳ ಬಗ್ಗೆ ಶ್ವೇತಪತ್ರ ಪ್ರಕಟಿಸುವ ಬಗ್ಗೆ ನೀವು ಮನಬಿಚ್ಚಿ ಒಂದು ಹೇಳಿಕೆಯನ್ನು ಈ ಸದನದಲ್ಲಿ ಕೊಡಬೇಕೆಂದ ಪ್ರಾರ್ಥಿಸಿ ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತ್ತುಗಳನ್ನು ಮುಗಿಸುತ್ತೇನೆ,

೫–೩೦ ಪಿ. ಎಂ,

† ಶ್ರೀ ಪಿ ಎನ್. ರೆಡ್ಡಿ (ಮಾಲೂರು).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸಹಕಾರ ಮಂತ್ರಿಗಳು ಹಾಗೂ ಮಾನ್ಯ ಮಾರ್ಕೆಟಿಂಗ್ ಮಂತ್ರಿಗಳೂ ತಮ್ಮ ಬೇಡಿಕೆಗಳಲ್ಲಿ ಎಷ್ಟು ಹಣವನ್ನು ಕೊಡಬೇಕೆಂದು ಕೇಳಿ ಕೊಂಡಿದ್ದಾರೆ ಅದಕ್ಕೆ ಒಮ್ಮತದಿಂದ ನನ್ನ ಸಮ್ಮತಿಯನ್ನು ಕೊಡುತ್ತಿದ್ದೇನೆ: ನಾನೂ ಸಹ ನನ್ನ ಕೆಲವು ಅಭಿಪ್ರಾಯಗಳನ್ನು ತಮ್ಮ ಮುಂದಿಡಬೇಕೆಂದು ಇಚ್ಛಿಸುತ್ತೇನೆ.

ಪ್ರಥಮವಾಗಿ ಹೇಳುವುದಾದರೆ, ನಮ್ಮ ಮಾರ್ಕೆಟಿಂಗ್ ಮಂತ್ರಿಗಳ ಖಾತೆ ಚಿಕ್ಕದಾದರೂ ಸ್ವಲ್ಪ ಹೆಚ್ಚಿನ ಮಟ್ಟಿಗೆ ಮುತುವರ್ಜಿ ತೆಗೆದುಕೊಂಡು ಕೆಲಸಮಾಡಿದ್ದಾರೆ. ಸ್ವಾಮಿ, ನಾನೂ ಸಹ ಸುಮಾರು ೨–೩ ವರ್ಷಗಳ ಕಾಲ ರೆಗ್ಯುಲೆಟೆಡ್ ಮಾರ್ಕೆಟಿಂಗ್ ಕಮಿಟಿಯ ಛೇರ್ಮನ್ ಆಗಿದ್ದೆ. ಜಾತ್ರೆಗಳಿಗೆ ಬರತಕ್ಕ ಎತ್ತುಗಳಿಗೆ ಸಾವಿರಕ್ಕೆ ೨೦ ಪರ್ಸೆಂಟ್‌ನಂತೆ ಸುಂಕವನ್ನು ಹಾಕುತ್ತಿದ್ದೆವು. ಈ ರೀತಿ ಹಾಕಿದ ಸುಂಕವನ್ನು ವಸೂಲ್ಮಾಡುವಾಗ ಸ್ವಲ್ಪ ಹಣದ ದುರುಪಯೋಗವಾಗುತ್ತಿತ್ತು. ಅದು ಹೇಗೆಂದರೆ ಕ್ಲರ್ಕ್‌ಗಳು ಸುಂಕ ತೆಗೆದು ಕೊಂಡಿದ್ದಕ್ಕೆ ರಸೀತಿಯನ್ನು ಕೊಡುವಾಗ ಕೇವಲ ೧೦–೧೫ ರೂ, ಮಾತ್ರ ತೆಗೆದುಕೊಂಡು ರಶೀತಿ ಕೊಡದೆ ಅವರನ್ನು ಕಳುಹಿಸಿಬಿಡುತ್ತಿದ್ದರು ಈಗ ಒಂದು ಜೊತೆ ಎತ್ತಿಗೆ ೨ ರೂ. ನಂತೆ ಸುಂಕ ಹಾಕಿರುವುದು ಸ್ವಾಗತಿಸಬೇಕಾದ ವಿಷಯ.

ಮಾನ್ಯ ಅಧ್ಯಕ್ಷರೇ, ಇನ್ನೊಂದು ಹೊಸ ಪದ್ಧತಿ ಏನೆಂದರೆ. ಆಹಾರಧಾನ್ಯದ ತರಕಾರಿ ಇತ್ಯಾದಿ ಗಳನ್ನು ಬೆಳೆಯುವ ಜಾಗದಿಂದ ಮಾರ್ಕೆಟ್‌ಗಳಿಗೆ ತೆಗೆದುಕೊಂಡು ಹೋಗಬೇಕಾದರೆ ಲಾರಿಗಳನ್ನು

ಇಟ್ಟು ಒಂದು ಕಿಲೋಮೀಟರ್‌ಗೆ ೬ ಪೈಸೆಯಂತೆ ಸಾಗಣಿ ದರವನ್ನು ಹಾಕುತ್ತಿದ್ದಿರಿ. ಇದು ಬೆಳೆ ಬೆಳೆಯತಕ್ಕ ರೈತರಿಗೆ ಸುಲಭ ದರದಲ್ಲಿ ಸಾಗಣೆ ಮಾಡುವುದದಾಗಿದೆ. ಮಾನ್ಯ ಸದಸ್ಯರಾದ ಶಿವಪ್ಪ ನವರು ಮಾತನಾಡುತ್ತಾ ಮಾರ್ಕೆಟ್ ಸೆಸ್ ೨ ಪರ್ಸೆಂಟ್ ಏನು ಹಾಕಿದೆ ಇದನ್ನು ಕಡಿಮೆ ಮಾಡ ಬೇಕೆಂದು ಹೇಳಿದರು. ಆದರೆ ನಾನಾದರೂ ಹೇಳುತ್ತೇನೆ. ಈ ಸೆಸ್‌ನ್ನು ಕಡಿಮೆ ಮಾಡುವುದು ಸೂಕ್ತವಲ್ಲ. ಅಲ್ಲದೆ ಇದರಿಂದ ರೈತರಿಗೆ ಯಾವುದೇ ತೊಂದರೆಯೂ ಆಗುವುದಿಲ್ಲ. ಆದರೆ ಈ ಪದಾರ್ಥಗಳನ್ನು ಹಲವಾರು ಹಳ್ಳಿಗಳಿಂದ ಮಾರುಕಟ್ಟೆಗಳಿಗೆ ಸಾಗಾಣಿಕೆ ಮಾಡಲು ಅನುಕೂಲವಾಗು ವಂಥ ಅಪ್ರೋಚ್ ರೋಡುಗಳನ್ನು ಮಾಡಲು ಸರ್ಕಾರದವರು ಈ ಸೆಸ್ ಹಣವನ್ನು ಖರ್ಚುಮಾಡು ತ್ತಿಲ್ಲ. ಇದು ಸುಮಾರು ೧೦ ಕೋಟಿ ರೂ. ನಷ್ಟಿದೆ. ಸರ್ಕಾರದವರು ಈ ಹಣವನ್ನು ಅಪ್ರೋಚ್ ರೋಡ್ ನಿರ್ಮಾಣಕ್ಕಾಗಿಯೇ ಖರ್ಚು ಮಾಡಬೇಕು.

ಮಾನ್ಯ ಮಾರುಕಟ್ಟೆ ಮಂತ್ರಿಗಳಲ್ಲಿ ಇನ್ನೊಂದು ವಿಚಾರವನ್ನು ಪ್ರಾರ್ಥಿಸಿಕೊಳ್ಳುವುದೇನೆಂದರೆ ಇವತ್ತು ಪೆರಿಷಬಲ್ ವೆಜಿಟಬಲ್ಸ್‌ಗೆ ೨ ಪರ್ಸೆಂಟ್ ಸೆಸ್‌ನ್ನು ಏನು ಹಾಕಲಾಗುತ್ತಿದೆ ಇದನ್ನು ದಯ ವಿಟ್ಟು ನಿಲ್ಲಿಸಬೇಕು. ಕಾರಣ ಇದರಿಂದ ರೈತರಿಗೂ ಹಾಗೂ ಗ್ರಾಹಕರಿಗೂ ತೊಂದರೆಯಾಗುತ್ತದೆ. ಆದ್ದರಿಂದ ಪೆರಿಷಬಲ್ ತರಕಾರಿಗಳಿಗೆ ಹಾಕುತ್ತಿರುವ ಸೆಸ್‌ನ್ನು ಕಡ್ಡಾಯವಾಗಿ ನಿಲ್ಲಿಸಬೇಕು. ನಾನು ಇದನ್ನು ಏತಕ್ಕ ಹೇಳುತ್ತಿದ್ದೇನೆಂದರೆ, ನಾವು ರೈತರಿಗೆ ವೇರ್ ಹೌಸ್‌ನ್ನು ಕಟ್ಟಿಸಿಕೊಟ್ಟಿಲ್ಲ. ಆದ್ದ ರಿಂದ ಮಾನ್ಯ ಸಚಿವರು ಉತ್ತರ ಕೊಡುವಾಗ ಈ ಸೆಸ್‌ನ್ನು ತೆಗೆದುಹಾಕುತ್ತೇವೆಂದು ನಮಗೆ ಆಶ್ವಾಸನೆ ಕೊಡಬೇಕು.

ಇನ್ನು ಹೆಚ್ಚಿನ ಖಾತೆಯನ್ನು ಇಟ್ಟುಕೊಂಡಿರತಕ್ಕ ಮಾನ್ಯ ಸಹಕಾರ ಸಚಿವರು ರೈತರ ಮಕ್ಕಳಾ ಗಿಯೂ ಸಹಕಾರ ಕ್ಷೇತ್ರದಲ್ಲಿ ಅತ್ಯಂತ ಅನುಭವವನ್ನು ಹೊಂದಿರುವವರು ಆಗಿದ್ದಾರೆ. ಮಾನ್ಯ ಸಚಿ ವರು ಈ ಖಾತೆಯನ್ನು ವಹಿಸಿಕೊಂಡಾಗ ನಮ್ಮ ರಾಜ್ಯದ ಪರಿಸ್ಥಿತಿ ವಾಸ್ತವಿಕವಾಗಿ ಯಾವರೀತಿ ಇತ್ತು ಎಂಬುದನ್ನು ಇದುವರೆಗೆ ಮಾತನಾಡಿದ ಯಾವ ಸದಸ್ಯರೂ ಹೇಳಲಿಲ್ಲ. ಇವರು ಈ ಖಾತೆಯನ್ನು ವಹಿಸಿಕೊಂಡಾಗ ರಾಜ್ಯದಲ್ಲಿ ಬರಗಾಲವಿತ್ತು, ಬಹಳ ತಾಲ್ಲೂಕುಗಳು ಬರಗಾಲಕ್ಕೆ ತುತ್ತಾಗಿದ್ದುವು. ಬಹಳ ಸೊಸೈಟಿಗಳು ಡಿಫಾಲ್ಟ್ ಆಗಿದ್ದುವು. ರಿಸರ್ವ್ ಬ್ಯಾಂಕ್‌ನವರು ಸಾಲ ಕೊಡುವುದಕ್ಕೆ ಮುಂದೆ ಬಂದಿಲಿರಲಿಲ್ಲ. ಅಂಥ ಸಂದರ್ಭದಲ್ಲಿ ಈ ಖಾತೆಯನ್ನು ವಹಿಸಿಕೊಂಡು ಇನ್ನು ಎಂಥಾ ಪ್ರಗತಿಪರ ಕಾರ್ಯವನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಯೋಚನೆ ಮಾಡಬೇಕು. ಯಾರೇ ಆಗಲಿ, ಮಾತನಾಡುವುದು ಬಹಳ ಸುಲಭ. ರಾಜಕೀಯವಾಗಿ ಏನು ಬೇಕಾದರೂ ಮಾತನಾಡಬಹುದು. ಕಳೆದ ೨ ವರ್ಷದಿಂದ ಇಡೀ ರಾಜ್ಯ ಬರಗಾಲದಿಂದ ಆವೃತ್ತ ವಾಗಿದ್ದು ಸಾಲ ತೆಗೆದುಕೊಂಡ ಯಾವ ಒಬ್ಬ ರೈತನೂ ಕೂಡ ಸಾಲವನ್ನು ವಾಪಸು ಕೊಡಲು ಮುಂದೆ ಬಂದಿರಲಿಲ್ಲ. ಪ್ರಕೃತಿಯ ಅಡಚಣೆಯಿಂದಾಗಿ ಅಭಿವೃದ್ಧಿ ಕಾರ್ಯಗಳು ನಿಧಾನವಾದುವು. ಇದನ್ನು ತಿಳಿಯದೆ ಮಂತ್ರಿಗಳು ಮುತುವರ್ಜಿ ತೆಗೆದುಕೊಂಡು ಕೆಲಸ ಮಾಡಲಿಲ್ಲವೆಂದು ಹೇಳುತ್ತಿರುವುದು ಸರಿಯಲ್ಲ. ಅವರು ಮುತುವರ್ಜಿಯನ್ನು ತೆಗದುಕೊಂಡು ಕೆಲಸ ಮಾಡಿದ್ದರಿಂದಲೇ ಮಂಡ್ಯದ ಕೆಲವು ಸಕ್ಕರೆ ಕಾರ್ಖಾನೆಗಳು ಹೆಚ್ಚಿನ ನಷ್ಟವನ್ನು ಹೊಂದದೆ ಸ್ವಲ್ಪ ಲಾಭದಾಯಕವಾಗಿ ನಡೆಯುವುದಕ್ಕೆ ಅವಕಾಶವಾಯಿತು. ಅದೇ ರೀತಿ ಜನತಾಬಜಾರ್ ಕೂಡ ಲಾಭದಲ್ಲಿ ನಡೆಯುತ್ತಿವೆ, ಅಂದಮೇಲೆ ಮಾನ್ಯ ಸಚಿವರು ಹೆಚ್ಚಿನ ಆಸಕ್ತಿಯಿಂದ ತಮ್ಮ ಕರ್ತವ್ಯವನ್ನು ಮಾಡಿದ್ದಾರೆ, ಅದಕ್ಕಾಗಿ ನಾವು ಅವ ರಿಗೆ ನಮ್ಮ ಕೃತಜ್ಞತೆಯನ್ನರ್ಪಿಸಬೇಕಾಗಿದೆ.

ಇನ್ನು ನಮ್ಮ ಸಮಾಜದಲ್ಲಿ ನಾವು ಸರಳ ಜೀವನ ನಡೆಸಲು ಸಹಕಾರ ಬಹಳ ಮುಖ್ಯವಾದುದು. ನಮ್ಮ ಸಹಕಾರ ಸಚಿವರು ರೈತರ ಮಕ್ಕಳಾಗಿರುವುದರಿಂದ ಈ ಸಹಕಾರ ಸಂಘಗಳಲ್ಲಿ ಸಾಲ ವಿತರಣೆ ಯಾವರೀತಿ ಆಗುತ್ತಿದೆ, ಮತ್ತು ಸಾಲ ವಸೂಲಾತಿ ಯಾವರೀತಿ ಆಗುತ್ತಿದೆ ಎಂಬುದನ್ನು ನೋಡ ಬೇಕು. ಇದು ಬಹಳ ಕಾಲದಿಂದಲೂ ಒಂದೇ ರೀತಿಯಲ್ಲಿ ನಡೆದುಕೊಂಡು ಬರುತ್ತಿದೆ. ಇದನ್ನು ಈಗ ಸ್ವಲ್ಪ ಬದಲಾದಣೆ ಮಾಡಬೇಕು. ತಿಳುವಳಿಕೆ ಇಲ್ಲದ ಬಡ ರೈತರು ಸಾಲವನ್ನು ಬ್ಯಾಂಕ್‌ನಿಂದ ಅಥವಾ ಸಹಕಾರ ಸಂಘಗಳಿಂದ ಯಾವರೀತಿ ತೆಗೆದುಕೊಳ್ಳಬೇಕೆಂಬುದು ಗೊತ್ತಿರುವುದಿಲ್ಲ. ಅಂಥ ಸಂದರ್ಭಗ ಳಲ್ಲಿ ನಿಮ್ಮ ಅಧಿಕಾರಿವರ್ಗದವರೂ ಸಹಕರಿಸುವುದಿಲ್ಲ. ಇಷ್ಟೇ ಅಲ್ಲದೆ ಆ ಬಡ ರೈತನಿಗೆ ೨ ಸಾವಿರ ರೂ. ಸಾಲ ಸಿಕ್ಕುತ್ತದೆಂದು ಕಂಡುಬಂದರೆ ಸುಮಾರು ೫೦೦ ರೂ. ಗಳನ್ನು ಅದರಲ್ಲೇ ನಿಮ್ಮ ಅಧಿ ಕಾರಿಗಳು ಖರ್ಚುಮಾಡಿಸುತ್ತಾರೆ. ಇದು ಒಂದುರೀತಿಯಾದರೆ ರೈತರಿಂದ ಸಾಲವನ್ನು ವಸೂಲ್ಮಾಡು

ವಾಗ ಯಮಧರ್ಮರಾಯ ಸತ್ತವರ ಜೀವವನ್ನು ತೆಗೆದುಕೊಂಡು ಹೋಗುವಂತೆ ಈ ಸಾಲ ತೆಗೆದುಕೊಂಡ ರೈತ ಯಾವುದಾದರೂ ಹಳ್ಳಿಗೆ ಹೋಗಿದ್ದಾಗಲೋ ಅಥವಾ ರಸ್ತೆಯಲ್ಲಿ ಹೋಗುತ್ತಿರುವಾಗಲೋ ನಿಮ್ಮ ಅಧಿಕಾರಿಗಳು ಹೋಗಿ ಆತನ ಹತ್ತಿರವಿರಬಹುದಾದ ಸೈಕಲ್‌ನ್ನೋ, ವಾಚನ್ನೋ ಕಿತ್ತುಕೊಂಡು ಅವನ ಮಾನ ಮರ್ಯಾದೆಗಳನ್ನೆಲ್ಲಾ ಕಳೆದು ಬಿಡುತ್ತಾರೆ. ಆ ರೈತ ಯಾವ ಜಮೀನಿನಮೇಲೆ, ಯಾವ ದಿವಸ ಎಷ್ಟು ಸಾಲವನ್ನು ತೆಗೆದುಕೊಂಡಿದ್ದಾನೆ. ಎಂಬುದನ್ನೂ ಕೂಡ ನೋಡಿರುವುದಿಲ್ಲ. ಆದ್ದರಿಂದ ಈ ಬಗ್ಗೆ ನನ್ನ ಸಲಹೆಯಾದರೂ ಏನೆಂದರೆ, ರೈತರಿಗೆ ಸಾಲ ಕೊಡುವಾಗ ಅಧಿಕಾರಿಗಳಿಂದ ಯಾವುದೇ ರೀತಿಯ ಶೋಷಣೆಯೂ ಆಗದಿರುವಂತೆ ನೋಡಿಕೊಳ್ಳಲು ಒಂದು ವಿಜಿಲೆನ್ಸ್ ಕಮಿಟಿಯನ್ನು ನೇಮಕ ಮಾಡಬೇಕು.

ಸ್ವಾಮಿ, ಹಿಂದೆ ಮಾನ್ಯ ಸಹಕಾರ ಸಚಿವರು ಭಾಷಣ ಮಾಡುತ್ತಾ ಪ್ರತಿಯೊಂದು ಪಂಚಾಯಿತಿಗೂ ಒಂದೊಂದು ಸಹಕಾರ ಸಂಘ ಇರಬೇಕೆಂದು ಹೇಳಿದರು. ಇದೇ ಅಭಿಪ್ರಾಯವನ್ನು ದಿವಂಗತ ನೆಹರೂರವರೂ ಹೊಂದಿದ್ದರು. ಇಲ್ಲಿ ಒಂದು ಮಾತು ಹೇಳುವುದಾದರೆ, ರಾಜ್ಯದಲ್ಲಿ ಚೆನ್ನಾಗಿ ಮಳೆ, ಬೆಳೆಯಾದರೆ ಯಾವ ರೈತನೂ ಕೂಡ ತಾನು ತೆಗೆದುಕೊಂಡ ಸಾಲವನ್ನು ನಿಲ್ಲಿಸಿಕೊಳ್ಳದೆ ಸ್ವತಃ ಮುಂದೆ ಬಂದು ಸಾಲವನ್ನು ವಾಪಸು ಕೊಡುತ್ತಾನೆ. ತಾವು ಹಿಂದಿನ ಯಾವುದೇ ರೆಕಾರ್ಡ್‌ಸನ್ನು ತೆಗೆಸಿನೋಡಿದರೂ ಅದರಲ್ಲಿ ದೊಡ್ಡ ದೊಡ್ಡ ಸಾಹುಕಾರರುಗಳೇ ಸಾಲವನ್ನು ಕೊಡದೆ ಬಾಕಿ ಉಳಿಸಿಕೊಂಡಿದ್ದಾರೆ ಎಂಬುದು ಕಂಡುಬರುತ್ತದೆ. ಆದ್ದರಿಂದ, ಮಾನ್ಯ ನೆಹರೂರವರು ಇಟ್ಟುಕೊಂಡಿದ್ದ ಆಸೆಯ ಪ್ರಕಾರ ಹಾಗೂ ಕಳೆದಸಾರಿ ತಾವು ಆಶ್ವಾಸನೆ ನೀಡಿದ್ದ ಪ್ರಕಾರ ಒಂದೊಂದು ಪಂಚಾಯಿತಿಗೂ ಒಂದೊಂದು ಸಹಕಾರಸಂಘಗಳನ್ನು ಕೊಡುವುದಕ್ಕೆ ಸೂಕ್ತ ಕಾನೂನು ತರಬೇಕು.

ಇನ್ನು ಪೀನಲ್ ಇಂಟರೆಸ್ಟ್ ಬಗ್ಗೆ ಬಹಳ ಜನರು ಮಾತನಾಡಿದ್ದಾರೆ. ತಾಲೂಕು ಸೊಸೈಟಿಯವರಿಗೆ ಈ ಪೀನಲ್ ಇಂಟರೆಸ್ಟ್ ಯಾವಾಗ ಜಾರಿಗೆ ಬಂತು ಎಂಬುದೇ ಗೊತ್ತಿರಲಿಲ್ಲ. ಕೇವಲ ಎರಡು ತಿಂಗಳ ಹಿಂದೆ ಮಾತ್ರ ಅವರಿಗೆ ಗೊತ್ತಾಯಿತು. ತಾವು ಏನು ಪೀನಲ್ ಇಂಟರೆಸ್ಟ್‌ನ್ನು ಹಾಕುತ್ತಿದ್ದೀರಿ ಅದನ್ನು ಈ ಬರುವ ಡಿಸೆಂಬರ್ ತಿಂಗಳವರೆಗೂ ಹಾಕಬಾರದೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಫೇಲ್ಡ್ ವೆಲ್ಸ್ ಬಗ್ಗೆ ಹೇಳುವುದಾದರೆ, ಹಿಂದೆ ಯಾರಾದರೂ ರೈತ ಸೊಸೈಟಿಯಿಂದ ಅಥವಾ ಸರ್ಕಾರದಿಂದ ಸಾಲವನ್ನು ತೆಗೆದುಕೊಂಡು ಬಾವಿಯನ್ನು ತೆಗೆಸುವಾಗ ಅದು ಫೇಲ್ ಆದರೆ ಅದನ್ನು ಅಸಿಸ್ಟೆಂಟ್ ಕಮಿಷನರ್‌ರವರು ಹೋಗಿ ನೋಡಿಕೊಂಡುಬಂದು ಅದು ಫೇಲ್ ಆಗಿದೆಯೆಂದು ರಿಪೋರ್ಟ್ ಕೊಟ್ಟರೆ ಸಾಲವನ್ನು ಮನ್ನಾ ಮಾಡುತ್ತಿದ್ದರು. ಆದರೆ ಈಗ ಮೊದಲು ಜಿಯಾಲಜಿಸ್ಟ್ ಸರ್ವೇ ಮಾಡಿಕೊಂಡು ಬಂದಮೇಲೆ ಅಸಿಸ್ಟೆಂಟ್ ಕಮಿಷನರ್ ಹೋಗಿ ನೋಡಿಕೊಂಡುಬಂದು ಅನಂತರ ಆ ಬಾವಿ ಫೇಲ್ ಆಗಿದೆ, ಆದ್ದರಿಂದ ಅದಕ್ಕೆ ಕೊಟ್ಟಿರತಕ್ಕ ಸಾಲವನ್ನು ಮನ್ನಾ ಮಾಡಬೇಕೆಂದು ಆರ್ಡರ್ ಮಾಡಬೇಕಾಗಿದೆ. ಯಾರಾದರೂ ರೈತರು ತಮ್ಮ ಬಾವಿ ಫೇಲ್ ಆಗಿದೆ ಆದುದರಿಂದ ನಮಗೆ ಕೊಟ್ಟಿರತಕ್ಕ ಸಾಲವನ್ನು ಮನ್ನಾ ಮಾಡಬೇಕೆಂದು ಅರ್ಜಿ ಕೊಟ್ಟರೆ ಮೊದಲು ಆ ರೈತರ ಮನೆಗಳನ್ನೇ ಜಪ್ತಿ ಮಾಡುತ್ತಾರೆ. ಕಳೆದ ೩-೪ ವರ್ಷಗಳಿಂದಲೂ ರೈತರು ಕೊಟ್ಟರತಕ್ಕ ಅರ್ಜಿಗಳು ಸರ್ಕಾರದಲ್ಲಿ, ಪಿ. ಎಲ್. ಡಿ. ಬ್ಯಾಂಕ್‌ನಲ್ಲಿ, ಬಿ. ಡಿ. ಒ. ಆಫೀಸಿನಲ್ಲಿ, ಅಸಿಸ್ಟೆಂಟ್ ಕಮಿಷನರ್‌ರವರ ಆಫೀಸಿನಲ್ಲಿ ಕೊಳೆಯುತ್ತಾ ಬಿದ್ದಿವೆ. ಅದನ್ನು ತಾವು ನೋಡದೆ ರೈತರಿಗೆ ತೊಂದರೆಕೊಡುತ್ತಿದ್ದೀರಿ. ದಯವಿಟ್ಟು ಆರೀತಿ ತೊಂದರೆ ಕೊಡುವುದಕ್ಕೆ ಹೋಗಬೇಡಿ.

ನಮ್ಮ ಗೌರಿಬಿದನೂರು ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ತಾವು ಯಾವ ಕಾರಣಕ್ಕಾಗಿ ವಹಿಸಿಕೊಂಡಿರಿ ? ಹೋದವರ್ಷ ೧ಲಕ್ಷ ೪೫ ಸಾವಿರ ಟನ್ ಕಬ್ಬನ್ನ್ ರೈತರು ಒದಗಿಸಿದ್ದರು. ಇದರಿಂದ ಸುಮಾರು ೧ ಲಕ್ಷ ೩೫ ಸಾವಿರ ಮೂಟೆ ಸಕ್ಕರೆ ತಯಾರಾಗಿದೆ. ಆದರೆ ರೈತರು ಒದಗಿಸಿ ಕೊಟ್ಟರತಕ್ಕಂಥ ಕಬ್ಬಿಗೆ ೬೦ ಲಕ್ಷ ರೂಪಾಯಿಗಳು ಬಾಕಿ ಇರುತ್ತದೆ. ಅದನ್ನು ಬಡ ರೈತರಿಗೆ ಆದಷ್ಟು ಜಾಗ್ರತೆಯಾಗಿ ಕೊಡಬೇಕು. ಹಾಗೂ ಕೋಲಾರ ಜಿಲ್ಲೆ ಗೌರಿಬಿದನೂರು ಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ಎರಡುತಿಂಗಳಿಂದ ಕಾರ್ಮಿಕರಿಗೆ ಸಂಬಳವನ್ನು ಕೊಟ್ಟಿಲ್ಲ. ಇದನ್ನು ಸಹ ತಾವು ಆದಷ್ಟು ಜಾಗ್ರತೆಯಾಗಿ ಕೊಡುವುದಕ್ಕೆ ಏರ್ಪಾಡುಮಾಡಿ ಕಾರ್ಖಾನೆಯು ಸುಗಮವಾಗಿ ನಡೆದುಕೊಂಡು ಹೋಗುವಂತೆ ಮಾಡಬೇಕು.

ಕೆಸರಗೆರೆಯಲ್ಲಿರುವ ಒಂದು ಸೊಸೈಟಿಯ ಅಧ್ಯಕ್ಷರಿಗೂ ಕಾರ್ಮಿಕರಿಗೂ ಏನೋ ವಿವಾದ ಉಂಟಾಗಿ ಬೆಂಕಿ ಇಟ್ಟರು ಎಂದು ವಂದತಿ, ಇದರಿಂದ ಸೊಸೈಟಿಯ ಕಾಗದಪತ್ರಗಳೆಲ್ಲ ಸುಟ್ಟುಹೋದವು. ಕಡೆಗೆ ಏನಾಯಿತೆಂದರೆ, ಯಾರೋ ಕಂಪ್ಲೈಂಟ್ ಕೊಟ್ಟರು, ಇದೇರೀತಿ ಬಹಳ ತಾಲ್ಲೂಕುಗಳಲ್ಲಿ ಆಗುತ್ತಿದೆ, ಆದರೂ ತಮ್ಮ ಮುಖಾಂತರ ಮಾನ್ಯ ಸಚಿವರಿಗೆ ಹೇಳುತ್ತೇನೆ, ಈ ಬಗ್ಗೆ ಪೋಲೀಸ್ ನಿಂದ ಬಿ. ರಿಪೋರ್ಟ್ ಬರುತ್ತಿದೆ ; ರೈತರಿಗೆ ನೆರವಾಗಲು ದುಡ್ಡು ಕೊಟ್ಟರೆ ಅಲ್ಲಿ ರಸೀತಿ ಪುಸ್ತಕಗಳೇ ಇರುವುದಿಲ್ಲ, ದಾಖಲೆಗಳು ಇರುವುದಿಲ್ಲ. ಡಿ. ಸಿ. ಸಿ. ಬ್ಯಾಂಕ್‌ನಲ್ಲೂ ದಾಖಲೆಗಳು ಇರುವುದಿಲ್ಲ, ಪುನಃ ರೈತರುಗಳಿಂದ ಸಾಲಗಳನ್ನು ವಸೂಲು ಮಾಡುತ್ತಿದ್ದಾರೆ. ಅವರ ಮನೆಗಳನ್ನು ಜಪ್ತಿಮಾಡುತ್ತಿದ್ದಾರೆ. ರೈತರು ಹೀಗೆ ಕಷ್ಟಕ್ಕೆ ಒಳಗಾಗಿದ್ದಾರೆ ಮಾಲೂರು ತಾಲ್ಲೂಕ್ ಟಿ. ಎ. ಪಿ, ಸಿ. ಎಂ. ಎಸ್. ನ್ನು ಸೂಪರ್‌ಸೀಡ್ ಮಾಡಿದ್ದರಿಂದ ಅಲ್ಲಿ ಚೆನ್ನಾಗಿ ಕೆಲಸ ನಡೆಯುತ್ತಿದೆ ಎಂದು ಹೇಳಿದಿರಿ. ಆದರೆ ಸೂಪರ್ ಸೀಡ್ ಆದಮೇಲೆ ರೈತರಿಗೆ ಅನುಕೂಲವಾಗುವುದಕ್ಕೆ ಬದಲಾಗಿ ಅನಾನುಕೂಲಗಳೇ ಜಾಸ್ತಿಯಾಗಿದೆ. ಆದ್ದರಿಂದ ದಯುವಿಟ್ಟು ಒಂದು ಅಡ್ವೈಸರಿ ಬಾಡಿಯನ್ನು ನೇಮಕಮಾಡಿ, ಜನರಲ್ ಬಾಡಿ ಮೀಟಿಂಗ್ ಆಗುವವರೆಗೂ ಕೋಲಾರದ ಡಿ. ಸಿ. ಸಿ ಬ್ಯಾಂಕ್ ಹಾಗೂ ಮಾಲೂರು ತಾಲೂಕು ಟಿ. ಎ. ಎಂ. ಸಿ. ಎಂ ಎಸ್. ಗೆ ಅಡ್ವೈಸರಿಬಾಡಿಗಳನ್ನು ನೇಮಕ ಮಾಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಮೈಕೇಲ್ ಬಿ. ಫರ್ನಾಂಡೀಸ್ (ಭಾರತೀನಗರ). — ಮಾನ್ಯ ಅಧ್ಯಕ್ಷರೇ ನಮ್ಮ ರಾಜ್ಯದಲ್ಲಿ ಸಹಕಾರಿ ಚಳುವಳಿ ಹೆಚ್ಚಿನ ರೀತಿಯಲ್ಲಿ ಪ್ರಗತಿಯನ್ನು ಹೊಂದಿದೆ ಎಂದು ಹೇಳಿ ಈ ಒಂದು ವರದಿಯಲ್ಲಿ ಪ್ರಕಟಣೆಯಾಗಿದೆ. ಆದರೆ ಇದರಿಂದ ಯಾರು ಹೆಚ್ಚು ಲಾಭವನ್ನು ಪಡೆಯುತ್ತಿದ್ದಾರೆಂದು ತಿಳಿದುಕೊಳ್ಳತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಸುಮಾರು ಎಷ್ಟೋ ಕೋಟಿ ರೂಪಾಯಿಗಳನ್ನು ಸಾಲವಾಗಿ ಕೊಡಲಾಗಿದೆ ಎಂಬುದನ್ನು ಇದರಲ್ಲಿ ಅಂದರೆ ಈ ಒಂದು ಟೇಬಲ್‌ನಲ್ಲಿ ಕೊಟ್ಟಿದ್ದಾರೆ, ಆದರೆ ಎಷ್ಟು ಜನರಿಗೆ ಕೊಟ್ಟಿದ್ದಾರೆಂಬುದನ್ನು ಹೇಳುತ್ತಿಲ್ಲ ಎಷ್ಟು ಜನ ಸದಸ್ಯರು ಇದ್ದಾರೆಂಬುದನ್ನು ಹೇಳಿಲ್ಲ. ಎಷ್ಟು ಜನಕ್ಕೆ ಸಾಲವನ್ನು ಕೊಟ್ಟಿದ್ದಾರೆಂಬುದನ್ನೂ ಕೂಡ ಹೇಳುತ್ತಿಲ್ಲ ಅದರ ಜೊತೆಯಲ್ಲಿ ಸಾಲ ಬೇರೆ ಬೇರೆ ರೀತಿಯಲ್ಲಿ ಕೊಟ್ಟಿರುವುದು ನೋಡಿದರೆ, ಸರಾಸರಿ ನಾಲ್ಕುನೂರು ರೂಪಾಯಿಗಳಂತೆ ಸಾಲ ಕೊಟ್ಟಿರುವ ರೀತಿಯಲ್ಲಿ ಕಾಣುತ್ತಿದೆ. ೨೭ ಸಾವಿರ ಲಾಂಗ್ ಟರ್ಮ್ ಲೋನ್ ೨೭ ಸಾವಿರ ಜನರಿಗೆ ೧೮ ಕೋಟಿ ರೂಪಾಯಿ ಕೊಡಲಾಗಿದೆ ಎಂದು ಹೇಳಿರುತ್ತಾರೆ. ಅಂದರೆ ಸುಮಾರು ಸರಾಸರಿ ಆರೂವರೆಸಾವಿರ ವಾಗುತ್ತದೆ. ಒಂದೊಂದು ಮಟ್ಟದಲ್ಲಿ ಎಷ್ಟು ಕೊಟ್ಟಿರುತ್ತಾರೆಂದು ಹೇಳುತ್ತಿಲ್ಲ. ಉದಾಹರಣೆಗೆ ಒಂದು ಸಾವಿರ ಕೊಟ್ಟಿರತಕ್ಕಂಥದ್ದು ಎಷ್ಟು ಒಂದು ಸಾವಿರಕ್ಕೂ ಕಡಿಮೆ ಕೊಟ್ಟಿರುವುದು ಎಷ್ಟು ೨ ಸಾವಿರ ಕೊಟ್ಟಿರುವುದು ಎಷ್ಟು ಮೂರುಸಾವಿರದಿಂದ ಹತ್ತುಸಾವಿರ ಹದಿನೈದು ಸಾವಿರ ಕೊಟ್ಟಿರುವುದು ಎಷ್ಟು ಎಂದು ಹೇಳುತ್ತಿಲ್ಲ ಹಾಗೆಂದಮೇಲೆ ಯಾವರೀತಿ ಸಾಲ ಕೊಡಲಾಗಿದೆ ಎಂದು ತಿಳಿದುಕೊಳ್ಳತಕ್ಕಂಥ ವಿಧಾನ ಇದರಲ್ಲಿ ಇಲ್ಲ. ಇನ್ನು ಮುಂದಕ್ಕೆ ಆದರೂ ಈ ಬಗ್ಗೆ ಒಂದು ವಿಧಾನ ಜಾರಿಗೆ ತಂದರೆ ವರ್ಷ ವರ್ಷಕ್ಕೆ ಹೋದಹಾಗೆ ಯಾವರೀತಿ ಸಾಲ ವಿತರಣೆಯಾಗಿದೆ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ತಾವು ಅನೇಕ ಜನಕ್ಕೆ ಸಹಾಯ ಮಾಡುತ್ತಿದ್ದೇವೆಂದು ಏನು ಹೇಳುತ್ತಿದ್ದೀರಿ. ಈ ಬಗ್ಗೆ ವಿವರಗಳನ್ನು ಕೊಟ್ಟಿದ್ದರೆ ತಿಳಿದುಕೊಳ್ಳುವುದಕ್ಕೆ ಸಹಾಯವಾಗುತ್ತಿತ್ತು. ಈ ರೀತಿಯಲ್ಲಿ ಸ್ಟಾಟಿಸ್ಟಿಕ್ಸ್ ಕೊಟ್ಟರೆ ಅದರಿಂದ ನಾವು ತಿಳಿದುಕೊಳ್ಳುವುದಕ್ಕೆ ಆಗುವುದಿಲ್ಲ. ಇಷ್ಟು ಹೇಳಿದ ಮೇಲೆ ನಾನು ಒಂದೆರಡು ಬೇರೆ ವಿಚಾರಗಳನ್ನು ಹೇಳಿ ಒಂದು ಸಲಹೆಯನ್ನು ಕೊಡಲಿಕ್ಕೆ ಇಚ್ಛೆಪಡುತ್ತೇನೆ ಮಲ್ಟಿ ಪರಪಸ್ ಕೋಆಪರೇಟೀವ್ ಸೊಸೈಟಿಗೆ ಸರಿಯಾದ ಪ್ರೋತ್ಸಾಹ ಸಿಗುತ್ತಿಲ್ಲ. ನಾನು ತಿಳಿದುಕೊಂಡ ಹಾಗೆ ಮುಂದೆ ಬರೀ ಮಹಿಳೆಯರಿಗೆ ಮಾತ್ರ ಇದು ಮೀಸಲಾಗಿರುತ್ತದೆಂದು ರಿಜಿಸ್ಟರ್‌ಗೆ ಹೋದಾಗ ನನಗೆ ಉತ್ತರ ಸಿಕ್ಕಿತು. ಇದರಿಂದಾಗಿ ಅನೇಕ ಕೆಲಸಗಳನ್ನು ಸಹಕಾರಿ ಚಳುವಳಿಯ ಮೂಲಕ ಕಾರ್ಮಿಕರು ಮಾಡಲಿಕ್ಕೆ ಈವತ್ತು ಧಕ್ಕೆ ಬಂದಂತೆ ಕಾಣುತ್ತಾ ಇದೆ. ಇಲ್ಲಿ ಕೋಆಪರೇಟೀವ್ ಸೊಸೈಟಿಗಳ ಬಗ್ಗೆ ಹಲವಾರು ಪುಟಗಳಲ್ಲಿ ಒಂದು ವರದಿ ಇದೆ. ಮಿಸಲೇನಿಯಸ್ ಕೋಆಪರೇಟೀವ್ ಸೊಸೈಟಿ ಎಂದು ಹೇಳಿಕೊಂಡು ೭–೮ ಬೇರೆ ಬೇರೆ ಮಾದರಿಯ ಸೊಸೈಟಿ ಗಳ ಬಗ್ಗೆ ಕೇವಲ ಒಂದು ಚಿಕ್ಕ ಪ್ಯಾರಾಗ್ರಾಫಿನಲ್ಲಿ ವಿಚಾರಗಳನ್ನು ಮುಗಿಸಲಾಗಿದೆ. ಇದರಲ್ಲಿ ಯಾವ ಡಿಟೇಲ್ಸ್ ಕೂಡ ಇಲ್ಲ ಅದರಲ್ಲೂ ಬಹಳ ಶೋಚನೀಯವಾದುದೆಂದರೆ 'ಗರೀಬಿ ಹಟಾವೋ ಕೋಆಪರೇಟೀವ್ ಸೊಸೈಟಿ ಎಂದು ಇದೆ. ಇದಕ್ಕೆ ಏತಕ್ಕೆ ಈ ಹೆಸರನ್ನು ಕೊಡಬೇಕಾಗಿತ್ತೋ ನನಗಂತು ಅರ್ಥವಾಗುತ್ತಿಲ್ಲ ಯಾರು

ಈ ರಾಜ್ಯದಲ್ಲಿ ಅಂತವರು ಬರುತ್ತಾರೆ. ಯಾವ ಕ್ಲಾಸಿಫಿಕೇಶನ್‌ನಲ್ಲಿ ಬರುತ್ತಾರೆ. ಇವರು ಯಾವ ರೀತಿ ಗರೀಭಿ ಹಠಾವೋ ಮಾಡುತ್ತಾರೆ ಗೊತ್ತಿಲ್ಲ ಇದನ್ನು ಹೋಗಿಸುವುದಕ್ಕೆ ಬದಲಾಗಿ ಹೆಚ್ಚಿಸುತ್ತಿರುತ್ತಾರೆ ಎಂದು ಹೇಳಬೇಕಾಗಿದೆ. ಈ ಸಂದರ್ಭದಲ್ಲಿ ಒಂದು ಮುಖ್ಯವಾದ ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಲೇಬರ್ ಕಾಂಟ್ರಾಕ್ಟ್ ಸೊಸೈಟಿ ಎಂದು ಒಂದು ಸೊಸೈಟಿಯನ್ನು ಉದಾಹರಣೆಯಾಗಿ ಕೊಡಲಿಕ್ಕೆ ಇಷ್ಟ ಪಡುತ್ತೇನೆ. ಬೆಂಗಳೂರು ಏರ್‌ಪೋರ್ಟಿನಲ್ಲಿ ಒಬ್ಬರು ಕಂಟ್ರಾಕ್ಟರ್ ಇರುತ್ತಾರೆ. ಅವರು ತಿಂಗಳಿಗೆ ಒಂದುಸಾರಿ ಕಾಂಟ್ರಾಕ್ ಮೇಲೆ ಪೋರ್ಟರ್ಸ್‌ನ್ನು ತೆಗೆದು ಕೊಳ್ಳುತ್ತಾರೆ. ಏರ್‌ಲೈನ್ಸ್ ವರ್ಕ್‌ರ್ಸ್ ಅಲ್ಲ ಅಲ್ಲಿ ಈಚೆಕಡೆ ಕೆಲಸಮಾಡತಕ್ಕಂಥವರು ಪ್ಯಾಸೆಂಜರ್ಸ್‌ನ್ನು ಇಳಿದತಕ್ಷಣವೇ ಅವರ ಬ್ಯಾಗ್‌ಗಳನ್ನು ಚೆಕ್ಕಿಂಗ್ ಸಮಯಕ್ಕೆ ತೆಗೆದುಕೊಂಡು ಹೋಗತಕ್ಕಂಥದ್ದು ಇವರ ಕೆಲಸ ಇಂಥ ಕೆಲಸ ಮಾಡುವ ಸುಮಾರು ೬೦ ಕಾರ್ಮಿಕರನ್ನು ಒಬ್ಬ ಕಂಟ್ರಾಕ್ಟರ್ ಇಟ್ಟುಕೊಂಡಿರುತ್ತೇನೆ. ಅವರಿಗೆ ದಿನಕ್ಕೆ ಮೂರು ರೂಪಾಯಿಗಳು ಸಿಕ್ಕಿದರೆ ಜಾಸ್ತಿ. ಅವರೇ ಒಂದು ಟ್ರೇಡ್ ಯೂನಿಯನ್ ಎಂದು ಮಾಡಿಕೊಂಡಿದ್ದರು ಕಾರ್ಮಿಕರ ಸಂಘ ವೆಂದು. ಹೀಗೆ ಪ್ರಾರಂಭವಾದುದು ಕಡೆಗೆ ಲೇಬರ್ ಕೋಆಪರೇಟೀವ್ ಸೊಸೈಟಿ ಎಂದು ಮಾರ್ಪಾಡು ಮಾಡಲಾಯಿತು. ಅದರ ಬಿಡ್ ಮಾಡಿದರು. ಅವರೇ ಬಿಡ್‌ನ ರೈಟ್ಸ್‌ನ್ನು ಪಡೆದು ಕೊಂಡರು. ತಿಂಗಳು ಒಂದಕೆ ೧೮ ಸಾವಿರ ರೂಪಾಯಿಗಳನ್ನು ಏರ್‌ಲೈನ್ಸ್‌ನವರಿಗೆ ಕೊಡಬೇಕು. ಅವರೇನು ಇನ್‌ವೆಸ್ಟ್ ಮಾಡಿರುವುದಿಲ್ಲ. ಅವರಿಗೆ ಹೌಸ್ ಕೊಟ್ಟಿಲ್ಲ, ಯಂತ್ರಗಳನ್ನು ಕೊಟ್ಟಿಲ್ಲ. ಕೊನೆಗೆ ಅವರಿಗೆ ಒಂದು ಟೇಬಲ್ ಮೇಜ್ ಸಹ ಕೊಡುವಂಥ ವ್ಯವಸ್ಥೆ ಇಲ್ಲ ಕಾರ್ಮಿಕರು ಅವರೇ ನಡೆಸಿಕೊಂಡು ಬರುತ್ತಿದ್ದಾರೆ. ಏರ್‌ಲೈನ್ಸ್‌ರವರು ಹೇಳಿದರೀತಿಯಲ್ಲಿ ಯೂನಿಫಾರಮ್ ಬಣ್ಣದ್ದು ಡಿಸೈನ್ ಮಾಡಿಕೊಂಡು ಇರಬೇಕು, ಈ ರೀತಿ ಕೆಲಸ ಮಾಡಬೇಕಾದರೆ ೧೨ ಸಾವಿರ ರೂಪಾಯಿಗಳನ್ನು ಏರ್‌ಲೈನ್ಸ್ ರವರಿಗೆ ಕೊಡಬೇಕು. ಕೂತಲ್ಲೇ ಅವರು ಹಣವನ್ನು ತೆಗೆದುಕೊಳ್ಳುತ್ತಿದ್ದಾರೆ. ಇವರ ಶ್ರಮದಿಂದ ಬರತಕ್ಕಂಥ ಹಣ ೧೮ ಸಾವಿರ ರೂಪಾಯಿಗಳನ್ನು ಬಿಡ್ ಮುಖಾಂತರ ತೆಗೆದುಕೊಳ್ಳುತ್ತಿರುತ್ತಾರೆ. ಬಿಡ್ ಇಲ್ಲದೆ ಕೊಡತಕ್ಕಂಥ ಪದ್ಧತಿ ಇಲ್ಲ. ನಮ್ಮ ಕೋಆಪರೇಟೀವ್ ಡಿಪಾರ್ಟ್‌ಮೆಂಟ್ ಆಗಲಿ ಅಥವಾ ಸರ್ಕಾರವಾಗಲಿ ಈ ಕಾರ್ಮಿಕರಿಗೆ ತಿಂಗಳಿಗೆ ೧೮ ಸಾವಿರ ರೂಪಾಯಿಗಳನ್ನು ಕೊಡುವುದಿಲ್ಲ, ಏನಿದ್ದರೂ ಅವರು ಕೆಲಸಮಾಡಿ ದುಡಿಮೆ ಮಾಡಿ ಪಡೆದುಕೊಳ್ಳಬೇಕು, ಇದರ ಜೊತೆಗೆ ಡಿಪಾಸಿಟ್ ಬೇರೆ ಕೊಡಬೇಕು. ಅವರು ಬಿಟ್ಟು ಓಡಿಹೋಗುತ್ತಾರೆ ಎನ್ನುವ ರೀತಿಯಲ್ಲಿ ಕೂಡಲೇ ಡಿಪಾಸಿಟ್ ಮೊದಲು ಕೊಡಬೇಕು. ಸುಮಾರು ಒಂದು ತಿಂಗಳಲ್ಲಿ ಅಥವಾ ಮೂರು ತಿಂಗಳಲ್ಲಿ ಈ ಹಣ ಕೊಡಬೇಕು. ೬೦ ಸಾವಿರ ರೂಪಾಯಿಗಳಷ್ಟು ಹಣವನ್ನು ಬಡ್ಡಿಗೆ ಬ್ಯಾಂಕಿನಿಂದ ತೆಗೆದುಕೊಂಡು ಕೊಡಬೇಕು. ಬ್ಯಾಂಕಿಗೆ ೨೦ ಪರ್ಸೆಂಟ್ ಬಡ್ಡಿಯನ್ನು ಕಟ್ಟಬೇಕು. ಅವರು ಬೆಳಿಗ್ಗೆಯಿಂದ ರಾತ್ರಿವರೆಗೆ ದುಡಿದ ದುಡಿಮೆಯಿಂದ ಬಂದ ಹಣವನ್ನು ಬಡ್ಡಿ ಕಟ್ಟಲು ಕೊಡಬೇಕು. ಇದರಿಂದ ಡಿ.ಸಿ.ಸಿ.ಬ್ಯಾಂಕ್, ನ್ಯಾಷನಲೈಸ್ ಬ್ಯಾಂಕ್ ಮತ್ತು ಏರ್‌ಲೈನ್ಸ್ ಇವರು ಮೂವರಿಗೂ ಲಾಭ. ಶ್ರಮಪಟ್ಟು ದುಡಿಯತಕ್ಕಂಥವರಿಗೆ ಕೊಡತಕ್ಕಂಥ ಸಹಾಯ ಇದು ಏರ್‌ಲೈನ್ಸ್ ಸರ್ಕಾರದ ಒಂದು ದೊಡ್ಡ ಉದ್ಯಮ ಇದರಿಂದ ಲೇಬರ್ ಕೋಆಪರೇಟೀವ್ ಸೊಸೈಟಿಗೆ ತಾವು ಎನ್‌ಕರೇಜ್ ಮಾಡುವುದಾದರೆ ಅವರಿಗೆ ಬಿಡಿಂಗ್ ಇಲ್ಲದೆ ಕೊಡಬೇಕು ಪ್ರೈವೇಟ್ ಕಾಂಟ್ರಾಕ್ಟ್ ಬೇಕಾದರೆ ಬಿಡ್ ಮಾಡಲಿ. ಸರಕಾರ ಈ ಉದ್ಯಮದಲ್ಲಿ ಈ ರೀತಿ ಮಾಡುತ್ತಿದೆ ಎಂದರೆ ಸಹಕಾರಿ ಚಳುವಳಿಗೆ ಮಾಡತಕ್ಕಂಥ ಒಂದು ದ್ರೋಹವೆಂದು ಇಲ್ಲಿ ಹೇಳಬೇಕಾಗಿದೆ. ಆದ್ದರಿಂದ ಮಾನ್ಯ ಮಂತ್ರಿಗಳು ಮಧ್ಯೆ ಪ್ರವೇಶಮಾಡಿ ಆ ಹುಡುಗರಿಗೆ ಒಂದು ರಿಯಾಯಿತಿಯು ಸಿಕ್ಕುವಂಥಾ ರೀತಿಯಲ್ಲಿ ಪ್ರಯತ್ನ ಮಾಡಬೇಕು. ನಾನು ಕೂಡ ಪ್ರಯತ್ನ ಮಾಡಿದ್ದೇನೆ. ಮಾನ್ಯ ಎ.ಪಿ. ಶರ್ಮರವರು ಸಂಬಂಧಪಟ್ಟ ಮಂತ್ರಿಗಳು ಇಲ್ಲಿಗೆ ಬಂದಾಗ ನಾನು ಅಲ್ಲಿಗೆ ಹೋದಾಗ ಅವರನ್ನು ಭೇಟಿಮಾಡಿದ್ದು ಆಯಿತು. ಪತ್ರ ಕಳುಹಿಸಿದ್ದು ಆಯಿತು. ಮೂರು ತಿಂಗಳ ಡಿಪಾಸಿಟ್‌ನಲ್ಲಿ ರಿಯಾಯಿತಿ ಕೊಟ್ಟರೆ ಅವರಿಗೆ ಇಂಟರೆಸ್ಟ್ ಸೇವ್ ಆಗುತ್ತದೆ. ಇಷ್ಟರವರೆಗೆ ಯಾವ ವಿಧವಾದ ಸೌಲಭ್ಯವನ್ನು ಕೊಟ್ಟಿಲ್ಲ. ಅವರು ಸರ್ಕಾರಕ್ಕೆ ಮನವಿ ಸಲ್ಲಿಸಿರುತ್ತಾರೆ. ಅನೇಕ ಬಾರಿ ಮಾನ್ಯ ಶ್ರೀಕಂಠಯ್ಯನವರನ್ನು ಕೂಡ ಭೇಟಿ ಮಾಡಿರುತ್ತಾರೆ. ಆದರೆ ಅವರಿಗೆ ಇನ್ನೂ ಸಹಾಯ ಸಿಕ್ಕಿಲ್ಲ. ಅದರಿಂದಾಗಿ ಇಂತಹ ಒಂದು ಲೇಬರ್ ಕೋ-ಆಪರೇಟಿವ್ ಸೊಸೈಟಿ ಎಂದು ಏನು ಇರುತ್ತದೆ, ಅದಕ್ಕೆ ಒಂದು ಪ್ರತ್ಯೇಕವಾದ ಬೆಂಬಲ ಕೊಡಬೇಕು. ಏಕೆಂದರೆ ಅವರಿಗೆ ನಿಜವಾದ ಸಹಾಯಬೇಕು. ಅನೇಕ ಸೊಸೈಟಿಗಳು ಇರುತ್ತವೆ, ಸೊಸೈಟಿಗಳಲ್ಲಿ ಕಡಿಮೆ ಬಡ್ಡಿಗೆ ಹಣ ತೆಗೆದುಕೊಂಡು ಕಾರುಗಳಲ್ಲಿ ಓಡಾಡುತ್ತಿರುತ್ತಾರೆ. ಲೂಟಿ ಹೊಡೆಯುವ ಉದ್ದೇಶದಿಂದ ಸೊಸೈಟಿಗಳನ್ನು ತೆರೆಯುತ್ತಾರೆ. ಈ ಕಾರ್ಮಿಕರು ಹಾಗಲ್ಲ. ಅವರೇ ಶ್ರಮಪಟ್ಟು ಕೆಲಸಮಾಡಬೇಕು. ಇವರು

ಬೇರೆಯವರನ್ನು ಕೆಲಸಕ್ಕೆ ಇಟ್ಟು ಕೊಂಡಿಲ್ಲ ಅವರದೇ ಆದ ಸೊಸೈಟಿಯನ್ನು ಇಟ್ಟುಕೊಂಡಿದ್ದಾರೆ. ಇವರಿಗೆ ನಾವು ಸಹಾಯ ಮಾಡದಿದ್ದರೆ ಹೇಗೆ? ಸಹಕಾರ ಚಳುವಳಿ ಎಂದು ಹೇಳಿಕೊಂಡು ಕೋಟ್ಯಾಂತರ ರೂಪಾಯಿಗಳನ್ನು ಸಾಲ ಕೊಡುತ್ತಿದ್ದೇವೆ. ಇವರಿಗೆ ಸಾಲ ಕೊಡದಿದ್ದರೆ ಏನು ಪ್ರಯೋಜನ. ಈ ಕಾರ್ಮಿಕರಿಗೆ ಬಡ್ಡಿ ಇಲ್ಲದ ಸಾಲ ಕೊಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯಮಂತ್ರಿಗಳವರನ್ನು ಕೇಳಿಕೊಳ್ಳುತ್ತೇನೆ. ಈ ಇಲಾಖೆಯಲ್ಲಿ ಒಂದು ಪ್ರತ್ಯೇಕವಾದ ಸೆಲ್‌ನ್ನು ಇಟ್ಟುಕೊಳ್ಳಬೇಕು. ಈ ಸಹಕಾರ ಚಳುವಳಿಯನ್ನು ಬೆಳೆಸುವುದಕ್ಕೆ ಒಂದು ಹೊಸ ಸೆಲ್‌ನ್ನು ನಿರ್ಮಾಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ಕಾರ್ಮಿಕರ ಮಟ್ಟದಲ್ಲಿ ಅನೇಕ ಕಾರ್ಮಿಕರುಗಳಿಗೆ ಸಹಕಾರ ಸಂಘಗಳನು ರಚಿಸಲಿಕ್ಕೆ ಮುಂದೆ ಬರುತ್ತಿದ್ದಾರೆ. ಅವರಿಗೆ ಬೇಕಾದ ದಿನಬಳಕೆಯ ಅತ್ಯಾವಶ್ಯಕ ಪದಾರ್ಥಗಳನ್ನು ತಯಾರುಮಾಡಿಕೊಳ್ಳುವುದಕ್ಕೆ ಅದು ಇರಬಹುದು. ಅಥವಾ ಮನೆಗಳನ್ನು ಕಟ್ಟಲಿಕ್ಕೆ ಇರಬಹುದು ಅಥವಾ ವಿದ್ಯಾಸಂಸ್ಥೆಗಳನ್ನು ತೆರೆಯಲಿಕ್ಕೆ ಇರಬಹುದು, ಇದಕ್ಕೆಲ್ಲಾ ಸಹಾಯವಾಗುವ ರೀತಿಯಲ್ಲಿ ನನ್ನ ಒಂದು ಸಲಹೆ ಏನೆಂದರೆ ಸರ್ಕಾರದಿಂದಾಗಲೀ ಅಥವಾ ಪಬ್ಲಿಕ್ ಫೈನಾನ್ಸ್ ಸಂಸ್ಥೆಗಳಿಂದ ಆಗಲೀ ಹಣವನ್ನು ಪಡೆದುಕೊಳ್ಳುವುದಕ್ಕೆ ಇಷ್ಟಪಡದ ಕಾರ್ಮಿಕರು ಅವರ ಸ್ವಂತ ಹಣದಿಂದ ಸೊಸೈಟಿಗಳನ್ನು ಮಾಡಿಕೊಳ್ಳುತ್ತೇವೆ ಎಂದಾಗ ಆ ಸೊಸೈಟಿಗಳನ್ನು ರಿಜಿಸ್ಟರ್ ಮಾಡಲಿಕ್ಕೆ ಈಗಿರತಕ್ಕ ಕೆಲವು ನಿರ್ಭಂಧಗಳನ್ನು ಹೋಗಲಾಡಿಸಬೇಕು. ಇಲ್ಲದಿದ್ದರೆ ಸೊಸೈಟಿಗಳನ್ನು ರಿಜಿಸ್ಟರ್ಡ್ ಮಾಡಿದಿದ್ದಲ್ಲಿ ಬಹಳ ಕಷ್ಟವಾಗುತ್ತದೆ, ಇದಕ್ಕಾಗಿ ಏಳೆಂಟು ತಿಂಗಳು ಒದ್ದಾಡಬೇಕು. ಆ ಸೊಸೈಟಿಗಳನ್ನು ನಿಮ್ಮ ಹತೋಟಿಯಲ್ಲಿಟ್ಟು ಕೊಳ್ಳಬೇಕು ಅಲ್ಲಿ ಬೇಕಾದರೆ ನಿಮ್ಮ ನಿರ್ಬಂಧ ಹಾಗೂ ಬೇರೆ ಬೇರೆ ನಿಯಮಗಳು ಇರಲಿ. ಕಠಿಣವಾದ ನಿಯಮಗಳನ್ನು ಮಾಡಿ ಅವರ ಮೇಲೆ ವಿಶೇಷವಾದಂತಹ ರೀತಿಯಲ್ಲಿ ನೋಡಿಕೊಳ್ಳಿ. ಬೇರೆಯವರಿಗೆ ಸುಲಭವಾಗಿ ಸೊಸೈಟಿಗಳನ್ನು ರಿಜಿಸ್ಟರ್ಡ್ ಮಾಡುವಂತಹ ಅವಕಾಶವನ್ನು ಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕಾರ್ಮಿಕರ ಸಹಕಾರ ಸಂಘವನ್ನು ಬೆಳಸಲಿಕ್ಕೆ ಸುಲಭ. ಅವರು ಕೊಡಬೇಕಾದ ಹಣವನ್ನು ಅವರ ಸಂಬಳದಿಂದ ಹಿಡಿದು ಸೊಸೈಟಿಗೆ ಜಮಾ ಮಾಡಬಹುದು. ಆದರೆ ಅನೇಕ ಸರ್ಕಾರಿ ಮತ್ತು ಖಾಸಗಿ ಕೈಗಾರಿಕೆಗಳಲ್ಲಿರತಕ್ಕ ಅಧಿಕಾರಿಗಳು ಮತ್ತು ಮಾಲೀಕರು ಇದಕ್ಕೆ ಅವಕಾಶ ಕೊಡುವುದಿಲ್ಲ. ಕಾನೂನು ರೀತಿ ಅವಕಾಶ ಕೊಡುವುದಕ್ಕೆ ಕಾರ್ಮಿಕರಿಗೆ ಆ ಒಂದು ಹಕ್ಕು ಇದೆ. ಮಾಲೀಕರು ಅನೇಕ ಬೇರೆ ಬೇರೆ ಅಡ್ಡಿಗಳನ್ನು ಹಾಕಿ ಇದನ್ನು ಮಾಡುತ್ತಿಲ್ಲ. ಕಾರ್ಮಿಕರ ಪರವಾಗಿ ಉದ್ದಿಮೆಗಳಿಗೆ ಒಂದು ಆದೇಶ ಹೋಗಬೇಕು. ಎಲ್ಲ ಕಾರ್ಮಿಕರು ಅವರ ಸೊಸೈಟಿಗಳನ್ನು ಸ್ಥಾಪನೆ ಮಾಡಲಿಕ್ಕೆ ಇಷ್ಟಪಡುತ್ತಾರೆ ಅದು ಮನೆ ಕಟ್ಟಲಿಕ್ಕೆ ಇರಬಹುದು, ಅಥವಾ ಶಾಲಾ ಪರವಾಗಿ ಇರಬಹುದು, ಬೇರೆ ಬೇರೆ ಕಾರ್ಯಗಳಿಗಿರಬಹುದು, ಸೊಸೈಟಿಗೆ ಬರತಕ್ಕ ಹಣವನ್ನು ಅವರ ಸಂಬಳದಿಂದ ಹಿಡಿದು ಕಳುಹಿಸಬಹುದು. ಕಾರ್ಮಿಕರ ಪರವಾಗಿ ಕಾರ್ಮಿಕರೇ ಒಂದು ಸಂಘ ಕಟ್ಟಿದರೆ ಸರಿ, ಅದು ಒಳಗಡೆ ನಡೆಯುತ್ತದೆ. ಆದರೆ ಚಿಕ್ಕ ಚಿಕ್ಕ ಉದ್ದಿಮೆಗಳಲ್ಲಿರತಕ್ಕ ಕಾರ್ಮಿಕರು ಒಳಗಡೆ ಸಂಘ ಕಟ್ಟಲಿಕ್ಕೆ ಆಗುವುದಿಲ್ಲ. ನೀವು ಕೂಡ ರಿಜಿಸ್ಟರ್ಡ್ ಮಾಡುವುದಕ್ಕೆ ಇಷ್ಟಪಡುವುದಿಲ್ಲ. ೩ ಸಾವಿರ ಜನ ಒಂದು ಸಂಘ ಕಟ್ಟಬೇಕಾದರೆ ೫೦ ಉದ್ದಿಮೆಗಳಿಂದ ಕಾರ್ಮಿಕರು ಮುಂದೆ ಬರಬೇಕು. ಎಲ್ಲಾ ಕಡೆಯಿಂದ ಹಣ ವಿಲೇವಾರಿಯಾಗುವಂತೆ ಸರ್ಕಾರದ ಕಡೆಯಿಂದ ಮಾಲೀಕರ ಮೇಲೆ ಒಂದು ಆದೇಶ ಹೋಗಬೇಕೆಂದು ಕೇಳಿಕೊಂಡು ನಾನು ೧೦ ನಿಮಿಷ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ವಿ. ಪತ್ತಾರ್ (ಜಮಖಿಂಡಿ).—ಮಾನ್ಯ ಅಧ್ಯಕ್ಷರೇ, ಸಹಕಾರ ಮಂತ್ರಿಗಳು ಮತ್ತು ರೆಗ್ಯುಲೇಟೆಡ್ ಮಾರ್ಕೆಟ್ ಮಂತ್ರಿಗಳು ತಂದಂಥಹ ಬೇಡಿಕೆಗಳನ್ನು ಅಗತ್ಯವಾಗಿ ಬೆಂಬಲಿಸಿ ಬೇಕಾಗುತ್ತದೆಂದು ನನ್ನ ಅಭಿಪ್ರಾಯ. ಬಹುಶಃ ಅತ್ತ ಕಡೆಯ ಮಾನ್ಯ ಸದಸ್ಯರು ಒಳ್ಳೆಯ ತೂಕದ ಮಾತುಗಳನ್ನು ಹೇಳಿದ್ದಾರೆ. ಸರ್ಕಾರಿರಂಗದಲ್ಲಿ ಸಹಕಾರ ಆಂಧೋಳನ ಕಡಿಮೆಯಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಮಾನ್ಯ ಸದಸ್ಯರಲ್ಲಿ ಕೇಳಿ ಕೊಳ್ಳುವುದೇನೆಂದರೆ, ಸರ್ಕಾರದ ತೊಂದರೆಗಳನ್ನು ಹಾಗೂ ಕೆಲವೊಂದು ವಿಶಿಷ್ಟವಾದಂತಹ ಸನ್ನಿವೇಶಗಳನ್ನು ತಾವು ಗಣನೆಗೆ ತೆಗೆದುಕೊಳ್ಳಬೇಕು ಎಂದು ಅದನ್ನು ಗಣನೆಗೆತೆಗೆದುಕೊಂಡ ಪಕ್ಷದಲ್ಲಿ ಸಾಕಷ್ಟು ಸಹಕಾರರಂಗದಲ್ಲಿ ಪ್ರಗತಿಯನ್ನುಸಾಧಿಸಿದ್ದೇವೆ ಅದರ ಮಟ್ಟವನ್ನು ಕಾಪಾಡಿಕೊಂಡು ಹೋಗತಕ್ಕಂತಹ ಕೆಲಸವನ್ನು ನಮ್ಮ ಮಾನ್ಯ ಮಂತ್ರಿಗಳು ಮಾಡಿದ್ದಾರೆಂದು ಹೇಳಬಯಸುತ್ತೇನೆ. ಈ ಸಹಕಾರ ಸಂಘಗಳ ಸಾಲವನ್ನು ವಾಪಸ್ ಕೊಡಬಾರದು ಎಂದು ನಮ್ಮ ರಾಜ್ಯದಲ್ಲಿ ಚಳುವಳಿ ನಡೆಯುತ್ತಿದೆ. ಸಾಲವನ್ನು ವಾಪಸ್ಸು ಕೊಡದಿದ್ದರೆ ನಿಮ್ಮ ಪ್ರಕಾರ ಸಹ

ಕಾರ ಸಂಘಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ನಾವು ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಸಹಕಾರ ಸಂಘದಿಂದ ಸಾಲವನ್ನು ಕೇಳಲಿಕ್ಕೆ ಹೋದ ಅಧಿಕಾರಿಗಳನ್ನು ಬಡಿಯುವುದು ಸರಿಯಲ್ಲ, ಇವರು ರೈತರಮನೆಗಳನ್ನು ಜಪ್ತಿ ಮಾಡುವುದು ಇದು ಯಾವುದೇ ಸರ್ಕಾರ ಬರಲಿ ಇಂತಹ ವಿಶಿಷ್ಟ ಕಾರ್ಯಗಳನ್ನು ಮಾಡದಿದ್ದರೆ ಸಹಕಾರಸಂಘಕ್ಕೆ ಬಹಳ ದೊಡ್ಡ ಹೊಡೆತ ಬೀಳುತ್ತದೆಂದು ಹೇಳದೆ ಗತ್ಯಂತರವಿಲ್ಲ. ಇನ್ನೊಂದು ಪ್ರಾಮುಖ್ಯವಾದ ವಿಚಾರ ನಮ್ಮ ರಾಜ್ಯದಲ್ಲಿ ಒಟ್ಟು ಹಿಡುವಳಿದಾರರ ಸಂಖ್ಯೆ ೩೮ ಲಕ್ಷದ ೧೦ ಸಾವಿರದ ೭೨೦. ಇದರಲ್ಲಿ ಸುಮಾರು ೧೨ ಲಕ್ಷದ ೭೪ ಸಾವಿರದ ೧೭೪ ಸಣ್ಣ ಹಿಡುವಳಿದಾರರು ಇದರಲ್ಲಿ ೧ ರಿಂದ ೨ ಹೆಕ್ಟೇರ್ ಇದ್ದಂತಹವರು ೮೮ ಸಾವಿರದ ೨೩ ೪ ರಿಂದ ೧೦ ಹೆಕ್ಟೇರ್ ಇದ್ದ ಹಿಡುದಳಿದಾರರ ಸಂಖ್ಯೆ ೯ಲಕ್ಷದ ೩೧ ಸಾರವಿದ ೪೩೦, ೧೦ ರಿಂದ ಹೆಚ್ಚಿಗೆ ಹೆಕ್ಟೇರ್ ಇದ್ದ ಹಿಡುವಳಿದಾರರ ಸಂಖ್ಯೆ ೧೯ ಲಕ್ಷದ ೯ ಸಾವಿರದ ೨೩ ಎಂದು ಅಂಕಿಅಂಶಗಳಿಂದ ತಿಳಿದು ಬರುತ್ತದೆ. ಪ್ರಮುಖವಾಗಿ ಸಹಕಾರ ಸಂಘಗಳಿಂದ ಸಾಲವನ್ನು ತೆಗೆದುಕೊಂಡ ಹಿಡುವಳಿದಾರರನ್ನು ನಾವು ಗಣನೆಗೆ ತೆಗೆದುಕೊಂಡಲ್ಲಿ ಸಣ್ಣ ಹಿಡುವಳಿದಾರರಂತೂ ಸಾಲವನ್ನೇ ತೆಗೆದುಕೊಂಡಿಲ್ಲ. ಮಧ್ಯಮ ಹಿಡುವಳಿದಾರರು ಅಂದರೆ ೪ ರಿಂದ ೧೦ ಹೆಕ್ಟರ್ ಭೂಮಿ ಇರತಕ್ಕವರು ಸ್ವಲ್ಪ ಮಟ್ಟಿಗೆ ಸಾಲವನ್ನು ತೆಗೆದುಕೊಂಡಿದ್ದಾರೆ. ೧೦ ಹೆಕ್ಟೇರ್‌ಗಿಂತ ಹೆಚ್ಚಿಗೆ ಜಮೀನುಳ್ಳವರು ಸಹಕಾರ ಸಂಘಗಳಲ್ಲಿ ಹೆಚ್ಚಾಗಿ ಸಾಲವನ್ನು ತೆಗೆದುಕೊಂಡಿದ್ದಾರೆ. ದೊಡ್ಡ ರೈತರ ತಮ್ಮ ಸಾಲವನ್ನು ಮನ್ನಾ ಮಾಡಬೇಕೆಂದು ತಮ್ಮ ಬೇಡಿಕೆಯನ್ನು ಇಟ್ಟು ಒತ್ತಾಯಿಸುತ್ತಿದ್ದಾರೆ. ಆದ್ದರಿಂದ ಈ ಚಳುವಳಿಗೆ ನಾವು ಪ್ರೋತ್ಸಾಹ ಕೊಟ್ಟರೆ ಸಹಕಾರಿ ರಂಗಕ್ಕೆ ಬಲವಾದ ಒತ್ತಡ ಬೀಳುತ್ತದೆಂದು ಹೇಳದೆ ಗತ್ಯಂತರವಿಲ್ಲ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ಸದಸ್ಯರಲ್ಲಿ ಕೇಳಿಕೊಳ್ಳುತ್ತೇನೆ, ಸಹಕಾರದ ಹಿತದೃಷ್ಟಿಯಿಂದ ತಾವು ಕೂಡ ಇದಕ್ಕೆ ಸಹಾಯ ಮಾಡಬೇಕು ಎಂದು, ನೀವೂ ಕೂಡ ಸರ್ಕಾರಕ್ಕೆ ಪರ್ಯಾಯವಾಗಿ ಸಹಕಾರ ಕೊಟ್ಟರೆ ಮಾತ್ರ ಈಗ ನಡೆಯುತ್ತಿರುವ ಚಳುವಳಿ ನಡೆಯುವುದಿಲ್ಲ ಎನ್ನತಕ್ಕ ಮಾತನ್ನು ತಿಳಿಯಬಸುತ್ತೇನೆ.

ಮಾನ್ಯ ದೇವೇಗೌಡರು ಮಾತಾನಾಡುವಾಗ ಸಹಕಾರಿ ರಂಗದಲ್ಲಿ ಸಕ್ಕರೆ ಕಾರ್ಖಾನೆ ಹಾಗೂ ಟೆಕ್ಸ್‌ಟೈಲ್ಸ್ ನೂಲಿನ ಗಿರಣಿಗಳ ಬಗ್ಗೆ ಬಹಳ ಕಟುವಾಗಿ ಟೀಕೆ ಮಾಡಿದ್ದಾರೆ. ಅವರ ಮಾತಿನಲ್ಲಿ ಸ್ವಲ್ಪ ಸತ್ಯಾಂಶವಿದೆ. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೧೦ ಸಕ್ಕರೆ ಕಾರ್ಖಾನೆಗಳನ್ನು ಕೊಡಲಾಗಿದೆ ಅದರಂತೆ ೧೪ ನೂಲಿನ ಗಿರಣಿಗಳನ್ನು ಸಹ ನಮ್ಮ ರಾಜ್ಯಕ್ಕೆ ಕೊಡಲಾಗಿದೆ.

೬–೦೦ ಪಿ. ಎಂ.

ಆದರೆ ಏನಾಗುತ್ತಿದೆ ಎಂದರೆ, ಈ ಸಹಕಾರಿ ರಂಗದಲ್ಲಿ ಮತ್ತು ಕೋಆಪರೇಟೀವ್ ರಂಗದಲ್ಲಿ ಬರುತ್ತಿರುವ ಸಕ್ಕರೆ ಕಾರ್ಖಾನೆಗಳ ಕುತ್ತಿಗೆಯನ್ನು ಕೊಯ್ಯುವ ಕೆಲಸ ನಡೆಯುತ್ತಿದೆ. ಯಾರು ಈ ರೀತಿ ಕುತ್ತಿಗೆ ಹಿಸುಕುವ ಕೆಲಸ ಮಾಡುತಿದ್ದಾರೆಂಬುದನ್ನು ನಾನು ಈಗ ಹೇಳುವುದಿಲ್ಲ. ಇದು ಮಾನ್ಯ ಶ್ರೀಕಂಠಯ್ಯನವರಿಗೆ ಗೊತ್ತಿದೆ. ಆದರೆ ಮಾನ್ಯ ಮಂತ್ರಿಗಳು ಇಂತಹ ಜನರಿಗೆ ಪ್ರೋತ್ಸಾಹ ಕೊಡಬಾರದು. ರೈತಾಪಿ ಜನಾಂಗಕ್ಕೆ ನಾವು ಒಳ್ಳೆಯದಾಬಂಥ ಕೊಡಗೆ ಕೊಡಬೇಕಾದರೆ ಸಹಕಾರಿ ರಂಗದಲ್ಲಿ ಹೆಚ್ಚು ಸಕ್ಕರೆ ಕಾರ್ಖಾನೆಗಳನ್ನು ತೆಗೆಯುವುದು ಒಳ್ಳೆಯದು. ನಮ್ಮ ಜಮಖಂಡಿಯಲ್ಲಿ ಸೋಮಯ್ಯ ಸಕ್ಕರೆ ಕಾರ್ಖಾನೆ ಇದೆ. ಇದರ ಬಗ್ಗೆ ಹೇಳಬೇಕೆಂದರೆ, ಒಂದು ಟನ್ ಕಬ್ಬಿಗೆ ೧೪೮ ರೂಗಳನ್ನು ಕೊಡುತ್ತಾರೆ. ಅಂದರೆ ಒಂದು ಟನ್ ಕಬ್ಬನ್ನು ಬೆಳೆಯಲು ಸಾಕಾಗುವಷ್ಟು ಹಣವನ್ನು ಸಹ ಅವರು ಕೊಡುತ್ತಿಲ್ಲ. ಅದೇ ಸಹಕಾರಿ ಕ್ಷೇತ್ರದಲ್ಲಿ ಇಂತಹ ಕಾರ್ಖಾನೆಗಳು ಸ್ಥಾಪನೆಯಾದರೆ ರೈತರಿಗೆ ಒಳ್ಳೆಯ ಬೆಲೆ ಸಿಗುತ್ತದೆ. ಆದಕಾರಣ ಇದರ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ೧೪ ನೂಲಿನ ಗಿರಣಿಗಳ ಪೈಕಿ ಈಗ ಒಂಬತ್ತನ್ನು ಪ್ರಾರಂಬ ಮಾಡಲು ಪ್ರಪೋಸಲ್ ಬಂದಿದೆ. ಇನ್ನುಳಿದ ೫ ನೂಲಿನ ಗಿರಣಿಗಳ ಕೆಲಸ ಪ್ರಾರಂಭವೇ ಆಗಿಲ್ಲ. ನಾವು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಈಗಾಗಲೇ ೩ ವರ್ಷಗಳನ್ನು ಕಳೆದಿದ್ದೇವೆ. ಇನ್ನುಳಿದ ೨ ವರ್ಷಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಮತ್ತು ನೂಲಿನ ಗಿರಣಿಗಳನ್ನು ಸ್ಥಾಪನೆ ಮಾಡಬೇಕಾಗಿದೆ. ಆದಕಾರಣ ಈ ದಿಶೆಯಲ್ಲಿ ಸರ್ಕಾರ ಸಾಕಷ್ಟು ಗಮನ ಕೊಡಬೇಕೆಂದು ಕಳಕಳಿಯಿಂದ ನಾನು ವಿನಂತಿ ಮಾಡುತ್ತೇನೆ.

ಇನ್ನು ಮಾನ್ಯ ತಕ್ಕೇದ್ ರವರು ಷೇರ್–ಲೋನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಷೇರ್–ಹಣವನ್ನು ಜಾಸ್ತಿ ಮಾಡಿದರೆ ರೈತರಿಗೆ ಕಷ್ಟವಾಗುತ್ತದೆಂದು ಅವರು ಹೇಳಿದರು. ಅದೇ ರೀತಿ ಕನ್‌ಸ್ಯೂಮರ್ ನೂಲಿನ ಗಿರಣಿ ಹೊಸದಾಗಿ ಸ್ಥಾಪನೆಯಾದರೆ ಬಹುತೇಕ ಬಡ ನೇಕಾರರೇ ಸದಸ್ಯರಾಗ

ಬೇಕಾಗುತ್ತದೆ. ಇಂತಹವರಿಗೆ ೫೦೦ ಇಲ್ಲವೇ ಒಂದು ಸಾವಿರ ರೂಗಳನ್ನು ಷೇರ್ ಹಣ ಎಂದು ಕೊಡಿ ಎಂದರೆ ಅಷ್ಟು ಹಣ ಕೊಡಲು ಅವರಿಗೆ ಶಕ್ತಿ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಸಕಾರದವರು ಸಾಲ ಕೊಡಬೇಕಾಗುತ್ತದೆ. ಇಲ್ಲದಿದ್ದರೆ ಯಾವುದೇ ನೂಲಿನ ಗಿರಣಿ ಅಸ್ತಿತ್ವಕ್ಕೆ ಬರುವುದಿಲ್ಲ. ಇಂತಹ ಸಂದರ್ಭದಲ್ಲಿ ರೃತರೂ ಸಹ ತಮ್ಮ ಹತ್ತಿ ಖರ್ಚಾಗದೆ ನಷ್ಟಕ್ಕೆ ಒಳಗಾಗಬೇಕಾಗುತ್ತದೆ. ಬರಗಾಲ ಬಂದಾಗಲೂ ಸಹ ರೈತರು ಕಷ್ಟಕ್ಕೀಡಾಗುತ್ತಾರೆ. ದೊಡ್ಡದೊಡ್ಡ ಕಾರ್ಖಾನೆಗಳನ್ನು ಸ್ಥಾಪನೆ ಮಾಡುವ ಕಾಲಕ್ಕೆ ಷೇರ್-ಕ್ಯಾಪಿಟಲ್‌ಗೆ ಕೋಟಿಗಟ್ಟಲೆ ಹಣ ಬೇಕಾಗುತ್ತದೆ. ಆದಕಾರಣ ಸರ್ಕಾರದವರು ಇದರ ಕಡೆಗೆ ಮುತುವರ್ಜಿವಹಿಸಿ ಷೇರ್ ಲೋನ್ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಹೌಸಿಂಗ್ ಸೊಸೈಟಿಗಳ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ನಮ್ಮ ಬೆಂಗಳೂರು ಹಾಗು ಇನ್ನಿತರ ನಗರಗಳಲ್ಲಿ ಬಹಳ ಹೆಚ್ಚಿನ ರೀತಿಯಿಂದ ಈ ಹೌಸಿಂಗ್ ಸೊಸೈಟಿಗಳನ್ನು ಸ್ಥಾಪನೆ ಮಾಡುವುದು ಒಳ್ಳೆಯದೆಂದು ಹೇಳುತ್ತೇನೆ. ಏಕೆಂದರೆ, ಕಳೆದ ಹತ್ತು ವರ್ಷಗಳಲ್ಲಿ ನಮ್ಮ ದೇಶದ ಜದಸಂಖ್ಯೆ ಮೊದಲಿಗಿಂತ ಎರಡರಷ್ಟು ಜಾಸ್ತಿಯಾಗಿದೆ. ಈ ರೀತಿ ಹೆಚ್ಚಾಗುತ್ತಿರುವ ಜನ ಸಂಖ್ಯೆಗೆ ವಸತಿ ಸೌಲಭ್ಯವನ್ನು ಒದಗಿಸಲು ಕೇವಲ ಹೌಸಿಂಗ್ ಬೋರ್ಡಿಗಾಗಲೀ, ಹೌಸಿಂಗ್ ಪೆಡರೇಷ ಗಾಗಲಿ , ಹೌಸಿಂಗ್ ಕಾಪೊರೇಷನ್‌ಗಾಗಲಿ, ಸಾಧ್ಯವಿಲ್ಲ. ಆದಕಾರಣ ಹೌಸಿಂಗ್ ಸೊಸೈಟಿಗಳ ಮುಖಾಂತರ ಸಹಕಾರಿ ರಂಗದ ಮುಖಾಂತರ ವಸತಿಗಳನ್ನು ನಿರ್ಮಾಣ ಮಾಡಬೇಕಾಗುತ್ತದೆ. ಈ ದಿಶೆಯಲ್ಲಿ ನಾವು ಬೆಂಗಳೂರಿನಂತಹ ನಗರಗಳಲ್ಲಿ ಸೊಸೈಟಿಗಳು ಸ್ಥಾಪನೆಯಾಗಲು ತಾವು ಒಂದು ಸೀಲಿಂಗ ಹಾಕಿಬಿಟ್ಟರೆ ಇವು ಹೆಚ್ಚಿನ ಸಂಖ್ಯೆಯಲ್ಲಿ ಸ್ಥಾಪನೆಯಾಗುವುದು ಕಷ್ಟವಾಗುತ್ತದೆ. ಆದಕಾರಣ ಈಗಿರು ತಮ್ಮ ನೀತಿಯನ್ನು ಮಾರ್ಪಾಡುಮಾಡಿ ಇದಕ್ಕೆ ತಾವು ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಎಲ್. ತಿಮ್ಮೇಗೌಡ (ಬಸವನಗುಡಿ).—ಮಾನ್ಯ ಅಧ್ಯಕ್ಷರೆ, ನಮ್ಮ ರೈತರ ಜೀವನ ಸುಗುಮವಾಗಿ ನಡೆಯಬೇಕಾದರೆ ಸಹಕಾರಿ ತತ್ವದ ಆಧಾರದ ಮೇಲೆ ಸ್ಥಾಪನೆಯಾಗಿರುವ ಸಹಕಾರಿಸಂಘಗಳು ಯಶಸ್ವಿಯಾಗಿ ನಡೆಯಬೇಕೆಂಬುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ ನಮ್ಮ ದೇಶದಲ್ಲಿ ಪ್ರತಿಯೊಂದು ಕ್ಷೇತ್ರವು ಸಹಕಾರಿ ರಂಗದ ತತ್ವದ ಮೇಲೆ ನಡೆಯುತ್ತಿವೆ. ರೈತರಿಗೆ ಸಾಲ ಕೊಡುವ ಸೊಸೈಟಿಗಳು, ಹೌಸಿಂಗ್, ಸೊಸೈಟಿಗಳು ಸಕ್ಕರೆ ಕಾರ್ಖಾನೆಗಳು, ಹತ್ತಿ ಗಿರಣಿಗಳು ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಹಕಾರಿ ತತ್ವದ ಆಧಾರದ ಮೇಲೆ ಹಲವಾರು ಸೊಸೈಟಿಗಳು ನಮ್ಮಲ್ಲಿ ಕೆಲಸ ಮಾಡುತ್ತಿವೆ. ಆದರೆ ಈ ಸೊಸೈಟಿಗಳು ರೈತರ ಮತ್ತು ಸಾಮಾನ್ಯ ಜನರ ಒಂದು ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸುವ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲವೆಂದು ನೆನ್ನೆಯಿಂದ ಮಾತನಾಡಿದ ಎಲ್ಲ ಮಾನ್ಯ ಸದಸ್ಯರು ಹೇಳಿದ್ದಾರೆ. ಇವುಗಳ ಒಂದು ಕೆಲಸ ಅಷ್ಟೊಂದು ಫಲಪ್ರದವಾಗಿರುವುದರಿಂದ ಕಾರಣವೇನೆಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ನಮ್ಮ ದೇಶದಲ್ಲಿರುವ ಈ ಸಹ ಕಾರಿಸಂಘಗಳು ಚೆನ್ನಾಗಿ ನಡೆದಿರುವುದಕ್ಕೆ ಕಾರಣವೇನೆಂದರೆ, ನನಗೆ ತಿಳಿದಮಟ್ಟಿಗೆ ಹೇಳಬೇಕೆಂದರೆ, ಅಲ್ಲಿ ಪಕ್ಷ ಹಾಗೂ ರಾಜಕೀಯ ತಲೆದೂರುವುದು ಒಂದು ಕಾರಣವಾದರೆ ಸಹಕಾರಿ ತತ್ವದಲ್ಲಿ ನಿಷ್ಠೆಯುಳ್ಳ ಅಧಿಕಾರಿಗಳ ಕೊರತೆ ಇರುವುದು ಮತ್ತೊಂದು ಕಾರಣ, ಬೃಹತ್ ಪ್ರಮಾಣದಲ್ಲಿ ಭ್ರಷ್ಟಚಾರವಿರುವುದು ಒಂದು ಕಾರಣ ಹಾಗೂ ಸರ್ಕಾರದ ಹಸ್ತ ಕ್ಷೇಪವೂ ಮತ್ತೊಂದು ಕಾರಣ ಎಂದು ಹೇಳಬಹುದು. ಸಹಕಾರಿ ತತ್ವದಲ್ಲಿ ನಿಷ್ಠೆಯಿರುವ ಅಧಿಕಾರಿಗಳ ಕೊರತೆ ಇರುವುದಕ್ಕೆ ಕಾರಣವೇನಂದರೆ, ಪಿ. ಎಸ್. ಸಿ. ನವರು ಅಸಿಸ್ಟೆಂಟ್ ರಿಜಿಸ್ಟ್ರಾರ ಅವರುಗಳನ್ನು ಆರಿಸುವಾಗ ಅವರಿಗೆ ಸಹಕಾರಿ ತತ್ವದ ಮೇಲೆ ಆಸಕ್ತಿ ಇದೆಯೋ ಎಂದು ನೋಡುವುದಿಲ್ಲ, ಇವರುಗಳನ್ನು ನೇಮಕ ಮಾಡಿದ ನಂತರವಾದರೂ ಇವರುಗಳು ಸಹಕಾರಿ ತತ್ವದ ಮೇಲೆ ನಿಷ್ಠೆಯನ್ನು ಬೆಳಸಿಕೊಳ್ಳುವುದಕ್ಕೆ ಇವರ ಮೇಲಿನ ಅಧಿಕಾರಿಗಳು ಮತ್ತು ಸರ್ಕಾರದವರು ಅವಕಾಶ ಮಾಡಿಕೊಡುವುದಿಲ್ಲ. ಇದರ ಜೊತೆಗೆ ರಾಜಕಾರಿಣಿಗಳು ಕೂಡ ಈ ಒಂದು ಅವಕಾಶ ಮಾಡಿಕೊಡುವುದಿಲ್ಲ. ಇದರ ಜೊತೆಗೆ ರಾಜಕಾರಣಿಗಳು ಕೂಡ ಈ ಒಂದು ಅವಕಾಶವನ್ನು ಮಾಡಿ ಕೊಡುವುದಿಲ್ಲ. ರಿಜಿಸ್ಟ್ರಾರವರ ಜಾಗಕ್ಕೆ ಐ. ಎ, ಎಸ್. ಅಧಿಕಾರಿಯನ್ನು ನೇಮಕ ಮಾಡುವಾಗಲೂ ಸಹ ಅವರಿಗೆ ಈ ಸಹಕಾರಿ ತತ್ವದ ಮೇಲೆ ಪೂರ್ತಿಯಾದ ನಿಷ್ಠೆ ಇದೆಯೋ ಅಥವಾ ಇಲ್ಲವೇ ಎಂಬುದನ್ನು ನೋಡದೆ ಯಾರೋ ಒಬ್ಬರನ್ನು ನೇಮಕ ಮಾಡುತ್ತೀರಿ. ಇಂತಹವರಿಗೆ ಈಸಹಕಾರಿ ತತ್ವದ ಮೇಲೆ ನಿಷ್ಟೆ ಇಲ್ಲದ ಕಾರಣಹೇಗೋ ಆಡಳಿತ ವನ್ನು ನಡೆಸಿಕೊಂಡು ಹೋಗುತ್ತಾರೆ. ಅಧಿಕಾರಿಗಳಲ್ಲಿ ಸಹಕಾರಿ ತತ್ವದ ಮೇಲೆ ನಿಷ್ಟೆ ಇಲ್ಲದಿದ್ದರೆ

ಸಹಕಾರಿಸಂಘಗಳು ಚೆನ್ನಾಗಿ ನಡೆಯುವುದಿಲ್ಲವೆಂಬುದಕ್ಕೆ ನೀವು ಕೊಟ್ಟಿರುವ ಈ ವರದಿಯೇ ಸಾಕ್ಷಿಯಾಗಿದೆ. ಒಂದೆರಡು ಉದಾಹರಣೆಗಳನ್ನು ಕೊಡಬೇಕೆಂದರೆ, ಸೆಂಟ್ರಲಿ ಸ್ಪಾನ್‌ಸಾರ್ಡ್ ಸ್ಕೀಮಿನ ಮೂಲಕ ನಮ್ಮ ರಾಜ್ಯಕ್ಕೆ ೧.೬೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಅದರಲ್ಲಿ ೪೦ ಲಕ್ಷ ರೂಪಾಯಿಗಳನ್ನು ಅಂದರೆ ನಾಲ್ಕನೇ ಒಂದು ಭಾಗದಷ್ಟು ಹಣವನ್ನು ಮಾತ್ರ ಖರ್ಚು ಮಾಡಿದ್ದಾರೆ. ಅದೇ ರೀತಿ ಎನ್. ಸಿ. ಡಿ. ಸಿ. ಸ್ಕೀಮಿನಲ್ಲಿ ೭.೮೧ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದರೆ ಅದರಲ್ಲಿ ೪.೭ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದೇ ತಮಿಳುನಾಡು ಮತ್ತು ಕೇರಳಾ ಸರ್ಕಾರದವರು ಕೇಂದ್ರದಿಂದ ಬರುವ ಹಣವನ್ನೆಲ್ಲಾ ಖರ್ಚು ಮಾಡುವುದರ ಜೊತೆಗೆ ತಮ್ಮ ದುಡ್ಡನ್ನು ಸಹ ಖರ್ಚು ಮಾಡುತ್ತಾರೆ. ಇದರ ಜೊತೆಗೆ ಅವರುಗಳು ತಮ್ಮ ರಾಜ್ಯದ ಅಧಿಕಾರಿಯೊಬ್ಬರನ್ನು ದೆಹಲಿಯಲ್ಲಿಟ್ಟು ಮಾರ್ಚ್ ೩೧ರೊಳಗೆ ಖರ್ಚಾಗದೆ ಲ್ಯಾಪ್ಸ್ ಆಗಿ ಕೆಲವು ರಾಜ್ಯಗಳಿಂದ ವಾಪಸ್ ಬರುವಂತಹ ಹಣವನ್ನು ಸಹ ಪಡೆದುಕೊಳ್ಳುತ್ತಾರೆ. ಇದರಿಂದಲೇ ತಿಳಿಯುತ್ತದೆ. ನಮ್ಮ ರಾಜ್ಯದ ಅಧಿಕಾರಿಗಳು ಎಷ್ಟು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾರೆ ಎಂಬುದು. ನಾನು ಈ ಸಂದರ್ಭದಲ್ಲಿ ಮಾನ್ಯ ಸಹಕಾರ ಮಂತ್ರಿಗಳಿಗೆ ತಿಳಿಸುವುದೇನೆಂದರೆ, ತಾವು ಡಿಸೆಂಬರ್‌ನಲ್ಲಿ ಸೆಂಟ್ರಲ್ ಸೆಕ್ಟರ್‌ನ ಸ್ಪಾನ್‌ಸಾರ್ಡ್ ಸ್ಕೀಂನಲ್ಲಿ ಎಷ್ಟು ದುಡ್ಡು ಉಳಿದಿದೆ ಅನ್ನುವುದನ್ನು ನೋಡಿ, ಆ ದುಡ್ಡನ್ನು ಮಾರ್ಚಿ ಕೊನೆಯೊಳಗೆ ಖರ್ಚು ಮಾಡಬೇಕಾದ್ದು ನಿಮ್ಮ ಆದ್ಯಕರ್ತವ್ಯ ಪೂರ್ತಿ ಖರ್ಚು ಮಾಡಬೇಕಾಗಿತ್ತು, ಆದರೆ ಆ ರೀತಿ ಮಾಡಿಲ್ಲಾ. ಇನ್ನು ಮುಂದಾದರೂ ಕೂಡ ಅಂದರೆ ಮುಂದಿನ ವರ್ಷವಾದರೂ ಸಹ ಪೂರ್ತಿ ಖರ್ಚು ಮಾಡುತ್ತಾರೆಂದು ನಾನು ಆಸೆಪಟ್ಟುಕೊಂಡಿದ್ದೇನೆ. ಸಹಕಾರ ಸಂಘಗಳಲ್ಲಿ ನಿಷ್ಠೆ ಇರುವ ಅಧಿಕಾರಿಗಳು ಇದ್ದಾರೆ, ಇಲ್ಲ ಎಂತಲ್ಲ, ಅಂದರೆ ಈ ಸೊಸೈಟಿಗಳಲ್ಲಿ ಎಲ್ಲಾ ಪಾರ್ಟಿಗಳ ಸದಸ್ಯರೂ ಇರುವುದರಿಂದ ಅವರ ಜೊತೆಯಲ್ಲಿ ಅಧಿಕಾರಿಗಳು ರಾಜಕೀಯವಾಗಿ ಪ್ರಸ್ತಾಪ ಮಾಡಬಾರದು. ನಾನು ನೋಡಿದಂತೆ ಎಲ್ಲ ಇಲಾಖೆಗಳಲ್ಲಿ ರಾಜಕೀಯ ಇರುತ್ತದೆ. ಇದರ ಆಧಾರದ ಮೇಲೆ ಚುನಾವಣೆ ನಡೆಯುವುದು. ನಂತರ ಚುನಾವಣೆಯಾದ ಮೇಲೆ, ಈಗ ಸರ್ಕಾರದವರು ನಾಮಿನೇಷನ್ ಅನ್ನುವ ಒಂದು ಪದ್ಧತಿ ಇಟ್ಟುಕೊಂಡಿರುವುದರಿಂದ ಆ ಚುನಾವಣೆಯಲ್ಲಿ ಆಡಳಿತದ ಪಕ್ಷದ ಸಂಖ್ಯೆ ಕಡಿಮೆ ಏನಾದರೂ ಬಂದರೆ, ೧-೨-೩ ಕಡಿಮೆ ಬಂದರೆ ನಾಮಕರಣದ ಮೂಲಕ ನೇಮಕ ಮಾಡಿಬಿಡುತ್ತಾರೆ ಹೀಗೆ ಮಾಡುವುದರಿಂದ ಇದರಲ್ಲಿ ಭ್ರಷ್ಟಚಾರ ನಡೆಯುವುದಕ್ಕೆ ಅವಕಾಶ ಇದೆ. ಕೆಲವರು ಇದಕ್ಕೆ ಅಧಿಕಾರಿಗಳನ್ನು ಉಪಯೋಗಿಸುತ್ತಾರೆ, ಸಮಯ ಬಂದರೆ ಮಂತ್ರಿಗಳನ್ನೂ ಸಹ ಉಪಯೋಗಿಸಿಕೊಳ್ಳುತ್ತಾರೆ. ಆದುದರಿಂದ ನಾನು ಈ ಬಗ್ಗೆ ಹೇಳುವುದೇನೆಂದರೆ, ಸರ್ಕಾರ ಎಲ್ಲಿಯವರೆಗೆ ಹಸ್ತಕ್ಷೇಪ ಮಾಡುವುದಿಲ್ಲವೋ ಅಲ್ಲಿಯವರೆಗೂ ಈ ಸಹಕಾರೀ ಸಂಸ್ಥೆಗಳ ಕೆಲಸ ಚೆನ್ನಾಗಿ ನಡೆಯುವುದಿಲ್ಲ, ನಿಮಗೆ ನಾನು ಒಂದು ಉದಾಹರಣೆ ಕೊಡಬಲ್ಲೆ. ಪಾಂಡವಪುರ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರು ಏನು ಇದ್ದಾರೆ. ಅವರು ತಮ್ಮ ಕೆಲಸದಲ್ಲಿ ಬಹಳ ನಿಷ್ಠೆಯಿಂದ ಕೆಲಸ ಮಾಡಿಕೊಂಡು ಬರುತ್ತಿದ್ದಾರೆ. ಎಂದು ಹೇಳುತ್ತೇನೆ. ಅವರು ಅಲ್ಲಿಯ ಕ್ಯಾಂಟೀನ್‌ಗೆ ಹೋಗುವುದಿಲ್ಲ, ಅವರು ಮೈಸೂರಿನಿಂದ ಬರುವಾಗಲೇ ಊಟ ತೆಗೆದುಕೊಂಡು ಬಂದು ಊಟ ಮಾಡಿಕೊಳ್ಳುತ್ತಾರೆ. ಯಾರಾದರೂ ನಮ್ಮಂಥಾ ಸ್ನೇಹಿತರು ಹೋದರೆ ಅಲ್ಲಿಯ ತಮ್ಮ ಕೈಯಿಂದ ದುಡ್ಡು ಕೊಟ್ಟು ಗೆಸ್ಟ್ ಹೌಸ್‌ನಿಂದ ಏನಾದರೂ ತರಿಸಿ ಕೊಡುವುದಕ್ಕೆ ಹೋಗುತ್ತಾರೆ ಇನ್ನೊಬ್ಬರ ಹತ್ತಿರ ದುಡ್ಡು ಕೊಡಿಸುವುದಕ್ಕೇ ಹೋಗುವುದಿಲ್ಲ. ಅವರು ಅಂಥಾ ನಿಷ್ಠಾವಂತರು. ಸರ್ಕಾರ ಅವರನ್ನು ನಾಮಿನೇಷನ್ ಮುಖಾಂತರ ನೇಮಿಸಿರುವುದು. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ನಿಷ್ಠಾವಂತ ಅಧಿಕಾರಿಗಳು ಇದ್ದಾರೆ ಇಲ್ಲ ಎಂತಲ್ಲ. ತಮಗೆ ಈ ಸಂದರ್ಭದಲ್ಲಿ ಹೊರರಾಜ್ಯದ ಒಂದು ಉದಾಹರಣೆಯನ್ನು ಕೊಡಬಯಸುತ್ತೇನೆ. ಗುಜರಾತ್‌ನಲ್ಲಿ ಒಂದು ಸಹಕಾರೀ ತತ್ವದ ಮೇಲೆ ನಡೆಯುತಕ್ಕಂಥಾ ಒಂದು ಸಂಸ್ಥೆ ಎಷ್ಟರಮಟ್ಟಿಗೆ ನಡೆಯುತ್ತಾ ಇದೆ ಅನ್ನುವುದನ್ನು ಹೇಳಬಯಸುತ್ತೇನೆ. ಅದು ಅಮೂಲ್ ಡೈರಿ, ಆ ಸಂಸ್ಥೆಯಲ್ಲಿ ನಿಷ್ಠಾವಂತ ಅಧಿಕಾರಿಯಾದ ಶ್ರೀ ಕುರಿಯನ್ ಅನ್ನುವವರು ಕೆಲಸ ಮಾಡುತ್ತಿದ್ದಾರೆ. ಅಲ್ಲಿ ಸರ್ಕಾರೀ ಹಸ್ತಕ್ಷೇಪ ಯಾವುದೇ ಆಗಲಿ ನಡೆಯುತ್ತಾ ಇಲ್ಲ. ಇದರಿಂದಾಗಿ ಆ ಒಂದು ಸಂಸ್ಥೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತಿ ಹೊಂದುವ ಹಾಗೆ ಮಾಡಿದ್ದಾರೆ. ಅಂಥವರು ನಮ್ಮ ರಾಜ್ಯದಲ್ಲಿ ಸಿಗುವುದಿಲ್ಲವೇ, ಸಿಕ್ಕುತ್ತಾರೆ, ಆದರೆ ಅಂಥವರಿಗೆ ಸರ್ಕಾರದವರು ಪುರಸ್ಕಾರ ಕೊಡುವುದಿಲ್ಲ, ಒಂದು ವೇಳೆ ಅಂಥ ಅಧಿಕಾರಿಗಳಾಗಲಿ, ಅಂಥ ನಿಷ್ಠೆ ಉಳ್ಳ ರಾಜಕಾರಿಣಿಗಳು ಸಿಕ್ಕಿದರೂ ಕೂಡ ತಕ್ಷಣವೇ ಬದಲಾಯಿಸಿ ಬಿಡುತ್ತಾರೆ, ಇದರಿಂದ ನೀವು ಯಾವ ಗುರಿಯನ್ನೂ ಮುಟ್ಟುವುದಿಲ್ಲ.

ಇನ್ನು ಭ್ರಷ್ಟಾಚಾರದ ಬಗ್ಗೆ ಎಲ್ಲಾ ಸ್ನೇಹಿತರೂ ಕೂಡ ಹೇಳಿರುವುದರಿಂದ ನಾನು ಹೇಳುವುದಕ್ಕೆ ಹೋಗುವುದಿಲ್ಲ. ತಮ್ಮ ಈ ಒಂದು ಆಡಿಟ್ ರಿಪೋರ್ಟ್‌ನಲ್ಲಿ ೫ ಸೊಸೈಟಿಗಳನ್ನು ಆಡಿಟ್ ಮಾಡಿದರಿಂದ ೪೦–೫೦ ಲಕ್ಷದವರೆಗೆ ಮಿಸ್ ಅಪ್ರೋಪ್ರಿಯೇಷನ್ ಆಗಿದೆ ಅಂತ ಹೇಳಿದ್ದೀರಿ, ಇನ್ನು ಎಲ್ಲಾ ಸೊಸೈಟಿಗಳನ್ನೂ ಆಡಿಟ್ ಮಾಡಿದರೆ ಒಟ್ಟು ೪–೫ ಕೋಟಿ ರೂಪಾಯಿಗಳಾಗಬಹುದು, ಅಷ್ಟು ಸೊಸೈಟಿಗಳನ್ನು ತಾವು ಏತಕ್ಕೆ ಆಡಿಟ್ ಮಾಡಿರಲಿಲ್ಲಾ, ತಮಗೇನಾದರೂ ಈ ಇಲಾಖೆಯಲ್ಲಿ ಸಿಬ್ಬಂದಿಯ ಕೊರತೆ ಏನಾದರೂ ಇತ್ತೇ ! ಹಿಂದೆ ಈ ಆಡಿಟ್ ಬಗ್ಗೆ ಕೆಲವೊಂದು ಅಮೆಂಡ್‌ಮೆಂಟ್ಸ್ ತಂದು ಪಾಸ್ ಮಾಡಿಸಿದಿರಿ, ಅದನ್ನು ಇದುವರೆಗೂ ಜಾರಿಗೆ ತರಲಿಲ್ಲ. ಅದನ್ನು ಜಾರಿಗೆ ತಂದಿದ್ದರೆ ಸ್ವಲ್ಪಮಟ್ಟಿಗಾದರೂ ಭ್ರಷ್ಟಾಚಾರ ಕಡಿಮೆಯಾಗುತ್ತಿತ್ತು. ಆದಕ್ಕೆ ನಾನು ಹೇಳುವುದೇನೆಂದರೆ, ಈ ಆಡಿಟ್ ವ್ಯವಸ್ಥೆಯಲ್ಲಿ ಸ್ವಲ್ಪ ಬದಲಾವಣೆ ಮಾಡಿ ಅದನ್ನು ಕಂಪನಿ ಆಕ್ಟ್ ಪ್ರಕಾರ ಆಡಿಟ್ ಮಾಡುವ ಹಾಗೆ ಮಾಡಿದರೆ ಸ್ವಲ್ಪ ಮಟ್ಟಿಗೆ ಮಿಸ್ ಅಪ್ರೋಪ್ರಿಯೇಷನ್ ಆಗುವುದು ಕಡಿಮೆಯಾಗುತ್ತದೆ. ತಮಗೆ ಹೇಳಬೇಕಾದರೆ, ಕಂಪನಿ ಆಡಿಟ್ ಪ್ರಕಾರ ಆಡಿಟ್ ಮಾಡಿದರೆ ಡೈರೆಕ್ಟರ್ಸ್ ಹುಷಾರಾಗಿರುತ್ತಾರೆ, ಮತ್ತು ಇದಕ್ಕೆ ಯಾರು ಜವಾಬ್ದಾರರು, ಅವರ ಮೇಲೆ ತಪ್ಪು ಹೊರಿಸುತ್ತಾರೆ. ಈ ಕಂಪನಿ ಆಕ್ಟ್‌ನಲ್ಲಿ ಈ ಒಂದು ಪ್ರಾವಿಷನ್ ಕೊಟ್ಟಿರುವುದರಿಂದ ಒಂದು ವೇಳೆ ಯಾರಾದರೂ ಮಿಸ್ ಅಪ್ರೋಪ್ರಿಯೇಷನ್ ಮಾಡಿದ್ದರೆ ಅವರು ಅದಕ್ಕೆ ಜವಾಬ್ದಾರರಾಗಿರುತ್ತಾರೆ, ಎರಡನೇಯದು, ಅದನ್ನು ಆಡಿಟ್ ಮಾಡಿಸದೇ ಹೋದರೆ, ಡೈರಕ್ಟರ್ಸ್ ಜವಾಬ್ದಾರರಾಗಿರುತ್ತಾರೆ, ಹೀಗೆ ಎರಡೂ ಕಡೆಯಿಂದ ಇದು ಜವಾಬ್ದಾರಿಯಾಗಿರುವುದರಿಂದ ಇದರಲ್ಲಿ ಹಣದ ದುರುಪಯೋಗವಾಗುವುದಕ್ಕೆ ಅವಕಾಶ ಇಲ್ಲ. ಆದುದರಿಂದ ತಾವು ಕಂಪನಿ ಆಡಿಟ್ ಯಾವ ರೀತಿ ಇದೆಯೋ ಆ ರೀತಿಯಾಗಿ ಇದರಲ್ಲೂ ಇರುವ ಹಾಗೆ ಈ ಕೋಆಪರೇಟೀವ್ ಆಕ್ಟ್‌ನಲ್ಲಿ ಒಂದು ತಿದ್ದುಪಡಿ ತರಬೇಕು ಎಂದು ಸೂಚಿಸಬಯಸುತ್ತೇನೆ.

ಇನ್ನು ರೈತನಿಗೆ ರಿಲೀಫ್ ಕೊಡುವ ವಿಚಾರ. ಇದನ್ನು ಎಲ್ಲರೂ ಹೇಳಿದ್ದಾರೆ ಆದರೂ ಸಹ ಕೆಲಸ ಸರಿಯಾಗಿ ಆಗುತ್ತಾ ಇಲ್ಲ, ಪದೇ ಪದೇ ಹೇಳಿದರೂ ಕೂಡ ಗೋರ್ಕಲ್ಲ ಮೇಲೆ ಮಳೆ ಸುರಿದಂತೆ ಆಗಿದೆ. ಎಷ್ಟು ಹೇಳಿದರೂ ಸರಿಯಾಗಿ ಕೆಲಸಮಾಡುವುದಿಲ್ಲ, ಒಂದು ಬಂಡೆ ಮೇಲೆ ನೀರು ಸುರಿದು ಸುರಿದು ಅನೇಕ ವರ್ಷಗಳಾದ ಮೇಲೆ ಸ್ವಲ್ಪ ಮಟ್ಟಿಗೆ ಕರಗುವ ಹಾಗೆ ನಾವು ಪದೇ ಪದೇ ಹೇಳಿದರೆ ಆವಾಗ ಸರ್ಕಾರದ ಮನಸ್ಸಿಗೆ ಸ್ವಲ್ಪ ತಾಕಬಹುದೆಂದು ಇದನ್ನು ಹೇಳುತ್ತಿದ್ದೇನೆ. ಈಗ ಈ ಬಗ್ಗೆ ತಮ್ಮ ಹತ್ತಿರ ೫ ಲಕ್ಷ ಅರ್ಜಿಗಳು ಬಂದಿವೆ. ಒಬ್ಬೊಬ್ಬ ಒಂದು ಅರ್ಜಿಗೆ ೧೦೦–೧೦೦ ರೂಪಾಯಿ ಖರ್ಚು ಮಾಡಿದ್ದಾನೆ ಅಂತ ಇಟ್ಟುಕೊಂಡರೂ ಕೂಡ ಒಟ್ಟು ೫ ಕೋಟಿ ರೂಪಾಯಿಗಳು ಖರ್ಚಾಗಿದೆ. ನೀವು ಕೊಟ್ಟಿರುವ ರಿಲೀಫ್ ನೋಡಿದರೆ ೧೨ ಸಾವಿರ ಜನಕ್ಕೆ ೭೦ ಲಕ್ಷ ರೂಪಾಯಿ ಅಷ್ಟು ಕೊಟ್ಟಿದ್ದೀರಾ, ಇದು ಏನೇನೂ ಸಾಲದು ಆದುದರಿಂದ ಇದನ್ನು ತಾವು ಪುನರ್ವಿಮರ್ಶೆ ಮಾಡಿ ಆ ಬಡ ರೈತರಿಗೆ ಸಹಾಯ ಮಾಡಿ ಎಂದು ಕೇಳುತ್ತೇನೆ. ನಮ್ಮ ಸರ್ಕಾರೀ ನೌಕರರಿಗಾದರೆ ಧಾರಣೆಮಾಸಿ ಹೆಚ್ಚಾದಂತೆಲ್ಲಾ ಒಂದೊಂದು ಇನ್‌ಸ್ಟಾಲ್‌ಮೆಂಟ್ ಡಿ. ಎ. ಕೊಟ್ಟುಕೊಂಡು ಅವರಿಗೆ ೨೦–೩೦ ಕೋಟಿ ರೂಪಾಯಿಗಳವರೆಗೆ ಹೆಚ್ಚು ಖರ್ಚುಮಾಡುತ್ತೀರಿ, ಆದರೆ ಈ ಬಡ ರೈತರಿಗೆ ಅದೇ ಸಹಾನುಭೂತಿ ತೋರಿಸಿ ಮಾಡಬಾರದೇ ? ಈಗ ಬಂದಿರತಕ್ಕಂಥಾ ೫ ಲಕ್ಷ ಅರ್ಜಿಗಳನ್ನೂ ಸಹ ಪುನರ್‌ಪರಿಶೀಲಿಸಿ ಅವರಿಗೆ ರಿಲೀಫ್‌ಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ನಿರುಪಯುಕ್ತ ಬಾವಿಗಳ ವಿಚಾರದ ಬಗ್ಗೆ ಹೇಳುವುದಾದರೆ, ಇದ್ದು ಕೋಲಾರ ಜಿಲ್ಲೆಯಲ್ಲಿ ಯಾವಾಗ ಜಾರಿಗೆ ಬಂತು ಅನ್ನುವುದನ್ನು ಹೇಳುತ್ತೀರಾ ? ನಾನ ಇದೇ ಸಂದರ್ಭದಲ್ಲಿ ಒಂದು ಮಾತು ಕೇಳುವುದೇನೆಂದರೆ ಈ ಒಂದು ಯೋಜನೆ ಬರುವುದಕ್ಕಿಂತ ಮುಂಚಿತವಾಗಿ ಕೆಲವು ಬಾವಿಗಳಲ್ಲಿ ಏನು ನೀರು ಬಂದಿರಲಿಲ್ಲ ಅದನ್ನೂ ಸಹ ಇದಕ್ಕೆ ಸೇರಿಸಿಕೊಳ್ಳುತ್ತೀರಾ ? ಈ ಒಂದು ವಿಚಾರ ಸರ್ಕಾರದ ಗಮನಕ್ಕೂ ಬಂದಿದೆ, ಡೆವಲಪ್‌ಮೆಂಟ್ ಕಮೀಷನರ್ ಗಮನಕ್ಕೂ ಬಂದಿದೆ, ನಿಮ್ಮ ಇಲಾಖೆಯ ಗಮನಕ್ಕೂ ಬಂದಿದೆ, ಆದ ಕಾರಣ ಇದನ್ನು ದಯವಿಟ್ಟು ನೋಡಿಸಿ ಎಂದು ಹೇಳುತ್ತೇನೆ.

ಇನ್ನೊಂದು ವಿಚಾರ ಏನೆಂದರೆ, ಈ ಒಂದು ಸಹಕಾರೀ ತತ್ವ ಏನು ಇದೆ, ಇದು ಸರಿಯಾಗಿ ನಡೆಯುವಂತೆ ನೋಡಿಕೊಳ್ಳಬೇಕು. ತಮಗೆ ಒಂದು ಉದಾಹರಣೆ ಹೇಳುವುದಾದರೆ ಪಾಂಡವಪುರ ಸಹ

ಕಾರಿ ಸಕ್ಕರೆ ಕಾರ್ಖಾನೆ ಏನು ಇದೆ ಅಲ್ಲಿ ಪ್ರಾಫಿಟ್ ಬಂದು ಬೋನಸ್ ಸಹ ಕೊಟ್ಟಿದ್ದಾರೆ. ಬೇರೆಯವರು ಯಾರೂ ಕೊಟ್ಟಿಲ್ಲ. ಬೇರೆಯವರೂ ಸಹ ಹಾಗೇಕೆ ಕೆಲಸಮಾಡಬಾರದು. ಅವರು ಹೋದ ವರ್ಷ ಟನ್ ಕಬ್ಬು ಒಂದಕ್ಕೆ ೨೨೦ ರೂಪಾಯಿನಂತೆ ಕೊಟ್ಟು ಲಾಭ ಮಾಡಿದ್ದಾರೆ. ಕೆಲವರಿಗೆ ಆ ರೀತಿ ತೆಗೆದುಕೊಳ್ಳುವುದಕ್ಕೆ ತಾವು ಅನುಮತಿಕೊಡಲಿಲ್ಲಾ. ಈ ಸಾರಿ ಆ ರೈತರು ಟನ್ ಒಂದಕ್ಕೆ ೨೭೫ ರೂಪಾಯಿ ಕೇಳುತ್ತಿದ್ದಾರೆ ಅದಕ್ಕೆ ಸರ್ಕಾರದವರು ಹೇಳುವುದೇನೆಂದರೆ, ಅಷ್ಟು ದುಡ್ಡು ಕೊಟ್ಟರೆ ನಮಗೆ ನಷ್ಟವಾಗುತ್ತದೆ, ಅಲ್ಲದೇ ಬೇರೆಯವರೂ ಸಹ ಹಾಗೆ ಕೇಳುತ್ತಾರೆ ಎಂದು ಹೇಳುತ್ತಾರೆ. ಇವರ ಹಾಗೆ ಬೇರೆಯವರೂ ಸಹ ಪ್ರಾಫಿಟ್ ಏಕೆ ಮಾಡಬಾರದು ? ಯಾವುದಾದರೂ ಒಂದು ಸಹಕಾರೀ ಸಂಸ್ಥೆ ಚೆನ್ನಾಗಿ ಕೆಲಸ ಮಾಡಿದರೆ ಅದಕ್ಕೆ ಸರ್ಕಾರ ಪ್ರೋತ್ಸಾಹ ಕೊಡುವುದು ಸರ್ಕಾರದ ಆದ್ಯಕರ್ತವ್ಯ ಎಂದು ನಾನು ಭಾವಿಸುತ್ತೇನೆ.

ಇನ್ನು ತಾವು ಈ ಸಹಕಾರೀ ಸಂಸ್ಥೆಗಳಿಗೆ ೧೦೨ ಕೋಟಿ ರೂಪಾಯಿ ಬಂಡವಾಳ ಹಾಕಿದ್ದೀರಿ. ಆದ್ದರಿಂದ ೩ ಕೋಟಿ ರೂಪಾಯಿ ಡಿವಿಡೆಂಟ್ ಬರುತ್ತದೆ, ಅದೇ ರೀತಿಯಾಗಿ ಕ್ರೆಡಿಟ್ ಕೋಆಪರೇಟೀವ್ಸ್‌ನಲ್ಲೂ ಒಂದು ಲಕ್ಷ ಬಂದಿವೆ, ಈ ಷುಗರ್‌ಫ್ಯಾಕ್ಟರಿಗಳಿಗೆ ನೀವು ಇನ್‌ವೆಸ್ಟ್ ಏನು ಮಾಡಿದ್ದೀರಿ ಆದರಿಂದ ಬಂದಿರತಕ್ಕಂಥಾದ್ದು ೨೫ ಲಕ್ಷ, ಅದೇ ರೀತಿ ಸ್ಪಿನ್ನಿಂಗ್ ಮಿಲ್‌ಗೆ ೧೨ ಲಕ್ಷ ರೂಪಾಯಿಗಳನ್ನು ಏನು ಇನ್‌ವೆಸ್ಟ್ ಮಾಡಿದ್ದೀರಿ, ಆದರಿಂದ ಬಂದಿರತಕ್ಕಂಥಾದ್ದನ್ನು ನೋಡಿದರೆ ಬರೇ ೫ ಲಕ್ಷ ಮಾತ್ರ. ಈ ಕೋಆಪರೇಟೀವ್ ಷುಗರ್ ಫ್ಯಾಕ್ಟರಿಗೂ ಮತ್ತು ಸ್ಪಿನ್ನಿಂಗ್ ಮಿಲ್‌ಗೂ ಏನು ಇನ್‌ವೆಸ್ಟ್ ಮಾಡಿದ್ದೀರಿ ಅದನ್ನು ಲಾಭ ಬರುವ ರೀತಿಯಲ್ಲಿ ಮಾಡಬೇಕಾದ್ದು ನಿಮ್ಮ ಆದ್ಯಕರ್ತವ್ಯ, ಎಂದು ನಾನು ಭಾವಿಸುತ್ತೇನೆ.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ವಿಚಾರದಲ್ಲಿ ಹೇಳುವುದಾದರೆ ಈ ಬಗ್ಗೆ ಏನು ಒಂದು ಆಕ್ಟ್ ತಂದರು ಅದು ಹಿಂದೆ ಆದುದ್ದು. ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಸಹಕಾರೀ ಮಂತ್ರಿಗಳಾಗಿದ್ದಾಗ ತಂದದ್ದು. ಪಟ್ಟಣದ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿರತಕ್ಕಂಥಾ ದಳ್ಳಾಳಿಗಳು ಏನು ಇದ್ದರೆ, ಅವರು ರೈತರಿಗೆ ತೊಂದರೆ ಮಾಡುತ್ತಿದ್ದಾರೆ, ರೈತರನ್ನು ಶೋಷಣೆ ಮಾಡುತ್ತಿದ್ದಾರೆ, ಅದನ್ನು ತಪ್ಪಿಸಬೇಕೆನ್ನುವ ಉದ್ದೇಶದಿಂದ ಈ ಒಂದು ಕಮೀಷನ್ ಏಜೆನ್ಸಿ ಅಂತ ಮಾಡಿದರು. ಈಗ ಅದು ಏನಾಗಿದೆ ಎಂದರೆ, ಈ ಹಿಂದಿನ ದಳ್ಳಾಳಿಗಳು ಏನು ಮಾಡುತ್ತಿದ್ದರು ಅನ್ನುವ ಅನುಭವ ನನಗೆ ಚೆನ್ನಾಗಿ ಗೊತ್ತಿರುವುದರಿಂದ ಹೇಳುತ್ತಿದ್ದೇನೆ, ನಾನು ಚಿಕ್ಕವನಾಗಿದ್ದಾಗ ನಮ್ಮ ತಂದೆಯವರು ಭತ್ತಮಾರುವುದಕ್ಕೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು, ಆದ್ದರಿಂದ ಹಿಂದಿನ ದಳ್ಳಾಳಿಗಳ ವಿಷಯ ಗೊತ್ತಿದೆ. ಇವರು ಹಿಂದಿನ ದಳ್ಳಾಳಿಗಿಂತಲೂ ಮೀರಿದವರು. ಕೆಲವು ದಳ್ಳಾಳಿಗಳು ಈವೊತ್ತಿನ ದಿವಸ ೨೨–೩೦ ಲಕ್ಷ ರೂಪಾಯಿನ ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ. ರೈತನನ್ನು ಎಷ್ಟು ಶೋಷಣೆ ಮಾಡಬೇಕೋ ಅಷ್ಟನ್ನೂ ಮಾಡುತ್ತಿದ್ದಾರೆ. ಈ ರೈತರಿಗೆ ಈಗ ಆಗತಕ್ಕಂಥಾ ಶೋಷಣೆಯನ್ನು ತಪ್ಪಿಸುವುದಕ್ಕೆ ಇಲ್ಲವೇ ಕಡಿಮೆ ಮಾಡುವುದಕ್ಕೆ ಮಾನ್ಯ ಮಂತ್ರಿಗಳು ಗಮನ ಕೊಡಬೇಕು ಎಂದು ಹೇಳಬಯಸುತ್ತೇನೆ

ಇನ್ನು ಸೆಸ್ ವಿಚಾರ. ತಾವು ೨ ಪರ್‌ಸೆಂಟ್ ಸೆಸ್ ಏನು ಹಾಕಿದ್ದೀರಿ, ಇದನ್ನು ವರ್ತಕರ. ಕೊಡುತ್ತಾರೆ ಅಂತ ಏನು ಹೇಳುತ್ತೀರಿ, ಅದು ಆ ರೀತಿ, ಇಲ್ಲ. ನ್ಯಾಯವಾಗಿ ಹೇಳುವುದಾದರೆ ಈ ವರ್ತಕರು ನಿಜವಾಗಿ ಕೊಡುವುದಿಲ್ಲ, ರೈತರಿಗೆ ಇವರು ದುಡ್ಡು ಕೊಡುವಾಗ ಅದರಿಂದ ಹಿಡಿದುಕೊಂಡು ಕೊಡುತ್ತಾರೆ ವಿನಾ, ವರ್ತಕರೇ ಈ ದುಡ್ಡನ್ನು ಕೊಡುವುದಿಲ್ಲ. ಈ ೩ ವರ್ಷದಿಂದ ತಮಗೆ ಇದರಿಂದ ಬಂದಿರತಕ್ಕಂಥಾ ಸೆಸ್ ನೋಡಿದರೆ ೧೯೭೯–೮೦ ರಲ್ಲಿ ೭ ಕೋಟಿ ರೂಪಾಯಿ, ೧೯೮೦–೮೧ರಲ್ಲಿ ೮ ಕೋಟಿ ರೂಪಾಯಿ, ೧೯೮೧–೮೨ ರಲ್ಲಿ ೭½ ಕೋಟಿ ರೂಪಾಯಿ ಬಂದಿದೆ. ಈಗ ವರ್ಲ್ಡ್ ಬ್ಯಾಂಕ್‌ನಿಂದ ೧೦ ಕೋಟಿ ರೂಪಾಯಿಯನ್ನು ಬೇರೆ ತೆಗೆದುಕೊಂಡಿದ್ದೀರಿ, ಈಗಾಗಲೇ ಸುಮಾರು ೨೨ ರೂಪಾಯಿ ಸೆಸ್ ತಮಗೆ ಬಂದಿದೆ. ಆದುದರಿಂದ ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಈ ಸೆಸ್ ಹೊರರಾಜ್ಯದಲ್ಲಿ ಕಡಿಮೆ ಇರುವುದರಿಂದ, ಇದನ್ನು ಕಡಿಮೆ ಮಾಡತಕ್ಕಂಥಾದ್ದು ಒಳ್ಳೆಯದು ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಮಂತ್ರಿಗಳು ರೈತರ ಬಗ್ಗೆ ಬಹಳ ಅನುಕಂಪ ಇರುವವರು, ಆದಕಾರಣ ಈ ರೆಗ್ಯುಲೇಟೆಡ್ ಮಾರ್ಕೆಟ್‌ಗಳು ಯಾವ ರೀತಿಯಲ್ಲಿರಬೇಕು, ಇವುಗಳಿಂದ ರೈತರಿಗೆ ಯಾವ ರೀತಿಯಲ್ಲಿ ಅನುಕೂಲವಾಗಬೇಕು

ಎನ್ನುವುದನ್ನು ಅವರು ತಿಳಿದುಕೊಂಡು ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಸಹಕಾರ ಇಲಾಖೆ ಸಹಕಾರ ತತ್ವದ ಮೇಲೆ ಚೆನ್ನಾಗಿ ನಡೆಯಬೇಕು, ಇದಕ್ಕೆ ಮಾನ್ಯ ಮಂತ್ರಿಗಳು ಇನ್ನೂ ಹೆಚ್ಚಿನ ರೀತಿಯಲ್ಲಿ ಆಸಕ್ತಿ ವಹಿಸಿ ರೈತರ ಬಾಳು ಹಸನಾಗುವಂತೆ ಮಾಡುತ್ತಾರೆಂದು ನಾನು ಆಶಿಸುತ್ತೇನೆ. ಇನ್ನೊಂದು ವಿಷಯವನ್ನು ನಾನು ಕೊನೆಯದಾಗಿ ಹೇಳಬೇಕಾಗಿದೆ. ಈ ಸಹಕಾರ ಸಂಸ್ಥೆಗಳಲ್ಲಿ ರಾಜಕೀಯ ಹಸ್ತಕ್ಷೇಪ ಇರಬಾರದು. ಮಾನ್ಯ ಮಂತ್ರಿಗಳು ತಮ್ಮ ಕಾಲದಲ್ಲಿ ರಾಜಕೀಯ ಹಸ್ತಕ್ಷೇಪ ಸಹಕಾರ ಸಂಸ್ಥೆಗಳಲ್ಲಿ ಇರದಂತೆ ಮಾಡಿದರೆ ಆದೊಂದು ಒಳ್ಳೆಯ ಸಾಧನೆಯೆಂದು ನಾವು ತಿಳಿದುಕೊಳ್ಳುತ್ತೇವೆ. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಸಭೆ ಮುಂದೂಡ್ಲಪಟ್ಟು ನಾಳೆ ೧೨ ಗಂಟೆಗೆ ಸೇರುತ್ತದೆ.

[ಸಭೆಯು ಆರು ಘಂಟೆ ಇಪ್ಪತ್ತೆರಡು ನಿಮಿಷಗಳಿಗೆ ಮುಂದೂಡಲ್ಪಟ್ಟಿತು, ಪುನಃ ೨೩ನೇ ಜೂನ್ ಮಾಹೆ ೧೯೮೨ನೇ ಬುಧವಾರದಂದು ೧೨ ಘಂಟೆಗೆ ಸೇರಲು ನಿಶ್ಚಯಿಸಲಾಯಿತು.]